ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಜುಲೈ-೨೦೧೦ ಸಂಚಿಕೆ-೧೨



ಭೋಪಾಲ್ ದುರಂತ
ಭಾರತೀಯರು
ಕಲಿಯುಬೇಕಾದ ಪಾಠ

ಜುಲೈ-೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ - ೨೦೧೦
ಸಂಪುಟ - ೧೦
ಸಂಚಿಕೆ - ೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ನೀನು ಮಾಡಿದ ಮೂರ್ಖ ನಾ

ಹೆಚ್ಚಿನನುಭವ ಬೇಕೆನಗೆ ; ಎಷ್ಟೆಷ್ಟು
ಹೆಚ್ಚಾಗಿ ಜ್ಞಾನ ಗಳಿಸಿದರು ಸಾಲದು;
ಹೃದಯ ವೈಶಾಲ್ಯವನು ಮತ್ತಷ್ಟು ವಿಸ್ತರಿಸುವ
ಯಾವ ತತ್ವಕ್ಕಾದರು ನನ್ನಲ್ಲಿ ಸುಸ್ವಾಗತ;
ಆತ್ಮವೃದ್ಧಿಯ ಬದ್ಧಶ್ರದ್ಧ ತಪಸ್ಸಿಗೆ
ಸದಾ ನಾನು ಸಿದ್ಧ.

ಅವಕ್ಕಾಗಿ ಕ್ರಿಮಿ ಕೀಟ ಗಿಡ ಗಂಟಿ
ಮೈನ ಗುಬ್ಬಚ್ಚಿ ಗೂಬೆ ಕತ್ತೆ ಕುದುರೆ
ಮಳೆ ಬಿಸಿಲು ಜಲ ಶಿಲೆಯ
ನಾ ಪ್ರಾರ್ಥಿಸಲು ಹಿಂಜರಿಯೆ;
ಬಾಲಕ ಬೀದಿಹೋಕ ತೊತ್ತು ತಿರುಕರಿಂದ
ಬುದ್ಧಿಪಾಠ ಆಶಿಸಬಲ್ಲೆ, ಆರ್ಜಿಸಬಲ್ಲೆ.

ಮನೆ ಭೂಮಿ ವಿತ್ತ ಸೊತ್ತು ಆಡಳಿತ
ಪ್ರಸಿದ್ಧಿ ಮೊದಲಾದ ಐಹಿಕ ಸೌಕರ್ಯಕ್ಕಾಗಿ
ಚಕ್ರವರ್ತಿಯ ಮುಂದೆಯಾದರು
ನಾ ಕೈಯೊಡ್ಡಲಾರೆ; ಅವೆಲ್ಲ
ಅಲ್ಪ ವಸ್ತುಗಳೆಂದು ನನ್ನ ನಿಷ್ಕರ್ಷೆ.
ಅಲ್ಪ ವಸ್ತುಗಳ ಬಯಸಿ
ಬಾಗಲೊಲ್ಲದು ನನ್ನ ತಲೆ.
ನಾ ಮೂರ್ಖ, ನಿಜ;
ನೀನು ಮಾಡಿದ ಮೂರ್ಖ,
ದೇವರದೇವ ಮಾವಿನಕೆರೆಯ ರಂಗಯ್ಯ !

- ಡಾ.ಎಸ್.ವಿ.ರಂಗಣ್ಣ

ವಿಚಾರ ದೀಪ್ತಿ

ಸರ್ಕಾರದ ಈ ಧೋರಣೆಗಳು ಇಲ್ಲಿಗೆ ಮಾತ್ರ ನಿಲ್ಲುವುದಿಲ್ಲ. ಮುಂಬರುವ ದಿನಗಳಲ್ಲಿ, ಖಾಸಗಿ ಮತ್ತು ಸರ್ಕಾರಿ ಒಡಂಬಡಿಕೆಯ ಹಲವು ಯೋಜನೆಗಳು ನಮ್ಮ ಮುಂದೆ ಬಿಚ್ಚಿಕೊಳ್ಳುತ್ತವೆ. ಅಂತಹ ಒಂದು ಒಡಂಬಡಿಕೆ; ನೀರು, ರಸ್ತೆ, ಆಸ್ಪತ್ರೆ.... ಹೀಗೆ ವಿಸ್ತರಿಸುತ್ತಾ ಎಲ್ಲ ರಂಗವನ್ನೂ ಕ್ರಮೇಣ ನುಂಗತೊಡಗುತ್ತದೆ. ಇದರ ನೇರ ಪರಿಣಾಮವೆಂದರೆ, ಇಂತಹ ಒಂದು ಒಡಂಬಡಿಕೆಗೆ ಸ್ಪರ್ಧಾತ್ಮಕವಾಗಿ ತಲೆ ಎತ್ತಬಹುದಾದ ಸಣ್ಣ, ಮಧ್ಯಮ ಗಾತ್ರದ ಕೈಗಾರಿಕೆಗಳನ್ನು ಚಿಗುರುವಾಗಲೇ ಹಿಸುಕಲಾಗುತ್ತದೆ. ಅಮೆರಿಕದಂತಹ ದೊಡ್ಡ ರಾಷ್ಟ್ರದಲ್ಲಿನ ದುರಂತಗಳಂತೆ, ಶೇಕಡಾ ಹತ್ತರಿಂದ ಹದಿನೈದು ಜನ ಬಹುಪಾಲು ಸಮಾಜದ ಹಣೆಬರಹವನ್ನು ಬರೆಯುವ ಸಾಧ್ಯತೆಯೊಂದು ನಮ್ಮ ಮಧ್ಯೆ ನಿಧಾನವಾಗಿ ಆದರೆ ಅಷ್ಟೇ ಸ್ಪಷ್ಟವಾಗಿ ತಲೆ ಎತ್ತುತ್ತಲಿದೆ. ನಮ್ಮ ಈಗಿನ ಕೈಗಾರಿಕೆಯ ನೀತಿಗಳು ಅಂತಹ ಸಾಧ್ಯತೆ ನಿಜವಾಗುವುದನ್ನು ಹೆಚ್ಚು ನಿಖರಗೊಳಿಸುತ್ತಲಿವೆ.

ನಮ್ಮ ಸರ್ಕಾರಕ್ಕೆ, ಈ ದೇಶದ ಸರ್ಕಾರಗಳಿಗೆ ಚಿಂತಿಸಲು ಇನ್ನೂ ಕಾಲವಿದೆ. ನಮ್ಮ ಕೈಗಾರಿಕಾ ನೀತಿಗಳ ಬಗ್ಗೆ ನಾವು ಮರುಚಿಂತಿಸುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಸರ್ಕಾರ ಗಣಿಗಾರಿಕೆ ಕುರಿತಾದ ತನ್ನ ಮೋಹದ ಬಗೆಗೆ ಜನತೆಗೆ ಉತ್ತರಿಸಬೇಕು. ಕಬ್ಬಿಣದ ಬೆಲೆ ಉತ್ತುಂಗ ಕಂಡರೂ, ಬಳ್ಳಾರಿಯ ಬಹುಪಾಲು ಸಮಾಜ ಇನ್ನೂ ಬಡತನದಲ್ಲಿಯೇ ಏಕಿದೆ ಎನ್ನುವುದಕ್ಕೆ ಕರ್ನಾಟಕ ಸರ್ಕಾರ ಉತ್ತರಿಸಬೇಕು. ಈ ಬೃಹತ್ ಸಮಾವೇಶದಲ್ಲಿ ಮಾಡಿಕೊಂಡ ಒಪ್ಪಂದವನ್ನು ಅದು ಪುನರ್ವಿಮರ್ಶಿಸಬೇಕು.

ಜನರ ಕಣ್ಣೀರನ್ನು ಒರೆಸಲು, ಜನರೇ ಕೊಟ್ಟ ಹಣವನ್ನು ದುರುಪಯೋಗ ಪಡಿಸಿಕೊಂಡ ನಮ್ಮ ಕಾಂಗ್ರೆಸ್‌ನಂತಹ ವಿರೋಧ ಪಕ್ಷಗಳು ಇಂತಹ ಪ್ರಶ್ನೆ ಕೇಳುತ್ತೇವೆ ಎನ್ನುವ ನಂಬುಗೆ ನಮ್ಮ ಜನಕ್ಕಿಲ್ಲದುದರಿಂದ ಸರ್ಕಾರವೇ ನಮ್ಮ ಕೈಗಾರಿಕಾ ನೀತಿ ಯಾವ ರೀತಿಯದಿರಬೇಕು ಎನ್ನುವ ಒಂದು ಸಂವಾದವನ್ನು ನಮ್ಮ ಸಮಾಜದ ಜೊತೆ ಮಾಡಬೇಕು. ಬೃಹತ್ ಗಣಿಗಾರಿಕೆಗಳ ಕುರಿತು, ಅದರ ಅಗತ್ಯದ ಕುರಿತು, ಸರ್ಕಾರ ಚಿಂತಿಸಬೇಕು. ಇಂತಹ ಕೈಗಾರಿಕೆಯ ನೀತಿ ಭವಿಷ್ಯದ ಸಮಾಜದ ದೃಷ್ಟಿಯಿಂದ ಕೆಟ್ಟದಾಗುವುದಾದರೆ, ಇಲ್ಲಿಯವರೆಗೆ ಮಾಡಿಕೊಂಡ ಒಪ್ಪಂದವನ್ನು ಕೈಬಿಡುವ ದಾರ್ಷ್ಟ್ಯವನ್ನು ನಮ್ಮ ಸರ್ಕಾರ ತೋರಬೇಕು. ಇಂತಹ ಒಂದು ನಿರ್ಣಯವನ್ನು ನಮ್ಮ ಕನ್ನಡ ಜಗತ್ತು ಸ್ವಾಗತಿಸಬಹುದು ಎನ್ನುವ ನಂಬಿಕೆ ಸರ್ಕಾರಕ್ಕೆ ಇರಬೇಕು. ಮೊಮ್ಮಗನಿಗಾಗಿ ಉಡುಗೊರೆಯನ್ನು ಬಿಟ್ಟುಹೋಗುವ ಪುಣ್ಯಕೋಟಿಯ ಈ ನಾಡು ನಮ್ಮ ನೆಲ, ಜಲದ ರಕ್ಷಣೆಯ ಮಹತ್ವವನ್ನು ಮನಗಾಣಬೇಕು.

– ***ಡಾ.ಅಶೋಕ ಹೆಗಡೆ***

ಭೋಪಾಲ ದುರಂತ ಭಾರತೀಯರು ಕಲಿಯಬೇಕಾದ ಪಾಠ

- ಸುರೇಂದ್ರ ಕೌಲಗಿ

೧೯೮೪ರ ಭೋಪಾಲ ದುರಂತ ಭಾರತೀಯರ ಮೂರ್ಖತನದ ಘಟನೆಗಳ ಸರಣಿಗೆ ಹಿಡಿದ ಕನ್ನಡಿಯಾಗಿದೆ. ಆ ದುರಂತದಿಂದ ಭಾರತೀಯರು ಯಾವ ಪಾಠವನ್ನೂ ಕಲಿತಿಲ್ಲವೆಂಬುದು ಇನ್ನೊಂದು ದುರಂತ. ಅದು ಹೇಗೆಂಬುದನ್ನು ಈಗ ಆಲೋಚಿಸೋಣ. ೧೯೪೭ರಲ್ಲಿ ಇಂಗ್ಲೀಷರು ಸ್ವಾತಂತ್ರ್ಯವನ್ನು ಭಾರತೀಯರಿಗೆ ವಹಿಸಿ ಕೊಟ್ಟರು. ಅಂದರೆ ಇನ್ನು ಮುಂದೆ ಭಾರತವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಎಂಬುದನ್ನು ಸ್ವತಃ ಭಾರತೀಯರೇ ನಿರ್ಧರಿಸಲಿ ಎಂಬುದು ಅದರ ಅರ್ಥವಾಗಿತ್ತು. ಆದರೆ ಹೊಸ ಭಾರತ ಸರ್ಕಾರ ತನ್ನ ಮೊದಲ ಹೆಜ್ಜೆಯಲ್ಲೇ ಎಡವಿತು. ತನ್ನ ಉದ್ಧಾರವಾಗಬೇಕಾದರೆ ತಾನು ಪಶ್ಚಿಮ ದೇಶಗಳ ರಾಜನೀತಿ, ಪಶ್ಚಿಮ ದೇಶಗಳ ಅಭಿವೃದ್ಧಿ ಮಾರ್ಗ, ಪಶ್ಚಿಮ ದೇಶಗಳ ಶಿಕ್ಷಣ ಪದ್ಧತಿ, ಪಶ್ಚಿಮ ದೇಶಗಳ ನಾಗರಿಕತೆಯನ್ನು ಅನುಸರಿಸಬೇಕೆಂದು ತೀರ್ಮಾನಿಸಿತು. ಅತ್ಯುತ್ತಮ ಸಂವಿಧಾನವನ್ನು ರಚಿಸಬೇಕೆಂದು ತೀರ್ಮಾನಿಸಿ ಕೊನೆಗೂ ಪಶ್ಚಿಮ ದೇಶಗಳ ರಾಜ್ಯಶಾಸ್ತ್ರದ ಪ್ರಭಾವಕ್ಕೇ ಒಳಗಾಗಿ ತನ್ನದಾದರೂ ತನ್ನದಲ್ಲವೆಂಬಂಥ ಸಂವಿಧಾನವನ್ನು ರಚಿಸಿಕೊಂಡಿತು. ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಸಂವಿಧಾನದ ಹೆಗ್ಗಳಿಕೆಗೆ ಮಾತ್ರ ಅದು ಪಾತ್ರವಾಯಿತೇ ಹೊರತು, ತನ್ನ ಆತ್ಮದೇಳಿಗೆಯ ಬದಲು ಪಾಶ್ಚಿಮಾತ್ಯ ರಾಷ್ಟ್ರಗಳ ಏಳಿಗೆಗೆ ಕಾರಣವಾಗುತ್ತ ಹೋಯಿತು. ಯಾವ ಸರ್ಕಾರ ಕನಿಷ್ಠ ಆಡಳಿತ ನಡೆಸುತ್ತದೋ ಅದು ಉತ್ತಮ ಸರ್ಕಾರ ಎಂಬ ರಾಜ್ಯಶಾಸ್ತ್ರದ ನುಡಿಗೆ ವಿರುದ್ಧವಾಗಿ ಸ್ವತಂತ್ರ ಭಾರತ ಸರ್ಕಾರದ ಆಡಳಿತ ವೈಖರಿ ಕಳೆದ ಅರವತ್ತೈದು ವರ್ಷಗಳಿಂದ ನಡೆದುಕೊಂಡು ಬಂದಿದೆ. ಸ್ವತಂತ್ರ ಭಾರತ ಸರ್ಕಾರ ರಚಿಸಿದ ಕಾನೂನುಗಳ ಸಂಖ್ಯೆ ಕಾಲಕ್ರಮೇಣ ಹೆಚ್ಚುತ್ತ ಹೋಯಿತು. ತತ್ಫಲವಾಗಿ ನ್ಯಾಯಾಲಯಗಳು ಇತ್ಯರ್ಥವಾಗದ ಕೋಟ್ಯವಧಿ ವ್ಯಾಜ್ಯಗಳ ಗೋಡೌನ್ ಆದವು! ಕಾರ್ಯಾಂಗಕ್ಕೂ, ನ್ಯಾಯಾಂಗಕ್ಕೂ, ರಾಜ್ಯಾಂಗಕ್ಕೂ ಅಂತರಂಗದಲ್ಲಿ ಕೆಲವೊಮ್ಮೆ ಬಹಿರಂಗದಲ್ಲಿ ಶೀತಲ ಸಮರವೇ ಪ್ರಾರಂಭವಾಯಿತು. ಈ ಸಮರದ ಅತ್ಯಂತ ದುಷ್ಪರಿಣಾಮ ಭೋಪಾಲ ದುರಂತದ ಪರ್ಯವಸಾನದಲ್ಲಿ ಪ್ರಕಟಗೊಂಡಿತು. ಭೋಪಾಲದಲ್ಲಿ ಯೂನಿಯನ್ ಕಾರ್ಬೈಡ್ ಕೈಗಾರಿಕೆಯ ವಿಷಪೂರಿತ ಅನಿಲದಿಂದ ಪ್ರಾಣ ಕಳೆದುಕೊಂಡ ಇಪ್ಪತ್ತೈದು ಸಾವಿರ ಅನಾಮಿಕರ ಸಾವು ಒಂದು ಅವಘಡವೇ ಅಥವಾ ಒಂದು ಕೊಲೆಯೇ? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡಬೇಕಾದ ನ್ಯಾಯಾಂಗವೇ ಜಾಣ ಕುರುಡಾಗಿ ವರ್ತಿಸಿದರೆ ಮುಂದೆ ಯಾವ

ಗತಿ? ಭೋಪಾಲ ದುರಂತದ ಸನ್ನಿವೇಶದಲ್ಲಿ ನ್ಯಾಯಾಂಗ, ರಾಜ್ಯಾಂಗ ಮತ್ತು ಕಾರ್ಯಾಂಗ ಇವು ಮೂರೂ ಒಂದುಗೂಡಿ ಇಡೀ ದೇಶದ ಹಿತಕ್ಕೆ, ಅಷ್ಟೇ ಅಲ್ಲ ಇಡೀ ದೇಶದ ಸ್ವಾತಂತ್ರ್ಯಕ್ಕೇ ವಿಪತ್ತನ್ನು ತಂದೊಡ್ಡಿತಲ್ಲ? ಇದರ ಹೊಣೆಗಾರಿಕೆ ಯಾರ ಮೇಲಿದೆಯೆಂದು ತೀರ್ಮಾನಿಸುವವರು ಯಾರು? ಭೋಪಾಲ ದುರಂತಕ್ಕೂ ಮುನ್ನ ಬೋಫೋರ್ಸ್‌ನಂಥ ಇನ್ನೂ ಅನೇಕ ಸಂದರ್ಭಗಳಲ್ಲಿ ಅದು ಕೇಂದ್ರದಲ್ಲಿ ಆಗಿರಬಹುದು, ರಾಜ್ಯಗಳಲ್‌ಇ ಆಗಿರಬಹುದು ಆಗ ಸಂವಿಧಾನದತ್ತ ಮೂರೂ ಅಂಗಗಳಲ್ಲಿ ಅನೈತಿಕ ಒಪ್ಪಂದವಾಗಿ ಸಂವಿಧಾನದ ಮೂಲ ಆಶಯವೇ ಕಡೆಗಣಿಸಲ್ಪಟ್ಟು ಪ್ರಜಾತಂತ್ರ ವ್ಯವಸ್ಥೆಯ ಅಣಕವಾಯಿತಲ್ಲ? ಇಂಥ ಸಂಭ್ರಮಕ್ಕಾಗಿಯೇ ನಾವು ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ ಹಿಡಿದು ೧೯೪೭ರ ಭಾರತ ಬಿಟ್ಟು ತೊಲಗಿ ಎಂಬ ಸ್ವಾತಂತ್ರ್ಯ ಚಳುವಳಿ ವರೆಗೆ ಹೋರಾಟ ನಡೆಸಿದ್ದು? ತ್ಯಾಗ ಮಾಡಿದ್ದು? ಆ ಚಳುವಳಿಯ ಯುಗದಲ್ಲಿದ್ದ ತ್ಯಾಗದ ಮನೋಭಾವನೆ, ದೇಶಾಭಿಮಾನ ಸ್ವಾತಂತ್ರ್ಯದ ನಂತರ ಎಲ್ಲಿ ಹೋದವು? ಸ್ವಾತಂತ್ರ್ಯದೊಂದಿಗೆ ಬಂದ ಅಧಿಕಾರ ಪಡೆಯುವುದಕ್ಕಾಗಿ ದೇಶದ ನಾಯಕರು ನಡೆಸಿದ ಕೆಸರಾಟದಲ್ಲಿ ಅವು ಮಣ್ಣುಪಾಲಾದವು. ಆದ್ದರಿಂದ ಈಗ ತ್ಯಾಗದ ಬದಲು ಭ್ರಷ್ಟತೆ, ದೇಶಾಭಿಮಾನದ ಬದಲು ದೇಶದ್ರೋಹ ದೇಶದಾದ್ಯಂತ ಮೆರೆಯುತ್ತಿವೆ. ಸ್ವಾತಂತ್ರ್ಯ ನಂತರ ಇಂಥ ಪರಿಸ್ಥಿತಿ ಬರುತ್ತದೆಂದು ಮನಗಂಡಿದ್ದ ಗಾಂಧೀಜಿ ೧೨೫ ವರ್ಷ ಬದುಕಬೇಕೆಂದಿದ್ದ ತಮ್ಮ ಇಚ್ಛೆಯನ್ನು ಬಿಟ್ಟು ದೇವರೇ "ನನ್ನನ್ನು ಆದಷ್ಟು ಬೇಗ ಕರೆದುಕೊಂಡು ಹೋಗು" ಎಂದು ಪ್ರಾರ್ಥಿಸುವಂತಾಯಿತು.

ಭೋಪಾಲ ದುರಂತ ಕೇವಲ ಮನುಷ್ಯರ ಸಾವಿನ ಪ್ರಶ್ನೆಯಾಗಿರದೆ ಸ್ವತಂತ್ರ ಭಾರತ ಅನುಸರಿಸಿದ ತಪ್ಪು ಕೈಗಾರಿಕೀಕರಣದ ಪದ್ಧತಿಯ ಪ್ರಶ್ನೆಯೂ ಆಗಿದೆ. ಭೋಪಾಲ ದುರಂತ ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಹಾಗೂ ಕರಾಳ ಕೈಗಾರಿಕಾ ಕ್ಷೇತ್ರದಲ್ಲಿಯ ದುರಂತವೆಂದು ಬಣ್ಣಿಸಲಾಗಿದೆ. ಮುಂದೆ ಇಂಥ ಕೈಗಾರಿಕಾ ದುರಂತಕ್ಕೆ ಕಾರಣವಾಗುವ ಕೈಗಾರಿಕೋದ್ಯಮಿಗಳನ್ನು ಹೊಣೆಗಾರರನ್ನಾಗಿ ಮಾಡುವ ಬಗ್ಗೆ, ಅವರಿಗೆ ಶಿಕ್ಷೆ ಕೊಡುವ ಬಗ್ಗೆ ಸರ್ಕಾರ ಮೀನಮೇಷ ಎಣಿಸುತ್ತಿದೆಯೆಂಬ ಸಂಗತಿಯಂತೂ ಬರಲಿರುವ ಕೈಗಾರಿಕೀಕರಣ ಹಾಗೂ ಅಭಿವೃದ್ಧಿಯಿಂದ ಭಾರತ ಎಂಥೆಂಥ ಕಷ್ಟಕೋಟಲೆಗಳನ್ನು ಅನುಭವಿಸಬೇಕಾಗಿದೆಯೆಂದು ಆಲೋಚಿಸಿದರೆ ಗಾಬರಿಯಾಗುತ್ತದೆ. ಜಗತ್ತಿನ ಇಂದಿನ ಎಲ್ಲ ಪ್ರಕಾರದ ಸಮಸ್ಯೆಗಳಿಗೆ ಪಾಶ್ಚಿಮಾತ್ಯ ದೇಶಗಳು, ಮುಖ್ಯವಾಗಿ ಅಮೇರಿಕಾ ಕಾರಣವಾಗಿದೆಯೆಂಬುದು ನಗ್ನ ಸತ್ಯ. ಭಾರತದಲ್ಲಿ ಅಮೇರಿಕಾದ ಕಾರುಬಾರು ಮತ್ತು ಸ್ವತಂತ್ರ್ಯ ಭಾರತ ಸರ್ಕಾರದ ಅಮೇರಿಕೆಯ ಅಂಧಾನುಕರಣೆ ಸ್ವಾತಂತ್ರ್ಯ ಬಂದು ಮೂರು ದಶಕಗಳಲ್ಲಿಯೇ ಭೋಪಾಲದಲ್ಲಿ ಅಮೇರಿಕ ಮೂಲದ ಯೂನಿಯನ್ ಕಾರ್ಬೈಡ್ ಕಂಪನಿಗೆ ತನ್ನ ಉತ್ಪನ್ನಗಳನ್ನು ಪ್ರಾರಂಭಿಸಲು ಅನುಮತಿಕೊಟ್ಟ ದಿನದಿಂದಲೇ ಪ್ರಾರಂಭವಾಯಿತು. ಯೂನಿಯನ್ ಕಾರ್ಬೈಡ್ ಅಮೇರಿಕ ಮೂಲದ ಕಂಪನಿಯೆಂಬ ಕಾರಣಕ್ಕಾಗಿ ಭಾರತ ಸರ್ಕಾರ ಆ ಕಂಪನಿಯ ಸ್ಥಾಪನೆಗೆ ಅನುಮತಿ ಕೊಡುವಾಗ ಎಲ್ಲ ವಿಧಿವಿಧಾನಗಳನ್ನು ಸಡಿಲಗೊಳಿಸಿತು. ಸ್ವತಂತ್ರ ಭಾರತ ಸರ್ಕಾರಕ್ಕೆ ತನ್ನ ಕೈಗಾರಿಕಾ

ನೀತಿಯ ಬಗ್ಗೆ ಸ್ಪಷ್ಟವಾದ ಕಲ್ಪನೆಯಿದ್ದಿದ್ದರೆ, ಅಗತ್ಯಾಗತ್ಯತೆಯ ವಿವೇಚನೆಯಿದ್ದಿದ್ದರೆ, ಆದ್ಯತನಾದ್ಯತೆಯ ವಿಶ್ಲೇಷಣಾ ಜ್ಞಾನ ಇದ್ದಿದ್ದರೆ ಸ್ವತಂತ್ರ ಭಾರತ ಸರ್ಕಾರ ಯೂನಿಯನ್ ಕಾರ್ಬೈಡ್‌ನಂಥ ಕೈಗಾರಿಕಾ ಕಂಪನಿಗೆ ದೇಶದಲ್ಲಿ ಬರಲು ಅನುಮತಿ ಕೊಡುತ್ತಿರಲಿಲ್ಲ. ಏಕೆಂದರೆ ಸ್ವಾತಂತ್ರ್ಯ ಬಂದ ಅರವತ್ತಮೂರನೇ ವರ್ಷದಲ್ಲಿ ಭಾರತದ ಅಭಿವೃದ್ಧಿಯ ಆದ್ಯತೆಗಳ ಕಲ್ಪನೆ ಸ್ಪಷ್ಟವಾಗಿ ರೂಪುಗೊಂಡಿರಲಿಲ್ಲ. ಒಂದು ವೇಳೆ ರೂಪುಗೊಳ್ಳುತ್ತಿದ್ದರೂ ಅದು ಪಾಶ್ಚಿಮಾತ್ಯ ಕೈಗಾರಿಕಾ ನೀತಿಯ ಪ್ರಭಾವ ವಲಯದಿಂದ ಹೊರಬಂದಿರಲಿಲ್ಲ. ಆಗಿನ ಕಾಲದಲ್ಲಿ ಪ್ರಧಾನವಾಗಿ ಅಮೇರಿಕಾ ಎಲ್ಲದಕ್ಕೂ ಮಾದರಿಯಾಗಿತ್ತು ಮತ್ತು ಅದರ ರಾಜಕೀಯ ಹಾಗೂ ಆರ್ಥಿಕ ಶಕ್ತಿ ಬಲಿಷ್ಠವಾಗಿದ್ದವು. ಸ್ವತಂತ್ರ ಭಾರತ ತನ್ನತನವನ್ನು ಮರೆಯಿತು ಮತ್ತು ತನ್ನ ದೇಶದಲ್ಲಿಯೇ ಅಮೇರಿಕಾತನವನ್ನು ಮೆರೆಸಲಾರಂಭಿಸಿತು. ನಿಧಾನವಾಗಿ ಭಾರತವನ್ನು ಇನ್ನೊಂದು ಇಂಗ್ಲೆಂಡನ್ನಾಗಿಯೋ, ಅಮೇರಿಕೆಯನ್ನಾಗಿಯೋ, ಸಿಂಗಪುರವನ್ನಾಗಿಯೋ ರೂಪಿಸಲು ಪ್ರಾರಂಭಿಸಿತು. ಇದರ ಪರಿಣಾಮವಾಗಿಯೇ ಭಾರತದಲ್ಲಿ 'ಹಸಿರು ಕ್ರಾಂತಿ'ಯನ್ನು ಆಮದು ಮಾಡಿಕೊಳ್ಳಲಾಯಿತು. ಈ ಹಸಿರು ಕ್ರಾಂತಿಗೆ ಭಾರತದ ಋಷಿ ಪರಂಪರೆಯ ಕೃಷಿಯ ಪರಿಚಯವಿರಲಿಲ್ಲ, ಭೂಗುಣ ಗೊತ್ತಿರಲಿಲ್ಲ, ಭಾರತೀಯ ರೈತನ ಅಪಾರ ಕೃಷಿಜ್ಞಾನದ ಪರಿಚಯವಿರಲಿಲ್ಲ. ಕೃಷಿ ಆಧಾರಿತ ಏಳು ಲಕ್ಷ ಹಳ್ಳಿಗಳ ವಿಶಿಷ್ಟ ಜೀವನಶೈಲಿಯ ಗಂಧಗೊತ್ತಿರಲಿಲ್ಲ, ಭಾರತೀಯರ ಸರಳ ಜೀವನಪ್ರೇಮವನ್ನು ತಿಳಿದಿರಲಿಲ್ಲ. ಇಂಥ ಹಿನ್ನೆಲೆಯಲ್ಲಿ 'ಹಸಿರು ಕ್ರಾಂತಿ' ಕೌಬಾಯ್ ವೇಷ ಧರಿಸಿ ಕುದುರೆಗಳ ಬೆನ್ನೇರಿ ಬಂತು. ತನ್ನ ಕುದುರೆಗಳ ಕಾಲಿನ ಧೂಳಿಯಲ್ಲಿ ಭಾರತೀಯತೆಯೆಂಬುದನ್ನೆಲ್ಲ ಮುಚ್ಚಿ ಹಾಕಿತು. ಅದರ ಫಲವಾಗಿ ಭೋಪಾಲ ದುರಂತ ಸಂಭವಿಸಿತು. ಯಾವ ನೆಲದಲ್ಲಿ ಅಮೇರಿಕ ಮತ್ತು ಇತರ ಪಾಶ್ಚಿಮಾತ್ಯ ರೀತಿನೀತಿಗಳನ್ನು ಹೂಳಬೇಕಾಗಿತ್ತೋ ಆ ನೆಲದಲ್ಲಿ ಅಮಾಯಕ ಇಪ್ಪತ್ತೈದು ಸಾವಿರ ಭಾರತೀಯರ ಹೆಣಗಳನ್ನು ಹೂಳಬೇಕಾಯಿತು! ಭೋಪಾಲ ದುರಂತ ಭಾರತೀಯರ ಮೂರ್ಖತನಕ್ಕೆ ಕನ್ನಡಿ ಹಿಡಿದಿದೆಯೆಂಬುದಕ್ಕೆ ಕಾರಣ ಭೋಪಾಲ ದುರಂತವನ್ನು ಡಾಲರ್‌ಗಳ ಲೆಕ್ಕದಲ್ಲಿ ಅಳೆಯಲಾಗುತ್ತಿದೆಯೇ ಹೊರತು ಈಗ ತಾನು ಹಾಕಿಕೊಂಡಿರುವ ಪಾಶ್ಚಿಮಾತ್ಯ ಮಾದರಿಯ ಕೈಗಾರಿಕಾ ನೀತಿ, ಶಿಕ್ಷಣ ನೀತಿ, ಇಂಗ್ಲಿಷ್ ಭಾಷಾ ಮೋಹವನ್ನು ಬದಲಾಯಿಸಿಕೊಳ್ಳಬೇಕೆಂಬ ಬುದ್ಧಿ ಬರದೇ ಇರುವುದಕ್ಕಾಗಿ.

ಈಸ್ಟ್ ಇಂಡಿಯಾ ಕಂಪನಿಯ ಮೆಕಾಲೆ ಇಂಗ್ಲಿಷ್ ಭಾಷೆಯ ಹುಳುವನ್ನು ಭಾರತೀಯರ ತಲೆಯಲ್ಲಿ ಹೊಗಿಸಿ ಭಾರತದ ಸಮಸ್ತ ಜನಜೀವನವನ್ನೇ ಅದರ ಮೂಲನೆಲೆಯಿಂದಲೇ ಕಿತ್ತು ಹಾಕುತ್ತಿರುವಂತೆ ಪಾಶ್ಚಿಮಾತ್ಯ ದೇಶಗಳ 'ಹಸಿರು ಕ್ರಾಂತಿ'ಯಂಥ ಇನ್ನೂ ಅನೇಕ ಪ್ರಕಾರದ ಕ್ರಾಂತಿಗಳು ಸ್ವತಂತ್ರ ಭಾರತವನ್ನು ತಮ್ಮ ಗುಲಾಮ ದೇಶವನ್ನಾಗಿ ಮಾಡಿಕೊಳ್ಳುತ್ತಿವೆ. ಇಂದು ಭಾರತ ತನ್ನ ವಿದೇಶಾಂಗ ನೀತಿಗಾಗಿ, ಆರ್ಥಿಕ ನೀತಿಗಾಗಿ, ಶಿಕ್ಷಣ ನೀತಿಗಾಗಿ, ಕೈಗಾರಿಕಾ ನೀತಿಗಾಗಿ, ರಕ್ಷಣಾ ನೀತಿಗಾಗಿ, ವಿಜ್ಞಾನ ಹಾಗೂ ತಾಂತ್ರಿಕ ಹಾಗೂ ವೈದ್ಯಕೀಯ ಹಾಗೂ ಸಾಂಸ್ಕೃತಿಕ ನೀತಿಗಾಗಿ ಅಮೇರಿಕವನ್ನು ಓಲೈಸುತ್ತಾ ಮುಂಬರಿಯಬೇಕಿದೆ. ಎಲ್ಲಿದೆ ಗ್ಲೋಬಲ

ಸ್ವಾತಂತ್ರ್ಯ? ಎಲ್ಲಿದೆ ೧೯೫೦ರ ಗಣರಾಜ್ಯ? ಎಲ್ಲಿದೆ ನಮ್ಮಯ ಹೆಮ್ಮೆಯ ಸಂವಿಧಾನ? ಆ ಸಂವಿಧಾನದ ಆಶೋತ್ತರಗಳು ಮಣ್ಣು ಮುಕ್ಕಿದವು; ದೇಶದ ಪ್ರಜಾತಂತ್ರ ವ್ಯವಸ್ಥೆ ದುಷ್ಟರ ಕೂಟವಾಗಿ ಪರಿವರ್ತನೆಗೊಂಡಿತು.

ಪಾಶ್ಚಿಮಾತ್ಯ ರೀತಿಯ ನಾಗರಿಕತೆ, ಪಾಶ್ಚಿಮಾತ್ಯ ರೀತಿಯ ಶಿಕ್ಷಣ, ಪಾಶ್ಚಿಮಾತ್ಯ ರೀತಿಯ ಕೈಗಾರಿಕೀಕರಣ, ಪಾಶ್ಚಿಮಾತ್ಯ ರೀತಿಯ ಅಭಿವೃದ್ಧಿ ಮುಂತಾದ ಯಾವುದೇ ಪಾಶ್ಚಿಮಾತ್ಯ ರೀತಿಯ ವಿಷಯ ನಮಗೆ ಬೇಡವೇ ಬೇಡ ಎಂದು ಖಡಾಖಂಡಿತವಾಗಿ, ಆತ್ಮ ವಿಶ್ವಾಸಪೂರ್ಣವಾಗಿ ಗಾಂಧೀ ಹೇಳಿದ್ದರು. ಅವರು ೧೯೦೯ರಲ್ಲಿ ದಕ್ಷಿಣ ಆಫ್ರಿಕಾದ ರಾಜಕಾರಣದ ಸಂಬಂಧವಾಗಿ ಲಂಡನ್ನಿನಲ್ಲಿದ್ದಾಗಲೇ ಪಾಶ್ಚಿಮಾತ್ಯದೆಲ್ಲವನ್ನೂ ನಿರಾಕರಿಸಿದ್ದರು. ಪಾಶ್ಚಿಮಾತ್ಯ ಸಂಸ್ಕೃತಿ ಸೈತಾನ ಸಂಸ್ಕೃತಿಯೆಂದೂ ಬಣ್ಣಿಸಿದ್ದರು. ಆ ಸಂಸ್ಕೃತಿ ಭಾರತಕ್ಕೆ ಸಲ್ಲದೆಂದೂ ಘಂಟಾಘೋಷವಾಗಿ ಆದರೆ ತುಂಬ ವಿನಮ್ರವಾಗಿ ತಿಳಿಸಿದ್ದರು. ೧೯೧೫ಕ್ಕೆ ಗಾಂಧೀಜಿ ಭಾರತಕ್ಕೆ ಮರಳಿದರು. ೧೯೨೦ರಿಂದ ರಾಷ್ಟ್ರದ ರಾಜಕಾರಣದಲ್ಲಿ ಭಾಗವಹಿಸುತ್ತ ಬಂದರು. ರಾಜಕಾರಣ ಜೀವನದ ಪ್ರತಿಯೊಂದು ಕ್ಷೇತ್ರವನ್ನೂ ಸ್ಪರ್ಶಿಸಿದೆ. ಆದ್ದರಿಂದ ರಾಜಕಾರಣವನ್ನು ಆಧ್ಯಾತ್ಮೀಕರಣಗೊಳಿಸಲು ಗಾಂಧೀಜಿ ಬಯಸಿದ್ದರು. ಅವರ ಪಾಲಿಗೆ ಆತ್ಮಶ್ರೀ ವಿದೂರವಾದ ರಾಜಕೀಯ ಸರ್ವಥಾ ತ್ಯಾಜ್ಯವಾದ ಕಲಂಕವಾಗಿತ್ತು. ಭಾರತದ ರಾಜಕಾರಣದ ಶುದ್ಧೀಕರಣಕ್ಕಾಗಿ ಅವರು ಅಖಂಡವಾಗಿ ಮೂವತ್ತೆರಡು ವರ್ಷಗಳ ಕಾಲ ಶ್ರಮಿಸಿದರು. ಒಂದು ವೇಳೆ ಸ್ವತಂತ್ರ ಭಾರತದ ರಾಜಕೀಯ ನಾಯಕರು ಗಾಂಧೀಜಿಯವರ ಸಿದ್ಧಾಂತಕ್ಕೆ ಸಂಪೂರ್ಣ ತಿಲಾಂಜಲಿ ಕೊಡದೇ ಹೋಗಿದ್ದರೆ ೧೯೮೪ರ ಭೋಪಾಲ ದುರಂತ ಖಂಡಿತವಾಗಿಯೂ, ನಿಶ್ಚಿತವಾಗಿಯೂ ಸಂಭವಿಸುತ್ತಿರಲಿಲ್ಲ.

ಭೋಪಾಲದಲ್ಲಿ ಸ್ಥಾಪಿತವಾದ ಯೂನಿಯನ್ ಕಾರ್ಬೈಡ್ ಕಂಪನಿಯ ಮೂಲ ಉದ್ದೇಶ ಬ್ಯಾಟರಿಗಳನ್ನು ತಯಾರಿಸುವುದಾಗಿದ್ದರೂ ಅದಕ್ಕೆ ರಾಸಾಯನಿಕ ಗೊಬ್ಬರಗಳನ್ನೂ ಉತ್ಪಾದಿಸುವುದಕ್ಕೆ ಅನುಮತಿ ಕೊಡಲಾಯಿತು. ಆಗಲೇ ಸಿಂಧ್ರಿಯಲ್ಲಿ ರಾಸಾಯನಿಕ ಗೊಬ್ಬರ ತಯಾರಿಕಾ ಕೈಗಾರಿಕೆಯನ್ನು ಸ್ಥಾಪಿಸಿತ್ತು. ಹಸಿರು ಕ್ರಾಂತಿಯನ್ನು ಮಾಡಹೊರಟಿದ್ದಕ್ಕಾಗಿ ರಾಸಾಯನಿಕ ಕೈಗಾರಿಕೆ ಅನಿವಾರ್ಯವಾಯಿತು. ಯೂನಿಯನ್ ಕಾರ್ಬೈಡ್ ರಾಸಾಯನಿಕ ಗೊಬ್ಬರಕ್ಕಾಗಿ ಬೇಕಾದ ರಾಸಾಯನಿಕ ಅನಿಲವನ್ನು ಉತ್ಪಾದಿಸಲು ತೊಡಗಿತು. ಇದರ ಮುಂದಿನ ದುರಂತ ಜಗಜ್ಜಾಹೀರಾಗಿದೆ. ಯೂನಿಯನ್ ಕಾರ್ಬೈಡ್ ಕಂಪನಿ ದೇಶದ ಒಟ್ಟು ಕೈಗಾರಿಕೀಕರಣ ಮತ್ತು ಅದರೊಂದಿಗೆ ತಳಕು ಹಾಕಿಕೊಂಡಿರುವ ಅಭಿವೃದ್ಧಿ ನೀತಿಗೆ ಬರೆದ ಎಚ್ಚರಿಕೆಯ ಟಿಪ್ಪಣಿಯಾಗಿದೆ. ಅಂದರೆ ಯಾವ ಕೈಗಾರಿಕೆ ಆಯಾ ಸ್ಥಳೀಯ ಪರಿಸ್ಥಿತಿಗೆ ಅಗತ್ಯವಾಗಿಲ್ಲವೋ ಮತ್ತು ಯಾವ ಅಭಿವೃದ್ಧಿ ಆಯಾ ಪರಿಸ್ಥಿತಿಗೆ ಮಾರಕವಾಗಿರುತ್ತದೋ ಅಂಥ ಕೈಗಾರಿಕೆಯನ್ನು ಸ್ಥಾಪಿಸುತ್ತಾ, ಅಭಿವೃದ್ಧಿಯನ್ನು ಸಾಧಿಸುತ್ತಾ ಹೊರಡುವುದು ಮೂರ್ಖತನವೆಂಬುದು ಆ ಟಿಪ್ಪಣಿಯಲ್ಲಿಯ ಸಾರವಾಗಿದೆ. ಇಲ್ಲಿ ಅಮೇರಿಕದ ಅಧ್ಯಕ್ಷ ಥಿಯೋಡರ್ ರೂಸ್‌ವೆಲ್ಟ್ ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. "ನೀನಿರುವೆಡೆ ಏನಿದೆಯೋ ಅದನ್ನೇ ಉಪಯೋಗಿಸಿಕೊಂಡು ನಿನಗೆ ಸಾಧ್ಯವಾದುದನ್ನು ಮಾಡು". ಆದರೆ ಭೋಪಾಲ್‌ನಲ್ಲಿ ಸರ್ಕಾರವು

ಯೂನಿಯನ್ ಕಾರ್ಬೈಡ್‌ಗೆ ಅವಕಾಶ ಕೊಟ್ಟಿದ್ದು ರೂಸ್‌ವೆಲ್ಟ್‌ನ ಮಾತಿಗೆ ವಿರೋಧವಾಗಿದೆ.

ಬೆಳೆಯುತ್ತಿರುವ ದೇಶದ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆಯಾಗಬೇಕು. ಅದರೆ ಉತ್ಪಾದನೆಯನ್ನು ಹೆಚ್ಚಿಸುವ ವಿಧಾನ ಯಾವುದೆಂಬುದನ್ನು ತೀರ್ಮಾನಿಸುವಲ್ಲಿ ನಾವು ಎಡವಿದ್ದೇವೆ. ಕೈಗಾರಿಕೀಕರಣದ ಹಿಂದೆ ವೇಗವಿದೆ; ವೇಗದ ಹಿಂದೆ ದುರಾಸೆಯಿದೆ; ದುರಾಸೆಯ ಹಿಂದೆ ದುರಂತವಿದೆ. ಈ ಮಾತಿನ ಅನುಭವ ಹಸಿರು ಕ್ರಾಂತಿಯ ದೆಸೆಯಿಂದಾಗಿ ಅಗಿದೆ. ಹಸಿರು ಕ್ರಾಂತಿಯ ವಿಚಾರ ಬಂದದ್ದು ಪಶ್ಚಿಮದಿಂದ. ಅಲ್ಲಿಯ ದೇಶಗಳಲ್ಲಿಯ ಕೈಗಾರಿಕೋದ್ಯಮಿಗಳು ಭಾರತೀಯರಿಗೆ ಹಸಿರು ಕ್ರಾಂತಿಯ ಹುಚ್ಚನ್ನು ಹಚ್ಚಿ ತಾವು ಆರ್ಥಿಕವಾಗಿ ಬಲಿಷ್ಠಗೊಳ್ಳಬಹುದೆಂಬ ಇಚ್ಛೆ ಅವರದಾಗಿತ್ತು. ಇಚ್ಛೆ ಎಷ್ಟು ತೀವ್ರವಾಗಿತ್ತೆಂದರೆ ಮುಂದೆ ಎಂದೆಂದಿಗೂ ಭಾರತೀಯರು ಹಸಿರು ಕ್ರಾಂತಿಯಂಥ ಹುಚ್ಚಿನಿಂದ ಹೊರಬಾರದಂಥ ಪರಿಸ್ಥಿತಿಯನ್ನುಂಟು ಮಾಡಬೇಕು. ಆಗ ಒಂದಲ್ಲ ಒಂದು ರೀತಿಯಲ್ಲಿ ಪಶ್ಚಿಮ ದೇಶಗಳಲ್ಲಿಯ ಕೈಗಾರಿಕೆಗೆ ಭಾರತ ವಸಾಹತುವಾಗಿ ಉಳಿಯಬೇಕೆಂಬುದು ಅವರ ಉದ್ದೇಶ್ಯವಾಗಿತ್ತು. ಪಾಶ್ಚಿಮಾತ್ಯ ದೇಶಗಳ ಈ ಉದ್ದೇಶ ಸಂಪೂರ್ಣವಾಗಿ ಇಪ್ಪತ್ತೊಂದನೇ ಶತಮಾನದಲ್ಲಿ ಸಾಧಿತವಾಗಿಬಿಟ್ಟಿದೆ. ಈಗ ಭಾರತದ ಮುಂದೆ ಇರುವ ಪ್ರಶ್ನೆ, ಭಾರತ ಎಲ್ಲ ದೇಶಗಳಂತೆ ಗೊತ್ತುಗುರಿಯಿಲ್ಲದೆ, ಹೊತ್ತುಗೊತ್ತಿಲ್ಲದೆ, ಔಚಿತ್ಯಾನೌಚಿತ್ಯದ ಪ್ರಜ್ಞೆ ಇಲ್ಲದೆ ಅಭಿವೃದ್ಧಿಯ ಮಂತ್ರವನ್ನು ಜಪಿಸುತ್ತ ಕಾಲ ಕಳೆಯಬೇಕೆ, ಪರಿಸರ ಹಾಳು ಮಾಡಬೇಕೆ, ಸದಾ ಯುದ್ಧದ ಭೀತಿಯಲ್ಲಿರಬೇಕೆ ಅಥವಾ ಮಾನವ ಹಾಗೂ ಸಮಸ್ತ ಪ್ರಕೃತಿ ಸಂಕುಲದ ಹಿತವನ್ನು ಬಯಸುವ ಪ್ರತ್ಯೇಕ ದಾರಿಯನ್ನು ಹಿಡಿಯಬೇಕೆ?

೧೯೮೪ರ ಭೋಪಾಲ ದುರಂತ ಮುಂದೆ ಬರುವ ಅನೇಕ ಭೀಕರ ಅಭಿವೃದ್ಧಿ ಪ್ರೇರಿತ ದುರಂತಗಳ ಸಂಕೇತವಾಗಿದೆ. ಆದ್ದರಿಂದ ಭಾರತ ತನ್ನ ಹಿತಕ್ಕಾಗಿ, ಜಗತ್ತಿನ ಹಿತಕ್ಕಾಗಿ ಆಧುನಿಕ ಅಭಿವೃದ್ಧಿ ನೀತಿಯನ್ನು ಕೈಬಿಡಲಿ. ಅದಕ್ಕೆ ಬದಲಾಗಿ ಭಾರತೀಯತೆಯ ಎಲ್ಲ ಗುಣಲಕ್ಷಣಗಳಿರುವ ಅಭಿವೃದ್ಧಿಯ ದಾರಿಯನ್ನು ಹಿಡಿಯಲಿ. ಈ ಸಂಬಂಧವಾಗಿ ಗಾಂಧೀಜಿಯವರ ಈ ಮಾತನ್ನು ಸ್ಮರಿಸಿಕೊಳ್ಳಲಿ:-

"ಜಗತ್ತು ನಿನ್ನನ್ನು ತನ್ನ ಕೆಂಗಣ್ಣಿನಿಂದ ದುರುದುರನೆ ನೋಡಿದರೂ ಸರಿ. ನೀನು ಅದರ ದೃಷ್ಟಿಗೆ ದೃಷ್ಟಿಕೊಟ್ಟು ನಿಲ್ಲಬೇಕಾಗುತ್ತದೆ. ಭೀತಿ ಬೇಡ. ನಿನ್ನ ಹೃದಯದಲ್ಲಿ ನೆಲಸಿ ಹೀಗೆಂದು ಹೇಳುತ್ತಿರುವ ಆ ಅಣುರೂಪಿಯಲ್ಲಿ ನಿನಗೆ ಶ್ರದ್ಧೆಯಿರಲಿ. ಯಾವುದಕ್ಕಾಗಿ ನೀನು ಬದುಕಿದ್ದೀಯೋ, ಯಾವುದಕ್ಕಾಗಿ ನೀನು ಮಡಿಯಬೇಕೋ ಅದಕ್ಕಾಗಿ ಮನೆ-ಮಠ-ಮಡದಿ-ಮಕ್ಕಳು ಸರ್ವಸ್ವವನ್ನೂ ಪರಿತ್ಯಜಿಸು; ಆದರೆ ಸತ್ಯಕ್ಕೆ ಸಾಕ್ಷಿಯಾಗಿ ಬಾಳು. (೯-೮-೧೯೪೨)

* * *

ಬಹುಗುಣರ ಮೂರು A ಗಳು ಮತ್ತು ಐದು F ಗಳು

(ಕಳೆದ ಸಂಚಿಕೆಯಿಂದ ಮುಂದುವರಿದದ್ದು...)

- ಜಾರ್ಜ್ ಆಲ್ಫ್ರೆಡ್ ಜೇಮ್ಸ್- ಕನ್ನಡಕ್ಕೆ : ಸುರೇಂದ್ರ ಕೌಲಗಿ

ಬಹುಗುಣರವರು ನನ್ನ ಕೈ ಕುಲುಕಿ, "ದಯಮಾಡಿ ಒಳ ಬನ್ನಿ. ಕುಳಿತುಕೊಳ್ಳಿ" ಎಂದು ಹೇಳಿದರು. ಆ ಸಾಮಾನ್ಯ ದೇವಸ್ಥಾನದ ಸುತ್ತ ನಿರ್ಮಿಸಲಾಗಿದ್ದ ಸುಣ್ಣ ಬಳಿದ ಕೈಪಿಡಿಯ ಮೇಲೆ ಕುಳಿತೆ. "ನಿಮ್ಮ ಪ್ರವಾಸ ಹೇಗಿತ್ತು?" ಅವರು ಕೇಳಿದರು. ಚೆನ್ನಾಗಿಯೇ ಇತ್ತು ಎಂದು ಹೇಳಿದೆ. ನೀವು ಕೈತುಂಬ ಕೆಲಸವುಳ್ಳವರೆಂದು ಗೊತ್ತು. ಆದ್ದರಿಂದ ನಾನು ನೇರವಾಗಿ ವಿಷಯ ಪ್ರಸ್ತಾಪಿಸುತ್ತೇನೆ. ನೀವು ಬಹು ದೀರ್ಘ ಸಮಯದಿಂದ ಕ್ರಿಯಾಶೀಲ ಪರಿಸರವಾದಿ ಎಂದು ನಾನು ತಿಳಿದುಬಲ್ಲೆ. ಮಾಧ್ಯಮಗಳ ಗಮನ ಸೆಳೆದ ಅನೇಕ ಉಪವಾಸಗಳನ್ನು ಕೈಗೊಂಡಿದ್ದೀರಿ. ನಾನು ತತ್ವಶಾಸ್ತ್ರದ ಪ್ರಾಧ್ಯಾಪಕ. ಜೀವನದ ತತ್ವ ಶಾಸ್ತ್ರದಲ್ಲಿ ನನಗೆ ಆಸಕ್ತಿಯಿದೆ. ಅಲ್ಲದೆ ಈ ಎಲ್ಲ ಚಟುವಟಿಕೆಗಳ ಹಿಂದಿರುವ ತತ್ವ ಶಾಸ್ತ್ರದ ಸ್ವಭಾವದ ಬಗ್ಗೆಯೂ ಆಸಕ್ತಿಯಿದೆ. ನಿಮಗೆ ಪ್ರೇರಣೆ ಕೊಡುವಂಥ ಸಂಗತಿ ಯಾವುದು? ಅಸಾಧಾರಣವಾದಂಥ ಕ್ರಮಗಳನ್ನು ಕೈಗೊಳ್ಳಲು ಧೈರ್ಯ ಕೊಡುವಂಥದಾವುದು? ಈ ಎಲ್ಲ ಪ್ರಶ್ನೆಗಳಿಗೆ ಮಾಧ್ಯಮದಲ್ಲಿ ಉತ್ತರ ದೊರೆಯುವುದಿಲ್ಲ. ಅದಕ್ಕವರು ತಲೆದೂಗಿದರು ಮತ್ತು ಮುಗುಳ್ನಗೆ ಬೀರಿದರು. "ನನ್ನ ಇಡೀ ತತ್ವಜ್ಞಾನ ಮೂರು 'ಎ'ಗಳು ಮತ್ತು ಐದು 'ಎಫ್'ಗಳನ್ನೊಳಗೊಂಡಿದೆ. ತಮ್ಮ ಬೆರಳುಗಳನ್ನು ಎಣಿಸುತ್ತಾ ಮುಂದುವರೆಸಿದರು. ಮೊದಲನೆಯ 'ಎ' ಅಂದರೆ ಆಡಂಬರ ರಾಹಿತ್ಯ. ನಮ್ಮಲ್ಲಿ ಆಡಂಬರ ರಾಹಿತ್ಯ ಜೀವನದ ದೊಡ್ಡ ಪರಂಪರೆಯೇ ಇದೆ, ಉದಾಹರಣೆಗೆ ಭೂಮಿಯ ಮೇಲೆ ಮೆಲ್ಲಗೆ ನಡೆಯುವುದು. ಎರಡನೆಯ 'ಎ' ಅಂದರೆ ಪರ್ಯಾಯಗಳು; ಆಡಂಬರ ರಾಹಿತ್ಯ ಜೀವನದಿಂದ ನಿಮಗೆ ಉತ್ತರ ದೊರೆಯದಿದ್ದಾಗ ನೀವು ಪರ್ಯಾಯಗಳನ್ನು ಹುಡುಕಬೇಕು. ನಾನು ಈ ಮಾತುಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದೇನೆಯೇ ಹೇಗೆ ಎಂದು ಪ್ರಶ್ನಿಸುವ ರೀತಿಯಲ್ಲಿ ಅವರ ಮುಖದಲ್ಲಿ ನಗೆ ಮೂಡಿತು, ಅದರೊಂದಿಗೆ ಮುಖದ ಸುಕ್ಕುಗಳು ಕೂಡ. "ನನಗೆ ಅರ್ಥವಾಯಿತು" ಎಂದೆ. ಮುಂದುವರೆಯುತ್ತ ಅವರು 'ಎ'ಯ ಮೂರನೆಯ ಅರ್ಥ ಅರಣ್ಯೀಕರಣ, ಸಸ್ಯಾರೋಪಣ. ಎಂದರು. ಹಾಗೆಯೇ ಮುಂದುವರೆಯುತ್ತ ಐದು 'ಎಫ್'ಗಳು ನನ್ನ ಉಳಿಯುವಿಕೆಗಾಗಿ ಸಂಬಂಧಿಸಿದವು; ಆಹಾರಕ್ಕೂ, ಮೇವಿಗೂ, ಉರುವಲಿಗಾಗಿಯೂ ಮತ್ತು ಮರಮುಟ್ಟುಗಳಿಗೂ, ಗೊಬ್ಬರಕ್ಕೂ, ನಾರು ಅಥವಾ ದಾರಕ್ಕೂ ಗಿಡಗಳು ಅಗತ್ಯ. ಈ ಹೊತ್ತಿಗೆ ಅವರು ತಮ್ಮ ಎರಡನೇ ಕೈಬೆರಳುಗಳನ್ನು ಎಣಿಸಲಾರಂಭಿಸಿದರು. ಇದೆಲ್ಲವನ್ನೂ ಅವರು ಈಗಾಗಲೇ ಹೇಳಿರುವುದಾಗಿಯೂ, ಆದರೆ ನಾನು ಅದನ್ನು

ಮುದ್ರಿತ ರೂಪದಲ್ಲಿ ನೋಡಿಲ್ಲವೆಂದೂ ನನಗೆ ಅನ್ನಿಸಲಾರಂಭಿಸಿತು. ನಾನು ಅದನ್ನು ಇನ್ನೂ ಮುದ್ರಣದಲ್ಲಿ ನೋಡಿರಲಿಲ್ಲ. ಅರಣ್ಯೀಕರಣವೆಂದರೆ ಅಮೆರಿಕದಲ್ಲಿ ಮಾಡಲಾಗುತ್ತಿರುವ ಪುನರ್ ಅರಣ್ಯೀಕರಣವೆಂದೇ ನಾ ತಿಳಿದಿದ್ದೆ. ಈ ಮಾತುಗಳನ್ನೆಲ್ಲ ಧ್ವನಿ ಮುದ್ರಣ ಮಾಡಿಕೊಳ್ಳುವುದು ಅಗತ್ಯವೆನಿಸಿತು. ನನ್ನ ಕ್ಯಾಮೆರಾ ಚೀಲದಲ್ಲಿ ನಾನು ಕೈಯಾಡಿಸುತ್ತಲೇ ನಮ್ಮ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡರೆ ತಪ್ಪಿಲ್ಲ ತಾನೆ ಎಂದು ಕೇಳಿದೆ. "ಆಗಬಹುದು, ಆಗಬಹುದು" ಎಂದು ಅವರು ಹೇಳಿದರು. ನಾನು ಅವರ ಮುಂದೆ ಚಿಕ್ಕ ಧ್ವನಿ ಮುದ್ರಕವನ್ನು ಹಿಡಿದೆ ಮತ್ತು ಅದಕ್ಕೆ ಚಾಲನೆ ಕೊಟ್ಟೆ. ಅದಾದ ಮೇಲೆ ನಮ್ಮ ಸಂಭಾಷಣೆ ಪ್ರಾರಂಭವಾಯಿತು. ಆ ಸಂಭಾಷಣೆ ಮುಂದಿನ ಅನೇಕ ದಿನಗಳವರೆಗೆ ನಡೆಯುವುದಷ್ಟೇ ಅಲ್ಲ, ಮುಂದಿನ ಬೇಸಿಗೆ ಮತ್ತು ಮುಂದಿನ ವರ್ಷಗಳಲ್ಲಿಯ ನನ್ನ ಭೇಟಿಯ ಸಂದರ್ಭಗಳಲ್ಲೂ ಮುನ್ನೆಡೆಯುವದು. ಏಕೆಂದರೆ ನಾನು ಸಂಭಾಷಿಸುತ್ತಿರುವ ವ್ಯಕ್ತಿ ಪತ್ರಿಕೆಗಳು ವರ್ಣಿಸಿರುವಂತೆ ಭಾರತೀಯ ಪರಿಸರದ ಆತ್ಮ ಸಾಕ್ಷಿಯ ಮೊದಲ ಗುರು. ನಾನು ಪರಿಸರ ತತ್ವಶಾಸ್ತ್ರವನ್ನು ಪಶ್ಚಿಮ ದೇಶಗಳಲ್ಲಿ ಅಭ್ಯಸಿಸಿದ್ದೆ. ಪಾಶ್ಚಿಮಾತ್ಯ ಪರಿಸರವಾದದ ಮೂಲ ಹತ್ತೊಂಬತ್ತನೇ ಶತಮಾನದಲ್ಲಿಯ ಬೆಳವಣಿಗೆಗಳ ಬೆಳಕಿನಲ್ಲಿ ಅಭ್ಯಸಿಸಿದ್ದೆ. ಈ ವಿಚಾರಗಳು ರಾಲ್ಫ್ ವಾಲ್ಡೋ ಎಮರ್ಸನ್, ಹೆನ್ರಿ ಡೇವಿಡ್ ಥೊರೊ ಮತ್ತು ಜಾನ್ ಮ್ಯುರ್, ಆಲ್ಡೋ ಲಿಯೊಪೋಲ್ಡ್ ಮತ್ತು ಇತರ ಚಿಂತಕರ ಚಿಂತನೆಗಳ ಫಲವಾಗಿ ಹೊರಹೊಮ್ಮಿದಂಥವಾಗಿದ್ದವು. ಪರಿಸರದ ಪರಿಸ್ಥಿತಿಯ ಬಗ್ಗೆ ಅಮೇರಿಕದ ಪ್ರಜ್ಞೆಯನ್ನು ಎಚ್ಚರಗೊಳಿಸುವುದರಲ್ಲಿ ರಾಯಚೆಲ್ ಕಾರಸೋನ್, ಹಾಡು ಹಕ್ಕಿಗಳ ಜೀವನಕ್ಕೆ ಉಂಟಾಗಿರುವ ಭಯ ಮತ್ತು ಆ ಹಕ್ಕಿಗಳ ನಾಶದಿಂದ ಧ್ವನಿ ರಹಿತ, ಸಂತೋಷವಿಹೀನ ವಸಂತ ಮಾಸದ ಭಯದ ಕುರಿತು ಬರೆದ ಪುಸ್ತಕ ಬಹುವಾಗಿ ಕಾರಣವಾಗಿದೆಯೆಂದೂ ತಿಳಿದಿದ್ದೆ. ಭಾರತದ ಪರಿಸ್ಥಿತಿ ಹೇಗೆ? ಈ ಕುರಿತು ಆಲೋಚಿಸಿದೆ. ಈ ಪರಿಸರವಾದ ಅಮೆರಿಕದ ಪರಿಸರವಾದದೊಂದಿಗೆ ಎಷ್ಟು ಸಹಮತ ಹೊಂದುತ್ತದೆ? ಕೆಲ ವರ್ಷಗಳ ಹಿಂದೆ ಜಾಗತಿಕ ಪರಿಸರದ ಗಂಡಾಂತರ ಸ್ಥಿತಿಗೆ ಪಾಶ್ಚಿಮಾತ್ಯರ ಧಾರ್ಮಿಕ ಪರಂಪರೆಗಳು ಕಾರಣವೆಂದು ಆಪಾದಿಸುವ ಪರಿಣಾಮಕಾರಿ ಲೇಖನವೊಂದನ್ನು ಓದಿದೆ. ಆ ಲೇಖನದ ಲೇಖಕ ಲಿನ್ ವೈಟ್ ಮಂಡಿಸಿದ ವಾದದ ಪ್ರಕಾರ ಕ್ರಿಶ್ಚಿಯನ್ ಮತವು ಮಾನವ ಕುಲದಲ್ಲಿಯೇ ಅತ್ಯಂತ ಮಾನವ ಕೇಂದ್ರಿತ ಮತವಾಗಿ ಹೊರಹೊಮ್ಮಿತ್ತು. ಈ ಮತದ ಪ್ರಕಾರ ದೇವರು ಮಾನವನನ್ನು ವಿಶಿಷ್ಟವಾಗಿ ಸೃಷ್ಟಿಸಿದ್ದಾನೆ ಮತ್ತು ತನ್ನ ಸೃಷ್ಟಿಯನ್ನು ತನ್ನಿಷ್ಟದಂತೆ ಉಪಯೋಗಿಸಿಕೊಳ್ಳಲು ಮಾನವನಿಗೆ ಅನುವು ಮಾಡಿಕೊಟ್ಟಿದ್ದಾನೆ. ದೇವರ ಈ ಯೋಜನೆ ಸರಿಯಿದೆಯೆಂಬುದರ ಬಗ್ಗೆ ನನಗೆ ಖಾತ್ರಿಯಿಲ್ಲ. ಆದರೆ ಇದು ಬೇರೆ ಧರ್ಮಗಳ ಪರಂಪರೆಯ ಬಗ್ಗೆ ಮನಸ್ಸಿನಲ್ಲಿ ಪ್ರಶ್ನೆಗಳನ್ನು ಮೂಡಿಸಿದವು. ಅದರಲ್ಲಿಯೂ ವಿಶೇಷವಾಗಿ ಪ್ರಕೃತಿಯಲ್ಲಿ ದೈವತ್ವವನ್ನು ಕಾಣುವ ಹಿಂದೂ ಧರ್ಮದ ಬಗ್ಗೆ. "ನಮ್ಮ ಪರಂಪರೆಯಲ್ಲಿ ಪ್ರತಿಯೊಂದರಲ್ಲೂ ದೈವತ್ವವಿದೆ. ದೈವತ್ವವೆಂಬುದು ಕೇವಲ ಸ್ವರ್ಗದಲ್ಲಿ ಇಲ್ಲ. ಹಕ್ಕಿಗಳಲ್ಲಿ, ಕಾಡು ಪ್ರಾಣಿಗಳಲ್ಲಿ, ತೊರೆಗಳಲ್ಲಿ, ನದಿಗಳಲ್ಲಿ, ಪರ್ವತಗಳಲ್ಲಿ ಮತ್ತು ಅರಣ್ಯಗಳಲ್ಲಿಯ ಮರಗಳಲ್ಲಿಯೂ ಇದೆ. ಜೀವ ಲೋಕದಲ್ಲಿ

ಅನೇಕ ಜಂತುಗಳಿವೆ. ಹಕ್ಕಿಗಳು, ಪ್ರಾಣಿಗಳು, ಮರಗಳು ಇವೆ. ಅನೇಕ ಬಗೆಯ ಸಸ್ಯಗಳಿವೆ. ನದಿಗಳು ಸಹಜ ಪ್ರವಾಹದಲ್ಲಿ ಹರಿಯುತ್ತಿವೆ. ಈಗ ನಾವು ತಾಂತ್ರಿಕ ಜಗತ್ತಿನಲ್ಲಿದ್ದೇವೆ. ಸುತ್ತಲೂ ತಾಂತ್ರಿಕತೆಯಿದೆ. ಕಟ್ಟೆಗಳನ್ನು ಕಟ್ಟಲು ನದಿಗಳನ್ನು ಸಾಯಿಸಿದ್ದೇವೆ. ಇದೆಲ್ಲವೂ ಎಂದು ತೃಪ್ತನಾಗದ ಮನುಷ್ಯನ ದುರಾಸೆಗಾಗಿ. ಇದನ್ನೇ ಗಾಂಧೀ ಒಂದು ಮಾತಿನಲ್ಲಿ ವಿವರಿಸಿದ್ದಾರೆ: 'ಎಲ್ಲರ ಅಗತ್ಯಗಳನ್ನು ಪೂರೈಸುವಷ್ಟು ಪ್ರಕೃತಿಯಲ್ಲಿದೆ, ಆದರೆ ಒಬ್ಬ ವ್ಯಕ್ತಿಯ ದುರಾಸೆ ಪೂರೈಸಲು ಏನೂ ಇಲ್ಲ'. ಇಷ್ಟು ಹೊತ್ತಿಗೆ ನಾನು ಅವರ ವಿಚಾರ ಸರಣಿಯಲ್ಲಿ ಒಂದು ಕ್ರಮವನ್ನು ಕಾಣಲಾರಂಭಿಸಿದೆ. ಭಾರತದ ಪ್ರಾಚೀನ ಪರಂಪರೆಯಲ್ಲಿ ವಿಹಿತವಾಗಿರುವ ತಾತ್ವಿಕ ಮತ್ತು ಧಾಮಿಕ ಗ್ರಹಿಕೆಗಳು ಇರುವುದನ್ನು ಕಂಡೆ. ಪರಿಸರದ ಬಗ್ಗೆ ವೈಜ್ಞಾನಿಕ ಒಳ ನೋಟಗಳೂ ಮತ್ತು ಗಾಂಧೀಯವರ ಋಜು ಪ್ರಭಾವ ಇರುವುದೂ ಗೋಚರಿಸಿತು. ಈ ಸಂಭಾಷಣೆ ಐಸಿರಿಯದೂ, ಫಲದಾಯಕವೂ ಆಗಿರುವುದು ಎಂದೆನಿಸಿತು.

(ಮುಂದುವರಿಯುವುದು...)

ಸನ್ಮಾನ್ಯರಿಂದ...

ಜನಪದ ವಿಚರದಲ್ಲಿ ಪ್ರಕಟಗೊಳ್ಳುವ ಕವನ, ಲೇಖನ ಇತ್ಯಾದಿಗಳು ಸವಿಸ್ತಾರವೂ, ಶೈಕ್ಷಣಿಕವೂ ಮತ್ತು ಹೃದಯ ಸ್ಪರ್ಶಿಯೂ ಆಗಿರುತ್ತದೆ. ಬಡ ಮತ್ತು ಅಂಗವಿಕಲ ಮಕ್ಕಳ ಬಗ್ಗೆ ಸರ್ಕಾರ ಮತ್ತು ಇತರ ಸರ್ಕಾರೇತರ ಸಂಸ್ಥೆಗಳಿಗೆ ಟ್ರಸ್ಟ್ ಆದರ್ಶಪ್ರಾಯವಾಗಿದೆ.

– ***ಡಾ॥ ಎಂ. ದೇವೇಂದ್ರ ಬಾಬು,*** ಪ್ರಾಧ್ಯಾಪಕರು
ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಾಗಿ ಸಂಸ್ಥೆ, ಬೆಂಗಳೂರು.

* * *

೨೦೦ ರೂ.ಗಳ ಚಂದಾ ಹಣವನ್ನು ಕಳುಹಿಸುತ್ತಿದ್ದೇನೆ. ದಯವಿಟ್ಟು ಸ್ವೀಕರಿಸಿ. ಸಂಪಾದಕರ ವೈಚಾರಿಕ ಲೇಖನಗಳು, ಅನುವಾದಿತ ಲೇಖನಗಳು, ವಿನೋಬಾರ ವೇದಗಳ ಬಗೆಗಿನ ಲೇಖನಗಳು ಮತ್ತೆ ಮತ್ತೆ ಮೆಲುಕು ಹಾಕುವಂತಿವೆ. ಜನಪದ ಧ್ವನಿಯಂತೂ ಪ್ರಸ್ತುತ ವಿಷಯಗಳ ಬಗೆಗೆ ಜನಗಳ ಅಭಿಪ್ರಾಯವನ್ನು ತಿಳಿಸುವ ಅಂಕಣವಾಗಿದೆ. ಇಂತಹ ಸುಂದರ ಸಂಚಿಕೆಗಳನ್ನು ನಮಗೆ ನೀಡುತ್ತಿರುವ ಜನಪದ ಸೇವಾ ಟ್ರಸ್ಟ್‌ನವರಿಗೆ ಹಾರ್ದಿಕ ಅಭಿನಂದನೆಗಳು.

– ***ಜಿ. ವೈದೇಹಿ,*** ಮೈಸೂರು.

* * *

ಮೆಕಾಲೆಯ ಪುನರ್ ಜನ್ಮವಾಗುತ್ತಿದೆ–ಜೋಕೆ ಲೇಖನ ಜನಪರವಾದ ಪ್ರಖರ ವೈಚಾರಿಕತೆಯನ್ನು ಬಿಂಬಿಸುತ್ತದೆ. ಶೀರ್ಷಿಕೆಯೇ ಪರಿಣಾಮಕಾರಿ. ನಮ್ಮಲ್ಲಿ ಬಹುಮಂದಿ ಮೆಕಾಲೆಯ ಮಾನಸ ಪುತ್ರ, ಪುತ್ರಿಯರೇ ಸರಿ!

– ***ಸಿ.ಪಿ.ಕೆ,*** ಮೈಸೂರು.

ಪ್ರೇರಣಾದಾಯಿ ಆರು ವೇದ ಮಂತ್ರಗಳು

– *ವಿನೋಬಾ*

ಸ ನಃ ಪಿತೇವ ಸೂ ನವೆ ಅಗ್ನೆ ಸೂಪಾಯನೋ ಭವ ಸಚಸ್ವಾ ನಃ ಸ್ವಸ್ತಯೆ॥

ಯಾವ ರೀತಿ ಮಗನಿಗಾಗಿ ತಂದೆ ಹತ್ತಿರವಿರುತ್ತಾನೋ ಅದೇ ರೀತಿ ಅಗ್ನಿಯೇ, ನೀನು ನನಗೆ ಅತ್ಯಂತ ಹತ್ತಿರವಿರು. ಸ್ವಸ್ಥಯೆ ಅಂದರೆ ಕಲ್ಯಾಣಕ್ಕಾಗಿ.

ಸು ರೂಪ ಕೃತ್ನು ಮೂತಯೆ

ವೇದದಲ್ಲಿ ಈಶ್ವರನಿಗೆ ಸುರೂಪ ಕೃತ್ನು ಅಂದರೆ ಸುರೂಪ ಸೃಷ್ಟಿಯನ್ನು ರಚಿಸುವವನೆಂದು ಹೇಳಲಾಗಿದೆ. ಸುಂದರವಾದ ಸೃಷ್ಟಿಯನ್ನು ರಚಿಸುವಂಥವನು ಸ್ವಯಂ ಎಷ್ಟು ಸುಂದರನಿರಬೇಕು! ಭಾಗವತವು ಕೂಡ **ಬಿಭ್ರದ್ ವಪುಃ ಸಕಲ–ಸುಂದರ–ಸನ್ನಿವೇಶಂ,** ನಾಮ–ರೂಪಗಳನ್ನು ಮಿಥ್ಯೆಯೆಂದು ತಿಳಿಯಲಾಗಿದೆ. ಅದರೆ ಭಗವಂತನ ಹೆಸರು ಮತ್ತು ಭಗವಂತನ ರೂಪ ಸತ್ಯ ಎಂದು ಹೇಳಿದೆ.

ಕೇತುಂ ಕೃಷ್ಣವನ್ನಕೇತವೆ

ಅಕೇತು ಅಂದರೆ ಯಾರಿಗೆ ಜ್ಞಾನವಿಲ್ಲವೋ ಅಂಥವನಿಗೆ ಭಗವಂತನು ಕೇತು ಅಂದರೆ ಜ್ಞಾನವನ್ನು ಕೊಡುತ್ತಾನೆ.

ತುಂಜೇತುಂಜೆ–ಯ ಉತ್ತರೆ ಸ್ತೋಮಾ ಇಂದ್ರಸ್ಯ ವಜ್ರಿಣಃ ನ ವಿಂಧೆ ಅಸ್ಯ ಸುಷ್ಟುತಿಂ

ಹೇ ಭಗವಂತ! ಒಂದೊಂದು ಹೆಜ್ಜೆ ನಿನ್ನ ಬಳಿಗೆ ನಾನು ಬರುತ್ತೇನೆ. ಆದರೆ ನೀನು ಎರಡು ಎರಡು ಹೆಜ್ಜೆ ಹಿಂದಕ್ಕೆ ಹೋಗುತ್ತೀಯೆ. ನಿನ್ನ ಮತ್ತು ನನ್ನ ಮಧ್ಯೆ ಅಂತರ ಶಾಶ್ವತವಾಗಿ ಇರುತ್ತದೆ. ಚಿಂತನೆ ಮತ್ತು ಆಚರಣೆಯಲ್ಲಿ ಯಾವ ಭೇದವಿದೆಯೋ ಅದು ಅನಾದಿಕಾಲದಿಂದಲೂ ಇಂದಿನವರೆಗೆ ಸತತವಾಗಿ ನಡೆದು ಬಂದಿದೆ. ಆ ಅಂತರ ಕಡಿಮೆಯಾಗಬಹುದೇ ಹೊರತು ಅಳಿಸಿ ಹೋಗಲಾರದು. ತುಂಬ ಸುಂದರ ವಾಕ್ಯವಿದು. ನಾನು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಕ್ಕುತ್ತಾ ಮುಂದುವರೆಯುತ್ತೇನೆ. ನೀನು ದೂರ ಸರಿಯುತ್ತೀಯೆ. ಆಗ ಅಂತರ ಹೆಚ್ಚುತ್ತಾ ಹೋಗುತ್ತದೆ. ನನ್ನ ತೀವ್ರತೆ ಬೆಳೆಯುತ್ತದೆ. ಮಧ್ಯೆ ಮಧ್ಯೆ ನಿರಾಶೆಯಾಗುತ್ತದೆ. ಆದರೆ ನಿರಾಶನಾಗಿ ಕುಳಿತರೆ ಅಂತರ ಕಡಿಮೆಯಾಗಲು ಸಾಧ್ಯವಾಗಲಾರದು. ಒಂದು ಹೆಜ್ಜೆ ಮುಂದೆ ಹೋದರೆ ಅಷ್ಟು ಅಂತರವಂತೂ ಕಡಿಮೆಯಾಗಿಯೇ ಆಗುತ್ತದೆ. ಕೊನೆಯಲ್ಲಿ ನನ್ನ ಉದ್ಧಾರವನ್ನು ನಾನು ಮಾಡಿಕೊಳ್ಳುವಂಥವನಲ್ಲ. ಅಂತರ ಹೆಚ್ಚಾಗುತ್ತಿರುವುದನ್ನು ಭಗವಂತನು ನೋಡುತ್ತಾನೆ. ಈ ಹುಡುಗ ದಣಿದಿದ್ದಾನೆ ಎಂದು ತಿಳಿದು ಭಗವಂತನು ತನ್ನ ಶಕ್ತಿಯಿಂದ ಒಮ್ಮೆಲೇ ಎತ್ತಿಕೊಳ್ಳುತ್ತಾನೆ.

ಏ ವಾ ಹಿ ತೇ ವಿಭೂತಯಃ ಊತಯ ಇಂದ್ರ ಮಾವತೆ ಸದ್ಯಶ್ಚಿತ್ ಸಂತಿ ದಾಶುಷೆ

ಹೇ ಭಗವಂತ, ನಿನ್ನ ವಿಭೂತಿಗಳು ನನ್ನಂಥ ಭಕ್ತರಿಗಾಗಿ ತತ್‌ಕ್ಷಣ ಪ್ರಾಪ್ತವಾದ ಸಂರಕ್ಷಣೆಯೇ ಸರಿ. ಸಮಸ್ತ ಸೃಷ್ಟಿಯನ್ನು ಹರಿರೂಪದಿಂದ ನೋಡುವುದು ಭಕ್ತಿಯೋಗದ ರಹಸ್ಯ. ಅದನ್ನು ಹಸ್ತಗತ ಮಾಡಿಕೊಳ್ಳುವುದಕ್ಕಾಗಿ ಸೃಷ್ಟಿಸ್ಥಿತ ಸ್ಥೂಲ ಪದಾರ್ಥಗಳಲ್ಲಿ ಈಶ್ವರ ರೂಪವನ್ನು ನೋಡುವ ಅಭ್ಯಾಸ ಸಾಧನೆಯ ರೂಪದಲ್ಲಿ ಉಪಯೋಗವಾಗುತ್ತದೆ. ಇದನ್ನೇ ವಿಭೂತಿ ಚಿಂತನವೆಂದು ಕರೆಯಲಾಗುತ್ತದೆ.

ರವಿ, ಚಂದ್ರ, ತಾರಕೆ, ಪರ್ವತ, ನದಿಗಳು, ವೃಕ್ಷ, ವನಸ್ಪತಿ, ಉಪಕಾರಿ ಸಹೃದಯೀ ಜನ, ತಾಯಿ, ತಂದೆ, ಗುರು, ಸಾಧು ಸಂತರು ಮುಂತಾದ ಒಂದೊಂದು ವಿಭೂತಿಯನ್ನು ಮನಸ್ಸಿನಲ್ಲಿ ಸ್ಥಿರಗೊಳಿಸಿ, ಅಂದರೆ ತನ್ನ ಸುತ್ತಲೂ ಒಂದೊಂದು ರಕ್ಷಣೆ ನಿರ್ಮಿಸಲೇ ಬೇಕು. ಎಷ್ಟೊಂದು ಈಶ್ವರ ಮೂರ್ತಿಗಳನ್ನು ನಮ್ಮ ಸುತ್ತಲೂ ನಿಲ್ಲಿಸುತ್ತೇವೋ ಅಷ್ಟೊಂದು ಸಂರಕ್ಷಣೆ ತತ್‌ಕಾಲ ಸಿಗುತ್ತದೆ. ಗೀತೆಯ ವಿಭೂತಿ ಚಿಂತನಯೋಗದ ಮೂಲ ಈ ವೈದಿಕ ಮಂತ್ರದಲ್ಲಿ ಗ್ರಹಿತವಾಗಿದೆ.

ಚಕ್ರಂ ವಿಶ್ವಾನಿ ಚಕ್ರಯೆ

ನಾವು ಊಟ ಮಾಡುವುದರಿಂದ ಉತ್ಪಾದನೆಯಲ್ಲಿ ಕೂಡ ಉಪಾಸನೆಯ ಬುದ್ಧಿಯಿಂದ ಭಾಗವಹಿಸಬೇಕು. ಬೇರೆ ಬೇರೆ ಉದ್ಯೋಗ ಮಾಡುತ್ತಿದ್ದರೂ ಕೂಡ ಅದರೊಂದಿಗೆ ಯಾವುದಾದರೂ ಶರೀರ-ಪರಿಶ್ರಮ ಮಾಡುವ ವ್ರತವನ್ನು ಎಲ್ಲರೂ ತೆಗೆದುಕೊಳ್ಳಬೇಕು. ಇದನ್ನು ರಾಷ್ಟ್ರೀಯ ವ್ರತ ಎಂದಾಗಲೀ ಮಾನವತಾ ವ್ರತವೆಂದಾಗಲೀ ತಿಳಿದುಕೊಳ್ಳಬೇಕು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಿರುವ ಇಡೀ ಸೃಷ್ಟಿ ಮತ್ತು ಸಮಾಜವನ್ನು ನಿರ್ಮಿಸಿರುವ ಆ ಭಗವಂತನಿಗೆ ಏನನ್ನು ಸಮರ್ಪಿಸಬೇಕು? ವೇದಗಳು ಹೇಳುವ **-ಚಕ್ರಿಂ-ವಿಶ್ವಾನಿ-ಚಕ್ರಯೆ** ಯಾವನು ವಿಶ್ವವನ್ನು ನಿರ್ಮಿಸಿದ್ದಾನೋ ಅವನಿಗೆ ಉತ್ಪಾದನೆಯನ್ನೇ ಸಮರ್ಪಣೆ ಮಾಡಬೇಕಾಗುತ್ತದೆ. ಅವನು ಇಡೀ ವಿಶ್ವವನ್ನು ನಿರ್ಮಿಸಿದ್ದಾನೆ ಎಂದರೆ ನಾವು ಯಾವುದಾದರೂ ವಸ್ತುವನ್ನು ಸಮರ್ಪಿಸಬೇಕೆಂದಿದ್ದರೆ ಪರಿಶ್ರಮದಿಂದ ಉತ್ಪನ್ನವಾದ ಪದಾರ್ಥವನ್ನೇ ಸಮರ್ಪಿಸಬೇಕು. ಜೊತೆಗೆ ನಮ್ಮ ಉತ್ಪಾದಕರ ಶ್ರಮ ಅವಿರೋಧವಾಗಿರಬೇಕು.

* * *

ಸಂಗೀತವನ್ನು ಆಲಿಸಿ; ಚಿಂತನೆಯನ್ನು ದೂರಗೊಳಿಸಿ

– ಡಾ.ಕೆ.ಜಗದೀಶ ಪೈ

ಸಂಗೀತವನ್ನು ಮೆಚ್ಚದ, ಸಂಗೀತಕ್ಕೆ ಒಲಿಯದ ವ್ಯಕ್ತಿ ಜಗತ್ತಿನಲ್ಲಿ ಪ್ರಾಯಶಃ ಯಾರೂ ಇರಲಿಕ್ಕಿಲ್ಲ. ಸಂಗಿತಕ್ಕೆ ಅಷ್ಟೊಂದು ಆಕರ್ಷಣ ಶಕ್ತಿ ಇದೆ. ಸಂಗೀತದ ಮಾಧುರ್ಯಕ್ಕೆ ಎಲ್ಲರೂ ತಲೆದೂಗುತ್ತಾರೆ, ತಲೆಬಾಗುತ್ತಾರೆ. ನಿರ್ಜೀವ ವಸ್ತುಗಳೂ ಸಂಗೀತದ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲಾರವು.

ಮನುಷ್ಯ ದುಃಖ–ದುಮ್ಮಾನಗಳಿಂದ, ಚಿಂತೆ–ಖಿನ್ನತೆಗಳಿಂದ ಹೊರಗೆ ಬರಬೇಕೆಂದರೆ ಸಂಗೀತಕ್ಕೆ ಶರಣಾಗಬೇಕು. ಸಂಗೀತ ಅಜಾತಶತ್ರು. ಸಂಗೀತಗಾರರಿಗೆ ಶತ್ರುಗಳಿರಬಹುದು, ಆದರೆ ಸಂಗೀತಕ್ಕೆ ಶತ್ರುಗಳಿಲ್ಲ. ಸಂಗೀತಕ್ಕೆ ಎಲ್ಲರೂ ಮಿತ್ರರೇ. ಸಂಗೀತ ದುಃಖಮಯ ಲೋಕದಿಂದ ಆನಂದಮಯ ಲೋಕಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಸ್ವರ್ಗದ ಅನುಭವ ಭೂಲೋಕದಲ್ಲೇ ಆಗಬೇಕಾದರೆ ಏಕಾಂತದಲ್ಲಿ ನಿಮಗೆ ಇಷ್ಟವಾದ ಸಂಗೀತವನ್ನು ಆಲಿಸಿ. ಆಗ ನೀವು ಎಲ್ಲ ದುಃಖದಿಂದ ದೂರವಾಗುತ್ತೀರಿ. ಇದಕ್ಕಿಂತ ಮಿಗಿಲಾದ ಸ್ವರ್ಗ ಸುಖ ಬೇರೊಂದಿಲ್ಲ. ತೊಟ್ಟಿಲಲ್ಲಿ ಮಲಗಿದ ಪುಟ್ಟ ಶಿಶುವಿಗೆ ಜೋಗುಳದ ಹಾಡುಗಳಿಂದಲೇ ನಿದ್ರೆ ಬರುತ್ತದೆ. ಜೋಗುಳ ಹಾಡದಿದ್ದರೆ ಆ ಪುಟ್ಟ ಶಿಶು ಕೂಡ ರಂಪ ಮಾಡುತ್ತದೆ.

ಜಗತ್ತಿನೆಲ್ಲೆಡೆ ಸಂಗೀತ ಇದೆ. ಆದರೆ ಭಾರತೀಯ ಸಂಗೀತಕ್ಕೆ ವಿಶೇಷವಾದ ಮಹತ್ವ ಇದೆ. ಏಕೆಂದರೆ ಪಾಶ್ಚಾತ್ಯರ ಸಂಗೀತ ಮನುಷ್ಯನ ಮನಸ್ಸನ್ನು ಕೆರಳಿಸಿದರೆ, ಭಾರತೀಯ ಸಂಗೀತ ಮನುಷ್ಯನ ಮನಸ್ಸನ್ನು ಅರಳಿಸುತ್ತದೆ.

ವಿದೇಶೀ ನೆಲದಲ್ಲೊಂದು ಸಂಗೀತ ಕಾರ್ಯಕ್ರಮ ಏರ್ಪಾಟಾಗಿತ್ತು. ಕಾರ್ಯಕ್ರಮದಲ್ಲಿ ಮೊದಲು ನಡೆದದ್ದು ಪಾಶ್ಚಾತ್ಯ ಸಂಗೀತದ ಅಬ್ಬರ. ಕೇಳುಗರು ಹುಚ್ಚೆದ್ದು ಕುಣಿದರು. ಅನಂತರ ಅದೇ ವೇದಿಕೆಯಲ್ಲಿ ಖ್ಯಾತ ಬಾನ್ಸುರಿ ವಾದಕ ಪಂಡಿತ್ ಹರಿಪ್ರಸಾದ್ ಚೌರಾಸಿಯಾ ತಮ್ಮ ಇಂಪಾದ ಬಾನ್ಸುರಿ ವಾದನದ ಮೂಲಕ ನೆರೆದಿದ್ದ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿದರು. ಪಾಶ್ಚಾತ್ಯ ಶ್ರೋತೃಗಳ ಕುಣಿತವೆಲ್ಲ ನಿಂತುಹೋಯಿತು. ಅವರೆಲ್ಲ ಕೇವಲ ಸಂಗೀತವನ್ನು ಮೌನವಾಗಿ ಆಲಿಸಿ ಆನಂದಬಾಷ್ಪಿತರಾದರು.

ಕಾರ್ಯಕ್ರಮ ಮುಗಿದ ಮೇಲೆ ಪಾಶ್ಚಾತ್ಯ ಸಂಗೀತಕ್ಕೂ, ಭಾರತದ ಶಾಸ್ತ್ರೀಯ ಸಂಗೀತಕ್ಕೂ ಏಕಿಷ್ಟು ವ್ಯತ್ಯಾಸ ಎಂಬ ಪ್ರಶ್ನೆ ಶ್ರೋತೃಗಳನ್ನು ಕಾಡಿತು. ಚೌರಾಸಿಯಾರವರಲ್ಲಿ ಕೇಳಿದಾಗ ಅವರು ಉತ್ತರಿಸಿದರು; "ಪಾಶ್ಚಾತ್ಯ ಸಂಗೀತವು ಭಾವನೆಗಳನ್ನು ಕೆರಳಿಸುವುದರ ಮೂಲಕ ಮಾನವ ಶರೀರದ ವಿವಿಧ ಅವಯವಗಳ ಸಂಚಲನಕ್ಕೆ ಕಾರಣವಾಗುತ್ತದೆ. ಹಾಗಾಗಿ ಪ್ರೇಕ್ಷಕರು ತಮ್ಮ ತಲೆ, ಕೈ, ಕಾಲುಗಳನ್ನು

ಶ್ರುತಿ, ಲಯ, ತಾಳಕ್ಕೆ ತಕ್ಕಂತೆ ಚಲಿಸುತ್ತಾರೆ ಮತ್ತು ಕೂಗಾಡುತ್ತಾರೆ. ಆದರೆ ಭಾರತೀಯ ಸಂಗೀತ ಆತ್ಮಾನುಭೂತಿಯನ್ನುಂಟುಮಾಡುವುದು. ಹೀಗಾಗಿ ಇಲ್ಲಿ ಇಂದ್ರಿಯಗಳ ಮೂಲಕ ಭಾವನೆಗಳ ಉದ್ರೇಕದಿಂದಾದ ಶಾರೀರಿಕ ಕಂಪನಗಳಿರುವುದಿಲ್ಲ. ಅದಕ್ಕೆ ಬದಲಾಗಿ ಶರೀರದ ಅವಯವಗಳ ಚಲನೆ ಸ್ತಬ್ಧವಾಗಿ, ಕಣ್ಣು ರೆಪ್ಪೆಗಳು ಸಹಜವಾಗಿ ಮುಚ್ಚಿಕೊಳ್ಳುತ್ತ ಅಂತರ್ಮುಖಿಯಾದ ವ್ಯಕ್ತಿಯು ಆತ್ಮಾನುಭೂತಿಯ ರಸಾಸ್ವಾದನೆಯನ್ನು ಶಾಂತವಾಗಿ ಪಡೆಯುತ್ತಾನೆ".

ಪಾಶ್ಚಾತ್ಯ ಸಂಗೀತ ಬಹಿರ್ಮುಖಿಯಾದುದಾದರೆ, ಭಾರತೀಯ ಸಂಗೀತ ಅಂತರ್ಮುಖಿಯಾದುದು. ಪಾಶ್ಚಾತ್ಯ ಸಂಗೀತ ಮನುಷ್ಯನನ್ನು ಲೌಕಿಕತೆಗೆ ಕರೆದುಕೊಂಡು ಹೋದರೆ ಭಾರತೀಯ ಸಂಗೀತ ಮನುಷ್ಯನನ್ನು ಅಲೌಕಿಕತೆಯತ್ತ ಕೊಂಡೊಯ್ಯುತ್ತದೆ.

ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಡಿಲಾಬಾರ್ ಎಂಬ ಚಿಕ್ಕದೊಂದು ಪ್ರಯೋಗಶಾಲೆ ಇದೆ. ಅಲ್ಲಿ ಗಹನವಾದ ಪ್ರಯೋಗಗಳು ನಡೆಯುತ್ತಿವೆ. ಒಂದು ಪ್ರಯೋಗದಲ್ಲಿ ವಿಜ್ಞಾನಿಗಳು ಎರಡು ಪಾತಿಗಳಲ್ಲಿ ಕೃಷಿ ಮಾಡಿದರು. ಒಂದೇ ತರಹದ ಬೀಜ, ಒಂದೇ ತರಹದ ಪೋಷಕಾಂಶಗಳು, ಒಂದೇ ತರಹದ ಪಾತಿಗಳು, ಒಂದೇ ಪ್ರಮಾಣದ ಸೂರ್ಯನ ಬೆಳಕು. ಆದರೆ ಒಂದು ಪಾತಿಯ ಗಿಡಗಳಿಗೆ ಅವರು ಪ್ರತಿ ನಿತ್ಯ ಒಂದು ಗಂಟೆಯ ಕಾಲ 'ಪಾಪ್ ಮ್ಯೂಸಿಕ್' ಕೇಳಿಸಿದರು, ಮತ್ತೊಂದು ಪಾತಿಯ ಗಿಡಗಳಿಗೆ ಶಾಸ್ತ್ರೀಯ ಸಂಗೀತವನ್ನು ಕೇಳಿಸಲಾಯಿತು. ಪರಿಣಾಮ ಬಲು ವಿಚಿತ್ರವಾಗಿತ್ತು.

ಪಾಪ್ ಸಂಗೀತ ಕೇಳಿಸಲ್ಪಟ್ಟ ಪಾತಿಯ ಬೀಜಗಳು ಮೊಳಕೆಯೊಡೆಯಲೂ ನಿರಾಕರಿಸಿದವು ಹಾಗೂ ಶಾಸ್ತ್ರೀಯ ಸಂಗೀತ ಕೇಳಿದ ಪಾತಿಯ ಬೀಜಗಳು ಬಲು ಬೇಗನೆ ಮೊಳೆತವು. ಪಾಪ್ ಸಂಗೀತದ ಪಾತಿಯಲ್ಲಿ ಸಮಯಕ್ಕೆ ಮೊದಲೇ ಮೊಳೆತ ಒಂದೆರಡು ಮೊಳಕೆಗಳು ಅರ್ಧ ಮೃತವಾಗಿದ್ದವು. ಇವುಗಳಲ್ಲಿ ಹೂವುಗಳೇ ಮೂಡಲಿಲ್ಲ. ಶಾಸ್ತ್ರೀಯ ಸಂಗೀತದ ಪಾತಿಯ ಗಿಡಗಳಲ್ಲಿನ ಹೂವುಗಳು ಸಾಧಾರಣ ಹೂವುಗಳಿಗಿಂತ ಒಂದೂವರೆ ಪಟ್ಟು ದೊಡ್ಡ ಗಾತ್ರದವಾಗಿದ್ದವು ಮತ್ತು ಒಂದೂವರೆ ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಿಟ್ಟವು. ಡಿಲಾಬಾರ್ ವಿಜ್ಞಾನಿಗಳು ಈ ವ್ಯತ್ಯಾಸಕ್ಕೆ ಸಂಗೀತದ ತರಂಗಗಳೇ ಕಾರಣ ಎನ್ನುತ್ತಾರೆ. ಶಾಸ್ತ್ರೀಯ ಸಂಗೀತ ಎಂದರೆ ಸ್ವರಗಳ ಸಂಗಮ ಮತ್ತು ಸಾಮರಸ್ಯ. ಇಂತಹ ಸಾಮರಸ್ಯ ತುಂಬಿದ ಶಾಸ್ತ್ರೀಯ ಸಂಗೀತ ಸಸ್ಯಗಳಲ್ಲಿ ಮಾತ್ರ ಅಲ್ಲ, ಮನುಷ್ಯನಲ್ಲೂ ಪರಿಣಾಮ ಬೀರುತ್ತದೆ. ಶಾಸ್ತ್ರೀಯ ಸಂಗೀತ ಮನುಷ್ಯನನ್ನು ಉತ್ತುಂಗಕ್ಕೆ ಕೊಂಡೊಯ್ಯುತ್ತದೆ.

ಸಂಗೀತಕ್ಕೆ ಕೇವಲ ಮನುಷ್ಯರು ಮಾತ್ರ ಸ್ಪಂದಿಸುವುದಿಲ್ಲ, ಗಿಡ-ಮರಗಳೂ ಸ್ಪಂದಿಸುತ್ತವೆ ಎನ್ನುವುದು ವೈಜ್ಞಾನಿಕ ಸತ್ಯ. ಈಗ ವೈಜ್ಞಾನಿಕರು ಇದರ ಮೇಲೆ ಹಲವಾರು ಪ್ರಯೋಗಗಳನ್ನು ಮಾಡುತ್ತಿರುವರು. ರಷ್ಯಾ, ಅಮೆರಿಕ ದೇಶಗಳಲ್ಲಿ ಗದ್ದೆಗಳಲ್ಲಿ ಸಂಗೀತದ ಪ್ರಯೋಗಗಳನ್ನು ನಡೆಸಲಾಗಿದೆ; ಬೆಳೆ ಬೇಗನೆ ಫಲಿಸಲೆಂದು, ಇಮ್ಮಡಿಯಾಗಿ ಫಲಿಸಲೆಂದು. ಪ್ರಯತ್ನ ಸಫಲವೂ ಆಗಿದೆ.

ಪಂಡಿತ್ ರವಿಶಂಕರರ ಸಿತಾರ್ ವಾದನದ ಮೇಲೆ ಕೆನಡಾದಲ್ಲಿ ಒಂದು

ಪ್ರಯೋಗವನ್ನು ನಡೆಸಲಾಯಿತು. ರವಿಶಂಕರ್ ಸಿತಾರ್ ನುಡಿಸುತ್ತಿದ್ದಂತೆ ಒಂದು ಕಡೆ ಬೀಜವನ್ನು ಬಿತ್ತಲಾಯಿತು. ಮತ್ತೊಂದು ಕಡೆ– ಸ್ವಲ್ಪ ದೂರದಲ್ಲಿ ಅದೇ ಬೀಜವನ್ನು ನೆಡಲಾಯಿತು. ಆಶ್ಚರ್ಯವೇನೆಂದರೆ ಆ ಬೀಜಗಳಿಂದ ಒಡೆದು ಬಂದ ಮೊಳಕೆಗಳೆಲ್ಲವೂ ರವಿಶಂಕರರ ಸಿತಾರ್ ವಾದನದ ಕಡೆಗೇ ಬಾಗಿಕೊಂಡಿದ್ದವು. ಮೊಳಕೆಗಳು ಬೆಳೆದು ಕಿವುಡನಾದವನು ತನ್ನ ಕಿವಿಯನ್ನು ಹೇಳುವವನ ಹತ್ತಿರಕ್ಕೆ ಬಾಗಿಸುವಂತೆ ಎಲ್ಲ ಗಿಡ ಮರಗಳೂ ಸಿತಾರಿನ ಕಡೆಗೆ ಕಿವಿಗೊಡುತ್ತ ಬಂದವು. ಎರಡು ಪಟ್ಟು ವೇಗದಲ್ಲಿ ಬೆಳೆಯತೊಡಗಿದವು. ಯಾವ ಸಸಿಯು ಆರು ತಿಂಗಳಿಗೆ ದೊಡ್ಡದಾಗುವುದೋ ಅದು ಮೂರು ತಿಂಗಳಿಗೇ ಬೆಳೆಯಿತು, ದೊಡ್ಡದಾಯಿತು. ಹೀಗೆ ಸಂಗೀತಕ್ಕೆ ಗಿಡ–ಮರಗಳೂ ಓಲಾಡುವವು, ತೊನೆದಾಡುವವು.

"ತನ್ನೊಳಗೆ ಸಂಗೀತ ಇಲ್ಲದವನು, ಸಿಹಿಯಾದ ನಾದಕ್ಕೆ ಸ್ಪಂದಿಸದವನು ದುಷ್ಟ, ಕಪಟಿ, ಸುಳ್ಳ! ಅವನ ಅಂತರಂಗವೊಂದು ಅಮಾವಾಸ್ಯೆ! ಅವನ ಭಾವನೆಗಳು ಕಗ್ಗತ್ತಲ ತರಂಗಗಳು!! ನಂಬದಿರು....... ಅವನನ್ನು ನಂಬದಿರು" ಎಂಬುದಾಗಿ ವಿಲಿಯಂ ಷೇಕ್‌ಸ್ಪಿಯರ್ ಹೇಳಿದ್ದಾನೆ.

ಮಾತಿನ ಸರಳ, ಸುಮಧುರ, ಮೃದುವಾದ ಮತ್ತು ಪ್ರಿಯವಾದ ಅಭಿವ್ಯಕ್ತಿಯೇ ಸಂಗೀತ. ಸಂಗೀತದಲ್ಲಿ ಇಂಪಿದೆ, ಮಾಧುರ್ಯವಿದೆ, ಸೊಗಸಿದೆ. ಇಂತಹ ಇಂಪಿಗೆ, ಮಾಧುರ್ಯಕ್ಕೆ, ಸೊಗಸಿಗೆ ಸೋಲದ ಮನುಷ್ಯರಿಲ್ಲ. ಸಂಗೀತಕ್ಕೆ ಸೋಲದ ಮನಸ್ಸನ್ನು ಕಠೋರ ಮನಸ್ಸು ಎಂಬುದಾಗಿ ಭಾವಿಸ ಬೇಕು. ನಮ್ಮ ಮೆದುಳಿನ ಚಟುವಟಿಕೆಗಿಂತ ಹೃದಯದ ಚಟುವಟಿಕೆಗೆ ಸೂಕ್ತ ವಾತಾವರಣ ಕಲ್ಪಿಸುವ ಶಕ್ತಿ ಸಂಗೀತಕ್ಕಿದೆ.

'ಸಂಗೀತಮಥಸಾಹಿತ್ಯಂ ಸರಸ್ವತ್ಯಾಃ ಸ್ತನದ್ವಯಂ'

ಸಂಗೀತ ಮತ್ತು ಸಾಹಿತ್ಯ ವಾಗ್ದೇವತೆ ಸರಸ್ವತಿಯ ಸ್ತನದ್ವಯ ಎನ್ನುತ್ತಾನೆ, ಒಬ್ಬ ಸಂಸ್ಕೃತ ಕಲಾ ವಿಮರ್ಶಕ. ಮಾತಿಗಿಂತ ಸಂಗೀತವೇ ಮನುಷ್ಯನ ಹೃದಯವನ್ನು ತಟ್ಟುತ್ತದೆ. ಧಾರ್ಮಿಕ ಉಪನ್ಯಾಸದಿಂದ ನಾವು ಭಗವಂತನ ಭಕ್ತರಾಗಬೇಕೆಂಬ ಪ್ರೇರಣೆ ಸಿಗುತ್ತದೆ. ಆದರೆ ಸಂಗೀತ ಕಚೇರಿಯಲ್ಲಿ ಸಂಗೀತವನ್ನು ಆಸ್ವಾದಿಸುತ್ತ, ಭಾವುಕರಾಗಿ ಭಕ್ತರಾಗುತ್ತೇವೆ. ಆದ್ದರಿಂದ ಸಂಗೀತ ಮನುಷ್ಯನನ್ನು ವರ್ತಮಾನದಲ್ಲೇ ಸಾಧಕನನ್ನಾಗಿ, ಭಕ್ತನನ್ನಾಗಿ ಮಾಡುತ್ತದೆಯೇ ಹೊರತು ಭವಿಷ್ಯದಲ್ಲಲ್ಲ. ಸಂಗೀತಕ್ಕೂ, ಹೃದಯಕ್ಕೂ ಯಾವಾಗಲೂ ಅವಿನಾಭಾವ ಸಂಬಂಧ. ಸಂಗೀತ ಸದಾ ಹೃದಯವನ್ನು ಮೀಟುತ್ತದೆ. 'ಮುರಿದ ಹೃದಯಕ್ಕೆ ಸಂಗೀತವೇ ಮದ್ದು' ಎಂಬುದಾಗಿ ಹಂಟ್ ಎ. ಹೇಳಿದ್ದಾನೆ. ಒಡೆದ ಹೃದಯವನ್ನು ಸಂಗೀತ ಜೋಡಿಸುತ್ತದೆ. 'ಭಾಷೆ ಒಡೆಯುತ್ತದೆ, ಸಂಗೀತ ಬೆಸೆಯುತ್ತದೆ' ಎಂಬುದೊಂದು ಮಾತಿದೆ. ಇದು ಅಕ್ಷರಶಃ ನಿಜ.

ವೀಣೆ ಶೇಷಣ್ಣನವರೂ, ಕೆ. ವಾಸುದೇವಾಚಾರ್ಯರೂ ಮೈಸೂರು ಆಸ್ಥಾನದ ಸಂಗೀತ ವಿದ್ವಾಂಸರಾಗಿ ಪ್ರಸಿದ್ಧರು. ವೃತ್ತಿ ದ್ವೇಷವೆನ್ನುವಂತೆ ಅವರಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಅಸಮಾಧಾನ. ಇದಕ್ಕೆ ಚಾಡಿಕೋರರು ಕಾರಣ. ಆಮೇಲೆ ಹಿತೈಷಿಗಳು ಇಬ್ಬರನ್ನೂ ಸಮಾಧಾನ ಪಡಿಸಿ ಹತ್ತಿರ ತರುತ್ತಿದ್ದರು.

ಒಮ್ಮೆ ಸುಮಾರು ಆರು ತಿಂಗಳ ಕಾಲ ಇಬ್ಬರೂ ಮಾತು ಬಿಟ್ಟಿದ್ದರು. ಇವರನ್ನು ಒಗ್ಗೂಡಿಸಿ ಇಬ್ಬರ ಸಂಗೀತವನ್ನೂ ಒಟ್ಟಿಗೆ ಕೇಳಲು ಆಶಿಸಿ ಕೆಲವರು ಕಲಾಭಿಮಾನಿಗಳು ಇಬ್ಬರಿಗೂ ತಿಳಿಯದ ಹಾಗೆ ಕಚೇರಿ ಏರ್ಪಡಿಸಿದ್ದರು. ಸ್ಥಳ: ಮೈಸೂರು ಕಾಡಯ್ಯನವರ ಛತ್ರ.

ಆಚಾರ್ಯರು ಶಿಷ್ಯರ ಸಂಗಡ ತಂಬೂರಿ ತೆಗೆಸಿಕೊಂಡು ಗೊತ್ತಾದ ವೇಳೆಗೆ ಛತ್ರಕ್ಕೆ ಬಂದರು. ಆ ವೇಳೆಗೆ ಅಲ್ಲಿಗೆ ಬಂದಿದ್ದ ಶೇಷಣ್ಣನವರು ಕೆರಳಿದರು. ಏಕಕಾಲದಲ್ಲಿ ಒಂದೇ ಕಡೆ ಇಬ್ಬರ ಕಚೇರಿಯನ್ನು ತಮಗೆ ತಿಳಿಯದಂತೆ ಏರ್ಪಾಟು ಮಾಡಿದ್ದಕ್ಕಾಗಿ ವ್ಯವಸ್ಥಾಪಕರ ಮೇಲೆ ಇಬ್ಬರೂ ಹಾರಾಡಿದರು. ಆಗ ವ್ಯವಸ್ಥಾಪಕರು "ನಿಮ್ಮಂಥ ದೊಡ್ಡ ವಿದ್ವಾಂಸರು ಹೀಗೆ ಜಗಳಕ್ಕೆ ನಿಲ್ಲಬಹುದೇ? ಇಬ್ಬರ ಸಂಗೀತವನ್ನೂ ಒಟ್ಟಿಗೇ ಕೇಳುವುದು ನಮ್ಮ ಆಸೆ. ಹಾಗಾಗಿ ಈ ಸಂಚು ಮಾಡಿದೆವು. ನಿಮ್ಮ ವೈಮನಸ್ಯ ಮರೆತು, ಸಂಗೀತದ ಸವಿಯನ್ನು ಧಾರೆ ಎರೆಯಿರಿ" ಎಂದು ವಿನಯದಿಂದ ಕೇಳಿಕೊಂಡರು.

ಯಾರು ಪ್ರಾರಂಭಿಸಬೇಕು ಕಚೇರಿಯನ್ನು? ಈ ಸಮಸ್ಯೆ ಬಗೆಹರಿಯಲು ಸ್ವಲ್ಪ ಕಾಲ ಹಿಡಿಯಿತು. ಶೇಷಣ್ಣನವರು "ನಾನೇ ಮೊದಲು ನುಡಿಸಿಬಿಡುತ್ತೇನೆ, ನನಗೆ ಸ್ವಲ್ಪ ತುರ್ತು ಕೆಲಸವಿದೆ. ನಾನು ಕಚೇರಿ ಆದ ಕೂಡಲೇ ಹೊರಟುಬಿಡಬೇಕು" ಎಂದರು.

ಶೇಷಣ್ಣನವರ ವೀಣಾವಾದನ ದಿವ್ಯವಾಗಿತ್ತು. ವಾಸುದೇವಾಚಾರ್ಯರಿಗೆ " ಇಂಥವರೊಂದಿಗೆ ಹಗೆತನವೇ?" ಎನ್ನಿಸಿತು. ಅವರ ಪಾದಗಳ ಮೇಲೆ ಬಿದ್ದು ಹೊರಳಾಡಿ ಕ್ಷಮೆ ಯಾಚಿಸಬೇಕು ಎಂದು ತೋರಿತು. ಆದರೆ ಸ್ವಾಭಿಮಾನದಿಂದಾಗಿ ಸುಮ್ಮನೆ ಕುಳಿತರು. ಅವರ ಮನಸ್ಸು ಈ ವೀಣಾಧ್ವನಿಯೊಂದಿಗೆ ಪೂರ್ತಿ ಕರಗಿ ಹೋಗಿತ್ತು. ವಾದನ ಮುಗಿದ ಮೇಲೆ, " ಆಯಿತು, ಇಷ್ಟರ ಮೇಲೆ ಯಾವ ವಿದ್ವಾಂಸ ಹಾಡಿ ಸಭೆಗೆ ಕಳೆ ಕೊಡುತ್ತಾನೋ ನೋಡೋಣ" ಎಂದು ನುಡಿದು, ತಮ್ಮ ವೀಣೆಯನ್ನು ಪಕ್ಕಕ್ಕಿಟ್ಟ ಶೇಷಣ್ಣನವರು ಒರಗು ದಿಂಬಿಗೆ ಆತುಕೊಂಡು ಕುಳಿತರು. ಸಭೆಯಲ್ಲಿದ್ದವರಿಗೆ ಮುಂದೆ ಹೇಗೋ ಏನೋ ಎಂಬ ಕುತೂಹಲ, ಆಶ್ಚರ್ಯ.

ಆಚಾರ್ಯರು ಮೇಲೆದ್ದರು. ದೇವರನ್ನೂ, ಗುರುಗಳನ್ನೂ ಸ್ಮರಿಸಿ, "ಹಾಡಿಯೇ ಬಿಡುತ್ತೇನೆ, ಕಳೆ ಕಟ್ಟಿಸಿಯೇ ಕಟ್ಟಿಸುತ್ತೇನೆ" ಎಂದು ಹಟ ತೊಟ್ಟರು. ಶಕ್ತಿ ಮೀರಿ ಹಾಡಿದರು.

ಈಗ ಶೇಷಣ್ಣನವರ ಕಣ್ಣುಗಳು ಒದ್ದೆಯಾಗಿದ್ದವು. ಅಂಗವಸ್ತ್ರದಿಂದ ಆಗಾಗ ಕಣ್ಣೀರನ್ನು ತಡೆಯುತ್ತಿದ್ದರು. ಹಾಡುಗಾರಿಕೆ ಮುಗಿದಕೂಡಲೆ, ಆರು ತಿಂಗಳ ಮೌನವ್ರತ ಅರೆಕ್ಷಣದಲ್ಲಿ ಮಾಯವಾಯಿತು. ಅವರು ಆಚಾರ್ಯರನ್ನು ಉದ್ದೇಶಿಸಿ ಹೇಳಿದರು; "ಆಚಾರ್ಯರೇ, ಚಾಡಿಕೋರರ ಮಾತು ಕೇಳಿ ನಾವು ಹೀಗೆ ಆರು ತಿಂಗಳ ಕಾಲ ಪರಸ್ಪರ ನೋಡದೆ, ಮಾತುಕತೆ ಆಡದೆ ಇದ್ದೆವಪ್ಪ. ಒಂದು ರೀತಿ ಈ ಪೈಪೋಟಿ ಏರ್ಪಾಡಾದದ್ದು ಒಳ್ಳೆಯದೇ ಆಯಿತು. ನಿಮ್ಮ ನಿಜವಾದ ಸತ್ವ ಬೆಳಕಿಗೆ ಬಂತು. ಇವತ್ತು. ಏನಾದರೂ ವಾದ್ಯ ವಾದ್ಯವೇ, ಹಾಡುಗಾರಿಕೆ ಹಾಡುಗಾರಿಕೆಯೇ. ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ. ನಮ್ಮನ್ನು ಹೀಗೆ ಒಂದುಗೂಡಿಸಿದ ಕಲಾಭಿಮಾನಿಗಳಿಗೆ

ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು".

ಆಚಾರ್ಯರು ಮಗುವಿನಂತೆ ಅತ್ತರು. ಶೇಷಣ್ಣನವರಲ್ಲಿ ಕ್ಷಮಾಪಣೆ ಕೇಳಿದರು. ಸಭೆಯಲ್ಲಿ ಸಮಾಧಾನ ಸಂತೋಷಗಳು ತುಂಬಿ ಸೂಸಿದವು. ಇಬ್ಬರೂ ಒಟ್ಟಿಗೆ ದಾರಿಯಲ್ಲಿ ನಡೆಯುತ್ತ ಸಾಗಿದಾಗ, ಶೇಷಣ್ಣನವರು, "ನಿಜವಾದ ಸಂಗೀತದ ಲಕ್ಷಣವೇ ಇದು, ಆಚಾರ್ಯರೇ ಹಗೆತನ, ಕೋಪ, ತಾಪ, ನೋವು, ಸಂಕಟ ಎಲ್ಲವನ್ನೂ ಒಂದು ಘಳಿಗೆಯಲ್ಲಿ ಮರೆಸುತ್ತದೆ. ಸುಖಭೋಜನ, ಸ್ತ್ರೀ ವ್ಯಾಮೋಹ ಮೊದಲಾದ ಭೋಗ ವಿಲಾಸಗಳ ಕಡೆಗೆ ಮನಸ್ಸನ್ನು ಯಾವುದು ಹರಿಯಬಿಡುವುದಿಲ್ಲವೋ, ಅದೇ ನಿಜವಾದ ಸಂಗೀತ" ಎಂದರು.

ಸಂಗೀತದ ಅಭ್ಯಾಸ ಎಂದರೆ ಅದೊಂದು ತಪಸ್ಸು. ಅದು ಕಲಿತು ಮುಗಿಯಿತೆಂಬುದಿಲ್ಲ. ಕಲಿತಷ್ಟೂ ಅದು ಇನ್ನೂ ತೆರೆದುಕೊಳ್ಳುತ್ತದೆ. ಕಲಿತದ್ದನ್ನು ನಿತ್ಯ–ನಿರಂತರ ಅಭ್ಯಾಸ ಮಾಡಬೇಕು. ಇಲ್ಲದಿದ್ದರೆ ಅದು ಕೈ ತಪ್ಪಿಹೋಗುತ್ತದೆ.

ಒಬ್ಬ ಒಳ್ಳೆಯ ಸಂಗೀತಗಾರನ ಕಚೇರಿಯನ್ನು ಕೇಳಿದಾಗ ಮನಸ್ಸಿಗೆ ತುಂಬಾ ಆನಂದವಾಗುತ್ತದೆ. ನಾವೂ ಉತ್ತಮ ಸಂಗೀತಗಾರರಾಗಬೇಕೆನಿಸುತ್ತದೆ. ಆದರೆ ಆ ಸಂಗೀತಗಾರನ ಯಶಸ್ಸನ್ನು, ಸಿದ್ಧಿಯನ್ನು ನೋಡುತ್ತೇವೆಯೇ ವಿನಾ ಅದರ ಹಿಂದೆ ಇದ್ದ ಆತನ ಶ್ರಮವನ್ನು ನಾವು ನೋಡುವುದಿಲ್ಲ. ದಿನ ಬೆಳಗಾದ ಕೂಡಲೇ ಯಾರೂ ಸಂಗೀತಗಾರರಾಗುವುದಿಲ್ಲ. ಅವಿರತ ಪ್ರಯತ್ನದಿಂದ, ನಿರಂತರ ಸಾಧನೆಯಿಂದ, ಅಖಂಡ ಶ್ರದ್ಧೆಯಿಂದಲೇ ಒಬ್ಬ ಒಳ್ಳೆಯ ಸಂಗೀತಗಾರರಾಗಬಹುದು. ಇವತ್ತು ಸಂಗೀತದಲ್ಲಿ ಪಕ್ವತೆ ಪಡೆಯುವುದಕ್ಕಿಂತಲೂ ಕಚೇರಿ ನಡೆಸಿ ಪ್ರಸಿದ್ಧಿ ಪಡೆಯುವ ಚಾಳಿ ಬೆಳೆಯುತ್ತಿದೆ.

ವಿಶ್ವ ವಿಖ್ಯಾತ ಶಾಸ್ತ್ರೀಯ ಸಂಗೀತಗಾರ ಬೀಥೋವೆನ್‌ರ ಸಂಗೀತ ಕೇಳಿದ ನಂತರ ಒಬ್ಬ ಶ್ರೋತೃ, 'ತಾನು ಹೃತ್ಪೂರ್ವಕವಾಗಿ ಹೊಗಳುತ್ತಿದ್ದರೂ ಬೀಥೋವೆನ್ ಒಂದು ಧನ್ಯವಾದವನ್ನೂ ಹೇಳದೆ ಕಿವಿ ಕೇಳಿಸದವರಂತೆ ಸುಮ್ಮನೆ ನಿಂತಿದ್ದಾರೆ' ಎನ್ನುವ ಭಾವನೆಯನ್ನು ಪಕ್ಕದಲ್ಲಿದ್ದ ಬೀಥೋವೆನ್ನರ ಸ್ನೇಹಿತರಿಗೆ ಬೇಸರದಿಂದ ಹೇಳಿಕೊಂಡರು. ಆ ಸ್ನೇಹಿತರು, "ನೀವು ಹೇಳಿದ ಒಂದು ಶಬ್ದವೂ ಬೀಥೋವೆನ್ನರಿಗೆ ಕೇಳಿಸಿಲ್ಲ. ಏಕೆಂದರೆ ಅವರು ನಿಜವಾಗಿಯೂ ಕಿವುಡರು" ಎಂದಾಗ ಶ್ರೋತೃವಿಗೆ ದಿಗ್ಭ್ರಮೆಯುಂಟಾಯಿತು. ಅವರು ತಮ್ಮ ಪ್ರಶಂಸೆಯ ಮಾತುಗಳನ್ನು ಕಾಗದದಲ್ಲಿ ಬರೆದು ಬೀಥೋವೆನ್ನರಿಗೆ ತೋರಿಸಿದರು. ಅದನ್ನು ಓದಿದ ಬೀಥೋವೆನ್ನರು ನಿಟ್ಟುಸಿರುಬಿಟ್ಟರು. ಶ್ರೋತೃವನ್ನು ಪಕ್ಕಕ್ಕೆ ಕರೆದೊಯ್ದು ಕೂರಿಸಿಕೊಂಡರು. ಅಲ್ಲಿಯೇ ತಮ್ಮ ಬದುಕಿನ ಕತೆಯನ್ನು ಬಿಚ್ಚಿಟ್ಟರು.

"೧೭೭೦ರಲ್ಲಿ ಜರ್ಮನಿಯಲ್ಲಿ ಜನಿಸಿದ ನನಗೆ ಬಾಲ್ಯದಿಂದಲೇ ಸಂಗೀತದಲ್ಲಿ ಅತೀವ ಆಸಕ್ತಿ. ಚೆನ್ನಾಗಿ ಸಂಗೀತ ರಚನೆ ಮಾಡುತ್ತಿದ್ದೆ. ಸೊಗಸಾಗಿ ಪಿಯಾನೋ ನುಡಿಸುತ್ತಿದ್ದೆ. ನನ್ನ ತಂದೆಯವರು ಸ್ವಭಾವತಃ ಬಹಳ ಒರಟರು. ಅವರಿಗೆ ನನ್ನ ಪ್ರತಿಭೆಯನ್ನು ಉಪಯೋಗಿಸಿ ಹಣ ಗಳಿಸುವ ದುರಾಸೆ. ಅವರು ಬಾಲಕನಾದ ನನ್ನನ್ನು ಗಂಟೆಗಟ್ಟಲೆ ಅಭ್ಯಾಸ ಮಾಡುವಂತೆ ಒತ್ತಾಯ ಮಾಡುತ್ತಿದ್ದರು. ಮಾಡದಿದ್ದರೆ ಮುಖ–ಮೂತಿ ನೋಡದೆ ಹೊಡೆಯುತ್ತಿದ್ದರು. ಪಿಯಾನೋ

ನುಡಿಸುವುದರಲ್ಲಿ ಕೊಂಚ ಹೆಚ್ಚು ಕಡಿಮೆಯಾದರೂ ಕಿವಿಗಳು ಮುಚ್ಚಿಹೋಗುವಂತೆ ಕಪಾಳಕ್ಕೆ ಬಾರಿಸುತ್ತಿದ್ದರು. ನಾನು ಆರನೆಯ ವಯಸ್ಸಿಗೇ ಸಂಗೀತ ಕಚೇರಿಗಳನ್ನು ಕೊಡುತ್ತಿದ್ದೆ. ಬಾಲ್ಯದ ಆನಂದವನ್ನು ಅನುಭವಿಸಲೇ ಇಲ್ಲ."

"ನಾನು ಹಾಡುತ್ತಾ ಹಾಡುತ್ತಾ ಇಪ್ಪತ್ತು ವರ್ಷ ವಯಸ್ಸನ್ನು ಮುಟ್ಟಿದೆ. ಆದರೆ ದುರದೃಷ್ಟ ನನ್ನನ್ನು ಕಾಡುತ್ತಲೇ ಇತ್ತು. ನಿಧಾನವಾಗಿ ನನ್ನ ಕಿವಿಗಳು ಕೇಳುವ ಶಕ್ತಿಯನ್ನು ಕಳೆದುಕೊಳ್ಳತೊಡಗಿದವು. ಆದರೆ ನಾನು ಏನೂ ಮಾಡುವಂತಿರಲಿಲ್ಲ. ನನ್ನ ಶಕ್ತಿಗೆ ಮೀರಿದ ಶಕ್ತಿಯೊಂದು ನನ್ನ ಬಾಳಿನಲ್ಲಿ ಚೆಲ್ಲಾಟವಾಡುತ್ತಿತ್ತು. ಕೊನೆಗೊಂದು ದಿನ ನಾನು ಸಂಪೂರ್ಣ ಕಿವುಡನಾದೆ. ಆದರೆ ನಾನು ನನ್ನ ಸಂಗೀತ ಸಾಧನೆಯನ್ನು ಬಿಡಲಿಲ್ಲ. ನನ್ನ ಬಾಳನ್ನು ಸಂಗೀತ ರಚನೆಗೆ ಮೀಸಲಿಟ್ಟೆ. ನನಗೆ ಖ್ಯಾತಿಯನ್ನು ತಂದುಕೊಟ್ಟ ಐದು ಮಹಾನ್ ಸಂಗೀತ ಕೃತಿಗಳ ರಚನೆಗಳನ್ನು ನಾನು ಮಾಡಿದ್ದು ನಾನು ಸಂಪೂರ್ಣ ಕಿವುಡನಾದ ಮೇಲೆ!"

"ಇನ್ನು ಸಂಗೀತ ಕ್ಷೇತ್ರದಲ್ಲಿ ನನ್ನಷ್ಟು ಅದೃಷ್ಟಶಾಲಿಯಾಗುವುದು ಕಷ್ಟವೇನಿಲ್ಲ; ಬದುಕಿನ ನಲವತ್ತು ವರ್ಷಗಳನ್ನು ಪ್ರತಿ ದಿನ ಹತ್ತು ಗಂಟೆಗಳ ಕಾಲ ಪಿಯಾನೋವನ್ನು ಬೇಸರವಿಲ್ಲದೆ ನುಡಿಸುವ ಯಾರು ಬೇಕಾದರೂ ನನ್ನಷ್ಟೇ ಅದೃಷ್ಟಶಾಲಿ ಆಗಬಹುದು!"

ಬೀಥೋವೆನ್ನರ ಸಂಗೀತವನ್ನು ಕೇಳಿ ಆನಂದದ ಕಣ್ಣೀರು ಸುರಿಸಿದ್ದ ಶ್ರೋತೃಗಳು ಈಗ ಅವರ ಸಾಧನೆಯ ಹಾದಿಯನ್ನೂ, ದುರಂತ ಕತೆಯನ್ನೂ ಕೇಳಿ ದುಃಖದ ಕಣ್ಣೀರು ಹರಿಸಿದರು!

ಸಂಗೀತ ಮನುಷ್ಯನಿಗೆ ಶಾಂತಿ, ನೆಮ್ಮದಿ, ಉಲ್ಲಾಸ, ಸ್ಫೂರ್ತಿ, ಧೈರ್ಯ, ಆನಂದ ಎಲ್ಲವನ್ನೂ ತಂದುಕೊಡುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಸಂಗೀತಕ್ಕೆ ಕೊಟ್ಟಷ್ಟು ಮಹತ್ವವನ್ನು ಪ್ರಾಯಶಃ ಜಗತ್ತಿನ ಬೇರೆ ಯಾವುದೇ ಸಂಸ್ಕೃತಿಯೂ ಕೊಟ್ಟಿರಲಿಕ್ಕಿಲ್ಲ. ಈ ದೇಶದಲ್ಲಿ ಸಂಗೀತದಿಂದಲೇ ರೋಗಗಳನ್ನು ಗುಣಪಡಿಸಿದ ಉದಾಹರಣೆ ಇದೆ, ಸಂಗೀತದಿಂದಲೇ ದೀಪವನ್ನು ಬೆಳಗಿಸಿದ ಉದಾಹರಣೆ ಇದೆ, ಸಂಗೀತದಿಂದಲೇ ಮಳೆಯನ್ನು ಸುರಿಸಿದ್ದಿದೆ, ಸಂಗೀತದಿಂದಲೇ ದೇವರ ದರ್ಶನ ಮಾಡಿದವರಿದ್ದಾರೆ. ಸಂಗೀತದಿಂದಲೇ ದೇಶಭಕ್ತರನ್ನು ನಿರ್ಮಾಣ ಮಾಡಿದ ಉದಾಹರಣೆಯೂ ಇದೆ. ಅದೇ ವಂಗಭಂಗವಿರೋಧಿ ಚಳವಳಿಯಲ್ಲಿ ಪ್ರಭಾವಿಯಾಗಿ ಕೆಲಸ ಮಾಡಿದ, ಬಂಕಿಮಚಂದ್ರ ಚಟರ್ಜಿಯವರು ಬರೆದ ದೇಶಭಕ್ತಿ ಗೀತೆ ವಂದೆ ಮಾತರಂ. ಇಡೀ ದೇಶದಲ್ಲಿ ಈ ಮಂತ್ರವೇ ಬ್ರಿಟಿಷರನ್ನು ಅತಂತ್ರರನ್ನಾಗಿ ಮಾಡಿತು. ಈ ಮಂತ್ರವೇ ದೇಶಭಕ್ತರ ಸ್ತೋತ್ರವಾಯಿತು. ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಪ್ರಬಲ ಶಸ್ತ್ರವಾಯಿತು. ಹೀಗೆ ಒಂದು ಹಾಡು ಈ ದೇಶಕ್ಕೆ ಸ್ವಾತಂತ್ರ್ಯ ದೊರೆಯುವಲ್ಲಿ ಮಹತ್ವದ ಪಾತ್ರ ವಹಿಸಿತು.

ರೋಗಗಳನ್ನು ಗುಣಪಡಿಸುವುದರಲ್ಲಿ ಸಂಗೀತದ ಕೊಡುಗೆಯ ಬಗ್ಗೆ ಇಂದು ಸಂಶೋಧನೆ ನಡೆಯುತ್ತಿದೆ. ಮುಂಬಯಿ ಆಸ್ಪತ್ರೆಯೊಂದರಲ್ಲಿ ಹದಿಹರೆಯದಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಮಾನಸಿಕ ರೋಗಿಯಾಗಿ ಮಾತು ಕಳೆದುಕೊಂಡು ಹಲವು ವರ್ಷಗಳ ಕಾಲ ಮೌನಿಯಾಗಿದ್ದ ಓರ್ವ ರೋಗಿಗೆ ಹಾಡು ಕೇಳಿಸಿದಾಗ, ಹಲವು

ವರ್ಷಗಳ ನಂತರ ಮೊತ್ತಮೊದಲ ಸಲ ನಕ್ಕು ಸಂತೋಷ ವ್ಯಕ್ತಪಡಿಸಿದ ಉದಾಹರಣೆ ನಮ್ಮ ಮುಂದಿದೆ.

ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸಿ. ಅಶ್ವತ್ಥರ ಕಾರ್ಯಕ್ರಮ. ಅಲ್ಲಿ ಡಾ॥ ಧ್ರುವ ಎಂಬುವರೊಬ್ಬರು ಪಾರ್ಶ್ವವಾಯು ಪೀಡಿತರು. ನಾಲಗೆ ಸತ್ತಿದೆ, ಮಾತು ಹೋಗಿದೆ, ಕೈಕಾಲು ಸ್ವಾಧೀನದಲ್ಲಿಲ್ಲ. ಸರಿದಾಡಲು ಗಾಲಿಕುರ್ಚಿಯೇ ಗತಿ. ಈ ಸ್ಥಿತಿಯಲ್ಲಿರುವ ಅವರಿಗೆ ಅಶ್ವತ್ಥರ ಹಾಡೆಂದರೆ ಅಪ್ಯಾಯಮಾನ. ಅಂದು ಅಲ್ಲಿ ಅಶ್ವತ್ಥ ಹಾಡುವುದಿದೆ ಎಂದು ತಿಳಿಯುತ್ತಲೆ, ಅವರು ಹಾಡುವುದನ್ನು ನೇರವಾಗಿ ಎದುರು ಕೂತು ಆಲಿಸಬೇಕೆಂಬ ತಮ್ಮ ಆಸೆಯನ್ನು ಸನ್ನೆ ಮಾಡುತ್ತ ತನ್ನವರಿಗೆ ಧ್ರುವ ಸೂಚಿಸಿದರು. ಅವರಾಸೆಯಂತೆ ಅವರನ್ನು ಗಾಲಿಕುರ್ಚಿಯಲ್ಲಿ ಕೂರಿಸಿ ಕರೆದುತಂದು, ವೇದಿಕೆಯಲ್ಲಿ ಹಾಡುತ್ತಿದ್ದ ಅಶ್ವತ್ಥರ ಎದುರು ಮೊದಲ ಸಾಲಿನಲ್ಲಿ ಕೂರಿಸಿದ್ದಾಯಿತು. ಅಶ್ವತ್ಥ್ ಹಾಡುತ್ತಿದ್ದರು, ಧ್ರುವ ಕಣ್ಮುಚ್ಚಿ ತಲೆತಗ್ಗಿಸಿ ಕೇಳುತ್ತಿದ್ದರು. ಶಕ್ತಿಯನ್ನು ಪೂರ್ಣವಾಗಿ ಕಳೆದುಕೊಂಡಿದ್ದ ಅವರ ಕೈಗಳು ಅಶ್ವತ್ಥ್ ಹಾಡುತ್ತಿದ್ದಂತೆ ನಿಧಾನವಾಗಿ ಅಲುಗಲಾರಂಭಿಸಿ ಕ್ರಮೇಣ ತಾಳ ಹಾಕಲಾರಂಭಿಸಿದಾಗ, ಅಕ್ಕಪಕ್ಕದಲ್ಲಿದ್ದು ಇವರಲ್ಲಾಗುತ್ತಿದ್ದ ಈ ಬದಲಾವಣೆಯನ್ನು ಎವೆಯಿಕ್ಕದೇ ಗಮನಿಸುತ್ತಿದ್ದ ಅವರ ಮನೆಯವರಿಗೆ ಆದ ಆನಂದ ಹೇಳತೀರದು. ಅನಂತರ ಧ್ರುವರ ಕುಟುಂಬದವರಿಗೆ ಮತ್ತೊಂದು ಆಶ್ಚರ್ಯ ಕಾದಿತ್ತು. ಲಕ್ವಾ ಹೊಡೆದಂದಿನಿಂದ ನಾಲಗೆ ಸತ್ತು ಒಂದಕ್ಷರವನ್ನೂ ನುಡಿಯದಿದ್ದ ಧ್ರುವ, ಒಂದು ಹಂತದಲ್ಲಿ ತಲೆ ಎತ್ತಿ 'ತಾ...... ತಾ......, ತಾಳ, ತಂಬೂ.......ಬೂರೀ...... ಹಾ..ಹಾ..ಡಿ' ಎಂದು ತಡೆತಡೆದು ತೊದಲುತ್ತ ನುಡಿದಾಗ ಧ್ರುವರ ಕುಟುಂಬದವರಲ್ಲಿ ಆನಂದ ಉ ಕ್ಕಿ ಅವರನ್ನು ಅಪ್ಪಿ ಗಳಗಳನೆ ಅತ್ತುಬಿಟ್ಟರಂತೆ.

ಎಲ್. ಜಿ. ವಿಮಲಾ, ಎಲ್. ಜಿ. ಸುಮಿತ್ರಾ – ಇವರು ಹಿಂದೊಂದು ಕಾಲದಲ್ಲಿ ಬೆಂಗಳೂರಿನಲ್ಲಿದ್ದಾಗ ಲಘು ಸಂಗೀತದಲ್ಲಿ ಹೆಸರು ಮಾಡಿದ್ದವರು. ಮದುವೆಯಾದ ಬಳಿಕ ನ್ಯೂಜೆರ್ಸಿಯಲ್ಲಿ ನೆಲೆಸಿರುವ ವಿಮಲಾ ತಮ್ಮ ಬಿಡುವಿನ ಸಮಯವನ್ನು ತಮ್ಮ ಮನೆಯ ಸಮೀಪದಲ್ಲಿರುವ ಮನೋವೈದ್ಯ ಕೇಂದ್ರವೊಂದರಲ್ಲಿ ಬುದ್ಧಿ ಮಾಂದ್ಯತೆಯಿಂದ ನರಳುತ್ತಿರವವರ ಸೇವೆಯಲ್ಲಿ ಕಳೆಯುತ್ತಿದ್ದಾರೆ. ಸ್ವಯಂ ಸಂಗೀತ ವಿದುಷಿಯಾಗಿರುವ ವಿಮಲಾ ಅಲ್ಲಿನ ಮನೋರೋಗಿಗಳ ಮಾನಸಿಕ ಸಾಂತ್ವನಕ್ಕೆ ಬಳಸುವುದು ಹೆಚ್ಚಾಗಿ ಭಾರತೀಯ ಸಂಗೀತವನ್ನೇ. ಅವರಿಗೆ ಅಲ್ಲಿ ಅಶ್ವತ್ಥರ ಹಾಡಿನಿಂದಾದ ವಿಚಿತ್ರ ಅನುಭವ ವಿಸ್ಮಯ ಮೂಡಿಸುವಂತದ್ದು. ನ್ಯೂಜೆರ್ಸಿಯ ಆ ಮಾನಸಿಕ ಚಿಕಿತ್ಸಾಕೇಂದ್ರದಲ್ಲೊಬ್ಬ ಬುದ್ಧಿಮಾಂದ್ಯ ಮಧ್ಯವಯಸ್ಕ. ಆತ ಬಾಯಿ ಬಿಟ್ಟಿದ್ದಿಲ್ಲ, ಕಣ್ಣು ತೆರೆದಿದ್ದಿಲ್ಲ. ಯಾರೋ ಹಾಡಿರುವ ಎಂಥದೇ ಗೀತೆಯನ್ನು ಹಾಕಿದಾಗಲೂ ಆತ ಪ್ರತಿಕ್ರಿಯಿಸುವುದಿಲ್ಲ. ಆದರೆ ಅಶ್ವತ್ಥರ ಹಾಡು ಕೇಳುತ್ತಿದ್ದಂತೆಯೇ ಆತ ಚಕಿತನಾಗುತ್ತಾನೆ, ಕಣ್ತೆರೆಯುತ್ತಾನೆ, ಕಿವಿಗೊಟ್ಟು ತದೇಕ ಚಿತ್ತನಾಗಿ ಕೇಳಲಾರಂಭಿಸುತ್ತಾನೆ. ಬೆಂದ ಹೃದಯದ ಆ ನೊಂದಜೀವಿ ಅಶ್ವತ್ಥರ ಕಂಠದಿಂದ ಹೊರಹೊಮ್ಮುವ ನಾದದಲೆಗೆ ಸ್ಪಂದಿಸುತ್ತಾನೆ. ಹೀಗೆ ಆತ ಅಶ್ವತ್ಥರ ಹಾಡನ್ನು ಕೇಳುತ್ತಿರುವ ಸಮಯದಲ್ಲಿ ಅದನ್ನು ನಿಲ್ಲಿಸಿ ಬೇರೆಯವರ ಹಾಡನ್ನು

ಹಾಕಿದರೆ, ಕೂಡಲೆ ಎದ್ದು, "ನಾನ್ ಸೆನ್ಸ್! ಸ್ಟಾಪ್ ಇಟ್" ಎಂದು ಅಬ್ಬರಿಸಿ ಅಶ್ವತ್ಥರ ಕ್ಯಾಸೆಟ್ಟನ್ನು ತೋರಿಸುತ್ತಾ "ಪುಟ್ ಇಟ್, ಐ ವಾಂಟ್ ಅಶ್ವತ್ಥ್..... ಓನ್ಲಿ ಅಶ್ವತ್ಥ್" ಎನ್ನುತ್ತಾನೆಂದು ವಿಮಲಾ ಹೇಳಿದಾಗ ಅಶ್ವತ್ಥರಿಗೇ ಆಶ್ಚರ್ಯವಾಯಿತು.

ಸಂಗೀತಕ್ಕೆ ಬಹಳಷ್ಟು ಶಕ್ತಿಯಿದೆ. ಜಗತ್ತನ್ನೇ ಪರಿವರ್ತಿಸುವ ಗುಣ ಸಂಗೀತಕ್ಕಿದೆ. 'ಮಾನವಕುಲದ ಸಾರ್ವತ್ರಿಕ ಭಾಷೆಯೇ ಸಂಗೀತ' ಎಂಬುದಾಗಿ ಲಾಂಗ್‌ಫೆಲೋ ಹೇಳಿದ್ದಾನೆ. ಸಂಗೀತ ಎಂಬುದು ಜಾಗತಿಕ ಭಾಷೆ. ಭಾಷೆ ಅರ್ಥವಾಗದಿದ್ದರೂ ಒಳ್ಳೆಯ ಸಂಗೀತವನ್ನು ಅಸಕ್ತಿಯಿಂದ ಆಲಿಸುತ್ತೇವೆ. ಮರಾಠಿ ಭಾಷೆಯ ಅರ್ಥ ಆಗದಿದ್ದರೂ ಅಭಂಗಗಳನ್ನು ಶ್ರದ್ಧೆಯಿಂದ ಆಲಿಸಿ ಆಸ್ವಾದಿಸುತ್ತೇವೆ. ದೇಶ, ಭಾಷೆಗಳ ಗಡಿ ಸಂಗೀತಕ್ಕಿಲ್ಲ. ಸಂಕುಚಿತತೆ ಎಂಬುದರ ಅರ್ಥ ಸಂಗೀತಕ್ಕೆ ಗೊತ್ತಿಲ್ಲ. ಅದು ಜಗತ್ತಿನ ಎಲ್ಲರನ್ನೂ ಬಾಚಿ, ತಬ್ಬಿ, ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಸಂಗೀತಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರೆ ಜಗತ್ತಿನಲ್ಲಿ ನಡೆಯುವ ಅಪರಾಧಗಳು ಕಡಿಮೆಯಾಗುವ ಸಂಭವವಿದೆ. ಏಕೆಂದರೆ ಸಂಗೀತವು ಮನಸ್ಸಿನ ವಿಕಾರವನ್ನು ಶಮನಗೊಳಿಸುತ್ತದೆ.

ಹಿಂದಿನ ರಾಜರುಗಳು ಆಡಳಿತದ ಭಾರವನ್ನು ಕಡಿಮೆಗೊಳಿಸಿ ಮನಸ್ಸನ್ನು ಉಲ್ಲಸಿತಗೊಳಿಸಲು ಸಂಗೀತಕ್ಕೆ ಶರಣಾಗುತ್ತಿದ್ದರು. ಎಲ್ಲ ರಾಜರ ಆಸ್ಥಾನದಲ್ಲೂ ಸಂಗೀತ ವಿದ್ವಾಂಸರಿರುತ್ತಿದ್ದರು. ಸಮಯ ಸಿಕ್ಕಾಗ ಸಂಗೀತ ಕಚೇರಿಯನ್ನು ಏರ್ಪಡಿಸುತ್ತಿದ್ದರು. ಸಂಗೀತ ವಿದ್ವಾಂಸರಿಗೆ ಗೌರವದ ಸ್ಥಾನವನ್ನು ಕೊಟ್ಟು ಹೆಚ್ಚಿನ ಮನ್ನಣೆಯನ್ನು ಕೊಡುತ್ತಿದ್ದರು. ಸಂಗೀತ ಕೇಳುವುದರಿಂದ ಒತ್ತಡ ಕಡಿಮೆಯಾಗಿ ಸರಿಯಾದ ರೀತಿಯಲ್ಲಿ ರಾಜ್ಯಭಾರ ಮಾಡಲು ಹೆಚ್ಚಿನ ಸ್ಫೂರ್ತಿ ಸಿಗುತ್ತಿತ್ತು.

ಮನುಷ್ಯ ಸಾಯುವ ಸಮಯದಲ್ಲೂ ಸಂಗೀತವನ್ನು ಬಯಸುತ್ತಾನೆ. ಸಂಗೀತ ಸಾವಿನ ನೋವನ್ನೂ ಶಮನಗೊಳಿಸುತ್ತದೆ.

(ಸಾಭಾರ : ಉತ್ಥಾನ)

* * *

ಸಂತಾಪ

ಸರ್ವೋದಯ ಆಂದೋಲನದ ಹಿರಿಯ ಚೇತನ, ಲೋಕನಾಯಕ ಜಯಪ್ರಕಾಶ ನಾರಾಯಣರ ಸಹವರ್ತಿ, ಭೂದಾನ ಆಂದೋಲನದ ಹಿರಿಯ ನಾಯಕ, ಪದ್ಮಶ್ರೀ ಭೂಷಿತ ಆಗಿದ್ದ, ರಾಜನೀತಿ ಮತ್ತು ಇತಿಹಾಸ ಶಿಕ್ಷಕರು ಹಾಗೂ ಸರ್ವಸೇವಾ ಸಂಘದ ಅಧ್ಯಕ್ಷರು ಮತ್ತು ವಿ.ಪಿ.ಸಿಂಗ್ ಪ್ರಧಾನ ಮಂತ್ರಿಯಾಗಿದ್ದಾಗ ಶೈಕ್ಷಣಿಕ ಸಮೀಕ್ಷಾ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದಂಥ ರಾಮಮೂರ್ತಿ ತಮ್ಮ ೯೭ನೇ ವಯಸ್ಸಿನಲ್ಲಿ ಜೂನ್ ೨೦೧೧ರಲ್ಲಿ ವಿಧಿವಶರಾದರು. ರಾಮಮೂರ್ತಿಯವರಿಗೆ ಜನಪದ ವಿಚಾರವು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಪ್ರಚಲಿತ ಪರಿಸ್ಥಿತಿಯಲ್ಲಿ ಸರ್ವೋದಯ ಆಂದೋಳನವನ್ನು ತೀವ್ರಗೊಳಿಸಬೇಕಾದ ತೀವ್ರ ಅವಶ್ಯಕತೆಯಿದೆ.

- ಸುರೇಂದ್ರ ಕೌಲಗಿ

(ಜೂನ್ ೮ರಂದು ಮಂಡ್ಯದ ಗಾಂಧೀ ಭವನದಲ್ಲಿ ನಡೆದ "ಸರ್ವೋದಯ ಯುಗಮಂತ್ರ" ವೈಚಾರಿಕ ವಿಚಾರಗೋಷ್ಠಿಯಲ್ಲಿ ಮಂಡಿಸಲಾದ ಪ್ರಬಂಧ)

ಸತ್ಯ ಮತ್ತು ಅಹಿಂಸಾಮಾರ್ಗವನ್ನು ಅರಿತು ಅರಿತೂ ಎರಡನ್ನೂ ಅನುಸರಿಸುತ್ತಿರುವ ದೇಶವೆಂದರೆ ಭೂಮಂಡಲದಲ್ಲೆಲ್ಲ ಭಾರತ ಒಂದೇ.

- ಗಾಂಧೀ (೧೮-೮-೧೯೨೦)

ಸಮಾಜವಾದವನ್ನೂ, ಸಾಮ್ಯವಾದವನ್ನೂ ಬಂಡವಾಳಶಾಹಿ ಸೋಲಿಸಿದೆ. ಸಾಮ್ಯವಾದಿ ದೇಶಗಳಾಗಿದ್ದ ರಶಿಯಾ ಮತ್ತು ಚೀಣಾ ಕ್ರಮೇಣ ಬಂಡವಾಳಶಾಹಿತ್ವವನ್ನು ಅಳವಡಿಸಿಕೊಳ್ಳುತ್ತಿವೆ. ಬಂಡವಾಳಶಾಹಿ ಬೆಳೆಯುತ್ತ ಹೋದಂತೆ ಜಗತ್ತಿನಾದ್ಯಂತ ಅಶಾಂತಿ, ಅಸಮಾನತೆ, ವೈಷಮ್ಯ ಮತ್ತು ಪರಿಸರನಾಶಕ್ಕೆ ಕಾರಣವಾಗುತ್ತಲಿದೆ. ಮಾವೋವಾದ ಔಚಿತ್ಯಮೀರಿ ಹಿಂಸಾಚಾರಕ್ಕೆ ಇಳಿದಿದೆ. ನಕ್ಸಲ್‌ವಾದಕ್ಕೆ ಯಾವುದೇ ಸಿದ್ಧಾಂತವಿಲ್ಲ. ಕಾಡುಮೇಡುಗಳಲ್ಲಿ ಬೀಡುಬಿಟ್ಟಿವೆ. ಎಲ್ಲ ದೇಶಗಳ ಎಲ್ಲ ರಾಜಕೀಯ ಪಕ್ಷಗಳು ತಾತ್ವಿಕವಾಗಿ ಹಾಗು ನೈತಿಕವಾಗಿ ದಿವಾಳಿಯೆದ್ದಿವೆ. ಧರ್ಮಗಳ ಆಚರಣೆ ಅಧರ್ಮಯುತವಾಗಿ ನಡೆಯುತ್ತಿದೆ. ಹಳೆಯ ವ್ಯವಸ್ಥೆ ಕಿತ್ತುಹೋಗುತ್ತಿದೆ. ಅದರ ಸ್ಥಾನದಲ್ಲಿ ಸುಯೋಗ್ಯ ವ್ಯವಸ್ಥೆ ನಿರ್ಮಾಣಗೊಂಡಿಲ್ಲ. ಪರಿಣಾಮವಾಗಿ ಸಮಾಜದಲ್ಲಿ ಗೊಂದಲ, ಅವ್ಯವಸ್ಥೆ, ದಿಗ್ಭ್ರಮೆ, ಕ್ಷೋಭೆ ಮುಂತಾದ ಲಕ್ಷಣಗಳು ಕಾಣಿಸಿಕೊಂಡಿವೆ. ಜಗತ್ತು ಇನ್ನು ಮುಂದೆ ಕ್ರಮಿಸಬೇಕಾದ ಸರಿಯಾದ ದಾರಿಯಾವುದೆಂಬುದರ ಬಗ್ಗೆ ಲೋಕನಾಯಕರಿಗೆಲ್ಲ ಸ್ಪಷ್ಟವಾದ ತಿಳುವಳಿಕೆ ಮೂಡಿಲ್ಲ. ಪ್ರತಿಯೊಂದು ದೇಶವು ತಾನು ಬದುಕುವ ಬಗೆ ಹೇಗೆ, ತನ್ನ ಸ್ವಾರ್ಥ ಎಲ್ಲಿ ಸುರಕ್ಷಿತವಾಗಿದೆ ಎಂಬುದನ್ನೇ ವಿದೇಶ ನೀತಿಯನ್ನಾಗಿಟ್ಟುಕೊಂಡಿವೆ. ಆದ್ದರಿಂದ ದೇಶಗಳ ಮಧ್ಯೆಯೂ ಮತ್ತು ಆಯಾ ದೇಶದಲ್ಲಿಯ ರಾಜ್ಯಗಳ ಮಧ್ಯೆಯೂ ವಿನಾಶಕಾರಿ ಪೈಪೋಟಿ ನಡೆಯುತ್ತಿದೆ. ಮೊದಲನೆ ಮಹಾಯುದ್ಧವಾಯಿತು. ಮುಂದೆ ಜಗತ್ತನ್ನು

ಯುದ್ಧರಹಿತವನ್ನಾಗಿ ಮಾಡಬೇಕೆಂಬ ಉದ್ದೇಶ್ಯದಿಂದ ಲೀಗ್ ಆಫ್ ನೇಶನ್ಸ್ ಸ್ಥಾಪಿತವಾಯಿತು. ಆದರೂ ಎರಡನೆ ಮಹಾಯುದ್ಧವಾಯಿತು. ಅರ್ಧ ಜಗತ್ತೇ ನಾಶವಾಯಿತು. ಇನ್ನು ಮುಂದಾದರೂ ಜಗತ್ತು ಯುದ್ಧರಹಿತವಾಗಲೆಂದು ಸಂಯುಕ್ತರಾಷ್ಟ್ರ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆದರೆ ಅದು ಬಲಾಢ್ಯ ರಾಷ್ಟ್ರಗಳ ತೊತ್ತಾಗಿದೆ. ಅದರ ಕೈಕಾಲುಗಳು ನಡಗುತ್ತಿವೆ. ಮೂರನೆ ಮಹಾಯುದ್ಧವನ್ನು ತಪ್ಪಿಸಲು ಅಸಮರ್ಥವಾಗಿದೆ. ಜಗತ್ತು ಮುಂದುವರಿದ ದೇಶಗಳ ಸಮೂಹ, ಮುಂದುವರಿಯುತ್ತಿರುವ ದೇಶಗಳ ಸಮೂಹ, ಹಿಂದುಳಿದಿರುವ ದೇಶಗಳ ಸಮೂಹ ಎಂಬ ಹೆಸರಿನಲ್ಲಿ ವಿಭಜಿತಗೊಂಡಿದೆ. ಈ ವಿಭಜನೆಗೆ ಆರ್ಥಿಕ ಅಂಶವೇ ಪ್ರಧಾನ ಕಾರಣವಾದರೆ, ಇನ್ನೊಂದು ಅಂಶ ರಾಜಕೀಯ ಕಾರಣದಿಂದಲೂ ಇದೆ. ಅಲ್ಲದೆ, ಚೀಣ ದೇಶ ವಿಭಜಿತಗೊಂಡಿದೆ, ಕೊರಿಯಾ ವಿಭಜಿತಗೊಂಡಿದೆ, ಪ್ಯಾಲೆಸ್ಟೈನ್ ವಿಭಜಿತಗೊಂಡಿದೆ. ರಶಿಯಾ ವಿಭಜಿತಗೊಂಡಿತು. ಈ ವಿಭಜನೆಗಳು ಸಾಲದೆಂಬಂತೆ ಪ್ರತಿಯೊಂದು ದೇಶದಲ್ಲಿ ವಿಚ್ಛಿದ್ರಕಾರಕ ಶಕ್ತಿಗಳು ಹುಟ್ಟಿಕೊಂಡಿವೆ. ತಮ್ಮ ತಮ್ಮ ಸ್ವತಂತ್ರ ಪ್ರದೇಶಗಳಿಗಾಗಿ ಹಿಂಸಾಯುಕ್ತ ಹೋರಾಟ ನಡೆಸಿವೆ.

ಜಗತ್ತಿನ ಎಲ್ಲ ವಿಕೋಪಗಳಿಗೆ ಅಪರಾಧಿ ಸ್ಥಾನದಲ್ಲಿರುವುದು ವಿಜ್ಞಾನ ಮತ್ತು ತಂತ್ರಜ್ಞಾನ. ಮೂಲಭೂತವಾಗಿ ಇವೆರಡು ಮನುಷ್ಯನ ಜ್ಞಾನದ ಬೆಳವಣಿಗೆಯ ಸಂಕೇತಗಳು. ಈ ಜ್ಞಾನದ ಸುರಭಿಯ ಮಂಥನದಿಂದ ಹೊರಬಂದ ವಸ್ತುಗಳು ಮಾತ್ರ ರಾಜಕಾರಣದ ಕೈಗೆ ದೊರೆಕಿವೆ. ಆದ್ದರಿಂದ ತಂತ್ರಜ್ಞಾನ ಮತ್ತು ವಿಜ್ಞಾನದ ಉಪಯೋಗ ಅನೇಕ ಸಲ ತಪ್ಪು ಉದ್ದೇಶ್ಯಗಳಿಗೆ ಆಗುತ್ತಿದೆ. ಮಾನವನು ಸಹ ಭೋಗವಸ್ತುಗಳ ದಾಸನಾಗಿದ್ದಾನೆ. ಪುರಾಣ ಕಾಲದ ಸಮುದ್ರ ಮಂಥನದ ಕಾಲಕ್ಕೆ ಉಂಟಾದ ದಾನವ ಮತ್ತು ಮಾನವರಲ್ಲಿಯ ಕಿತ್ತಾಟದಂತೆಯೇ ಇಂದು ಮನುಷ್ಯ ವರ್ಗದಲ್ಲಿ ಕಿತ್ತಾಟ ನಡೆಯುತ್ತಿದೆ. ಯಾರು ಹೆಚ್ಚು ಹೆಚ್ಚು ಭೋಗವಸ್ತುಗಳನ್ನು ಪಡೆಯುವುದರಲ್ಲಿ ಸಮರ್ಥರಾಗಿದ್ದಾರೆಂಬ ಪರೀಕ್ಷೆಗಾಗಿ ಪೈಪೋಟಿ ನಡೆಯುತ್ತಿದೆ. ಭೋಗವಸ್ತುಗಳ ತಯಾರಿಕೆಗೆ ಭೂ ಸಂಪತ್ತು, ಅರಣ್ಯ ಸಂಪತ್ತು, ಸಾಗರ ಸಂಪತ್ತು ಇತ್ಯಾದಿ ಪಂಚಭೂತಗಳೆಲ್ಲವೂ ನಾಶವಾಗುತ್ತಿವೆ, ಜಗತ್ತಿನಲ್ಲಿರುವವರೆಲ್ಲರ ಎಲ್ಲ ಅವಶ್ಯಕತೆಗಳನ್ನೂ ಪೂರೈಸುವಷ್ಟು ಪ್ರಕೃತಿ ಸಮರ್ಥವಾಗಿದೆ. ಆದರೆ ಓರ್ವ ವ್ಯಕ್ತಿಯ ದುರಾಸೆಯನ್ನು ಪೂರೈಸಲು ಪ್ರಕೃತಿ ಅಸಮರ್ಥವಾಗಿರುವಾಗ ಜಗತ್ತಿನಲ್ಲಿರುವ ಎಲ್ಲ ಮನಷ್ಯರೂ ದುರಾಶೆಯುಳ್ಳವರಾದರೆ ಪ್ರಕೃತಿಯ ಪಾಡೇನೆಂಬುದು ಎಲ್ಲರಿಗೂ ಸುಲಭವಾಗಿ ಅರ್ಥವಾಗುವ, ಅನುಭವಕ್ಕೆ ಬರುವ ಸಂಗತಿಯಾಗಿದೆ. ೨೦೧೫ ರ ವೇಳೆಗೆ ಭಾರತದ ಅನೇಕ ನಗರಗಳಲ್ಲಿ ವಾಹನಗಳ ದಟ್ಟಣೆ ಎಷ್ಟಾಗಿರುತ್ತದೆಯೆಂದರೆ ಅವುಗಳನ್ನು ಓಡಿಸಲು, ನಿಲ್ಲಿಸಲು ಸಹ ಸ್ಥಳ ಇಲ್ಲವಾಗುತ್ತದೆ. ಜೊತೆಗೆ ಗಾಳಿಯಲ್ಲಿ ಕಾರ್ಬನ್ ಡೈ ಆಕ್ಸೈಡ್ ಸೇರಿ ಜನರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಹಿಮಶಿಖರಗಳು ಕರಗುತ್ತಿವೆ, ಸಮುದ್ರದ ಪಾತಳಿ ಏರುತ್ತದೆ. ನಗರಗಳು, ದ್ವೀಪಗಳು ಮುಳುಗುತ್ತವೆ. ಆಕಾಶಂ ಪತಿತಂ ತೋಯಂ ಯಥಾಗಚ್ಛತಿ ಸಾಗರಂ ಎಂಬುವಂತೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿಯ ಪ್ರತಿಯೊಂದು ಶೋಧನೆಯೂ ಪರಿಸರದ ಮೇಲೆ

ಪ್ರಹಾರ ಮಾಡುತ್ತದೆ. ಆದರೆ ಈ ತಂತ್ರಜ್ಞಾನ ಮತ್ತು ವಿಜ್ಞಾನ ತಂದುಕೊಡುವ ಭೌತಿಕಸುಖ ಮತ್ತು ಶ್ರೀಮಂತಿಕೆಯ ಕಾರಣದಿಂದ ಅವನು ಜೀವನದ ನಿಜವಾದ ಮೌಲ್ಯಗಳನ್ನರಿಯಲು ಅಸಮರ್ಥನಾಗುತ್ತಿದ್ದಾನೆ, ಕುರುಡನಾಗುತ್ತಿದ್ದಾನೆ. ಮನುಷ್ಯನ ಸಮಸ್ತ ಜೀವನದಲ್ಲಿ ಭೌತಿಕ ವಸ್ತುಗಳ ಸುಖ ಮತ್ತು ಹಣ ಎಷ್ಟು ಶಕ್ತಿಶಾಲಿಯಾಗಿ ಬಿಟ್ಟಿವೆಯೆಂದರೆ ಅವನ ಜೀವನವ್ಯಾಪಾರದಲ್ಲಿ ಸತ್ಯ ಮತ್ತು ಅಹಿಂಸೆ ಇಲ್ಲವಾಗಿಬಿಟ್ಟಿವೆ. ಅವುಗಳ ಸ್ಥಾನದಲ್ಲಿ ಅಸತ್ಯ ಮತ್ತು ಹಿಂಸೆ ಬಂದು ಬಿಟ್ಟಿವೆ.

ಅಸತ್ಯ ಮತ್ತು ಹಿಂಸೆಯಿಂದ ಸಮಾಜದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. ಮನುಷ್ಯ ಸಮಾಜಜೀವಿ. ಪ್ರೇಮ ಮತ್ತು ಸ್ನೇಹದಿಂದ ಅವನ ವಿಕಾಸ. ಆದರೆ ಅಸತ್ಯ ಮತ್ತು ಹಿಂಸೆ ಅವನನ್ನು ಸಮಾಜದಿಂದ ವಿಮುಖನನ್ನಾಗಿ ಮಾಡುತ್ತವೆ, ಸಂಗವನ್ನು ಒಡೆಯುತ್ತವೆ. ಪ್ರೇಮದ ಬದಲು ದ್ವೇಷ, ಸ್ನೇಹದ ಬದಲು ವೈರತ್ವವನ್ನು ಉಂಟುಮಾಡುತ್ತವೆ. ದುರ್ದೈವದ ಸಂಗತಿಯೆಂದರೆ ಜಗತ್ತಿನ ಎಲ್ಲ ದೇಶಗಳ ಸರ್ಕಾರಗಳು ರಾಜಕಾರಣದ ದೆಸೆಯಿಂದಾಗಿ ತಮ್ಮ ಆಡಳಿತದ ಸೂತ್ರವನ್ನಾಗಿ ಅಸತ್ಯ ಮತ್ತು ಹಿಂಸೆಯನ್ನೇ ಇಟ್ಟುಕೊಂಡಿವೆ. ರಾಜ್ಯಾಂತೆ ನರಕಪ್ರಾಪ್ತಿಃ ಎಂಬಂತೆ ಇಂದಿನ ರಾಜಕಾರಣಿಗಳು ನರಕಕ್ಕೇ ಹೋಗಲು ಯೋಗ್ಯವಾಗಿದ್ದಾರೆ. ಇದರ ಪರಿಣಾಮವೇ ಭ್ರಷ್ಟಾಚಾರ, ಕೋಮು ಸಂಘರ್ಷ, ಅನೈತಿಕತೆ, ಭಟ್ಟಂಗಿತನ ಮತ್ತು ಹಿಂಸಾಚಾರ, ದಂಡಶಕ್ತಿಯ ಹೆಚ್ಚಳ. ಆಯಾ ದೇಶದಲ್ಲಿಯ ಜನರ ಹೃದಯಗಳನ್ನು ಜೋಡಿಸುವುದರ ಬದಲಾಗಿ, ವಿಭಜಿಸುವ ಕೆಲಸ ನಡೆಯುತ್ತಿದೆ.

ಈಗ ಸ್ಪಷ್ಟವಾಗಿ ಕಾಣಿಸುತ್ತಿರುವ ಸಂಗತಿಯೆಂದರೆ ಪ್ರತಿಯೊಂದು ಸಂಘಟನೆಯೂ ತಾನು ಇಟ್ಟುಕೊಂಡಿರುವ ಸಿದ್ಧಾಂತ ತನ್ನ ದೇಶಕ್ಕಿಂತಲೂ ದೊಡ್ಡದೆಂದು ಭಾವಿಸಿರುವುದು. ಇದಕ್ಕೆ ಬದಲಾಗಿ ದೇಶ ದೊಡ್ಡದು, ಸಿದ್ಧಾಂತವಲ್ಲ ಎಂಬ ಅರಿವು ಮವೋವಾದಿಗಳಿಗೂ, ನಕ್ಸಲೀಯರಿಗೂ, ಕೋಮುವಾದಿಗಳಿಗೂ, ಜಾತಿವಾದಿಗಳಿಗೂ ಮೂಡಿದ್ದರೆ ಸ್ವತಂತ್ರ ಭಾರತದ ಸ್ಥಿತಿ ಶೋಚನೀಯವಾಗುತ್ತಿರಲಿಲ್ಲ. ಯಾರು ತಮ್ಮ ಸಿದ್ಧಾಂತ ದೇಶಕ್ಕಿಂತ ದೊಡ್ಡದೆಂದು ಭಾವಿಸುತ್ತಾರೋ ಅಂಥವರು ದೇಶವನ್ನು ಹಾಳುಗೆಡುಹುವುದಲ್ಲದೆ ತಾವೂ ಹಾಳಾಗುತ್ತಾರೆ. ಇದಕ್ಕೆ ಉದಾಹರಣೆಯಾಗಿ ನಮ್ಮ ಮುಂದೆ ಮಾವೋವಾದಿಗಳೂ, ನಕ್ಸಲವಾದಿಗಳೂ ಬಂಡವಾಳಶಾಹಿವಾದಿಗಳೂ ಇದ್ದಾರೆ. ತಾಲಿಬಾನಿಗಳೂ ಇದ್ದಾರೆ, ಕೋಮು ಆಧಾರಿತ ಇತರ ಸಂಘಟನೆಗಳೂ ಇವೆ. ಹಿಂಸಾಚಾರದಿಂದಲೇ ವ್ಯವಸ್ಥೆಯನ್ನು ಬದಲಿಸುವ ಉಪಕ್ರಮಕ್ಕೆ ಬೆಂಬಲವಾಗಿ ಅರುಂಧತಿರಾಯ್‌ರಂಥ ಬುದ್ಧಿಜೀವಿಯೆಂದೆನಿಸಿಕೊಳ್ಳುವವರ ಸಮರ್ಥನೆ ದೊರಕುತ್ತಿರುವುದು ದೇಶದ ಹಿತಕ್ಕೆ ಇನ್ನೂ ಮಾರಕವಾಗಿದೆ. ಅರುಂಧತಿರಾಯ್‌ರಂಥವರ ಅಭಿಪ್ರಾಯ ದೇಶದ ಯುವಕರನ್ನು ತಪ್ಪು ದಾರಿಗೆ ಒಯ್ಯುವಂಥಾದ್ದಾಗಿದೆ. ತಮ್ಮ ಅಭಿಪ್ರಾಯದ ಪ್ರಕಟಣೆಗಾಗಿ ತಾವು ಸೆರೆಮನೆಗೆ ಹೋಗಲೂ ಸಿದ್ಧ ಎಂದು ಹೇಳಿರುವುದರಲ್ಲಿ ಯಾವ ಧೈರ್ಯವಾಗಲೀ, ವಿವೇಕವಾಗಲೀ ಇಲ್ಲ. ಸರ್ಕಾರ ಮತ್ತು ಮಾವೋವಾದಿಗಳ

ಮಧ್ಯ ಸಂಧಾನದ ಸೇತುವೆಯಾಗಿ ಕೆಲಸಮಾಡುತ್ತಾ ಕಷ್ಟವನ್ನನುಭವಿಸಿದ್ದರೆ ಅದು ಧೈರ್ಯವೆನಿಸಿಕೊಳ್ಳುತ್ತಿತ್ತು. "ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣಾ ಸಮಿತಿ"ಯ ಆಶ್ರಯದಲ್ಲಿ ಭಾಷಣ ಮಾಡುತ್ತ ಹೇಳಿದ ಅರುಂಧತಿರಾಯ್‌ರವರ ಮಾತುಗಳು ವಿರೋಧಾಭಾಸಗಳಿಂದ ಕೂಡಿವೆ. ತಮ್ಮ ಸಮರ್ಥನೆ ಹಿಂಸೆಗೋ ಅಥವಾ ಅಹಿಂಸೆಗೋ ಎಂದು ಸ್ಪಷ್ಟವಾಗಿ ಹೇಳದೆ ವೈಚಾರಿಕ ಗೊಂದಲ ಸೃಷ್ಟಿಸುವುದರಲ್ಲಿ ಮಾತ್ರ ಯಶಸ್ವಿಯಾಗಿದ್ದಾರೆ. ಹಕ್ಕುಗಳ ರಕ್ಷಣೆಯನ್ನು ಪ್ರತಿಪಾದಿಸುವ ರಾಯ್ ಪ್ರಜಾಸತ್ತಾತ್ಮಕ ಕರ್ತವ್ಯಗಳ ಆಚರಣೆಯನ್ನು ಏಕೆ ಒತ್ತಿ ಹೇಳುವುದಿಲ್ಲ? ಹಿಂಸೆಯನ್ನು ಅದು ಸರ್ಕಾರದಿಂದಾಗಲಿ ಇಲ್ಲವೆ ಮಾವೋಗಳಿಂದಾಗಲಿ ಏಕೆ ಸಾರಾಸಗಟಾಗಿ ತಿರಸ್ಕರಿಸುವುದಿಲ್ಲ? ನಕ್ಸಲ್‌ವಾದಿಗಳಿಗೆ ಮೇಧಾ ಪಾಟ್ಕರ್‌ರಂಥ ಗಾಂಧೀವಾದಿಗಳ ಕ್ರಾಂತಿಕಾರಿ ದೃಷ್ಟಿಯೂ ಇಲ್ಲವೆಂದು ಹೇಳುವ ರಾಯ್ ಅವರಿಗೇಕೆ ಸಮರ್ಥನೆಯನ್ನು ತಮ್ಮ ವೈಭವೀಕೃತ ಭಾಷೆಯ ಮೂಲಕ ಕೊಡುತ್ತಾರೆ?

ಇಂಥ ಪರಿಸ್ಥಿತಿಯಲ್ಲಿ ಜನ್ಮಭೂಮಿ ಸ್ವರ್ಗಕ್ಕಿಂತ ಹಿರಿದು ಎಂಬ ಸಿದ್ಧಾಂತವನ್ನಿಟ್ಟುಕೊಂಡಿರುವ ಸರ್ವೋದಯ ವಿಚಾರವೇ ನಮಗೆ ಅಗತ್ಯವಾಗಿ ಬೇಕೆನಿಸುತ್ತದೆ. ಸರ್ವೋದಯ ವಿಚಾರ ಭೌತಿಕರೂಪದಲ್ಲಿರುವ ದೇಶದ ಹಿತವನ್ನು ಬಯಸುವುದರ ಜೊತೆಗೆ ದೇಶವಾಸಿಗಳೆಲ್ಲರ, ಅದರಲ್ಲೂ ಮುಖ್ಯವಾಗಿ ಅತ್ಯಂತ ದುರ್ಬಲ, ಅತ್ಯಂತ ಹಿಂದುಳಿದ, ಅತ್ಯಂತ ಅವಕಾಶವಂಚಿತ ವ್ಯಕ್ತಿಯ ಸರ್ವಾಂಗೀಣ ಉದಯವನ್ನೇ ಮೊದಲು ಬಯಸುತ್ತಾ ಕ್ರಿಮಿಕೀಟಾದಿಗಳಿಂದ ಹಿಡಿದು ಮನುಷ್ಯನನ್ನು ಒಳಗೊಂಡಂತೆ ಇಡಿ ಸಮಷ್ಟಿಯ ಏಳಿಗೆಯನ್ನು ಬಯಸುತ್ತದೆ ಸರ್ವೋದಯ ವಿಚಾರ. ಯಾವ ಭೂ ಸಮಸ್ಯೆಯನ್ನು ಎತ್ತಿಕೊಂಡು ಆದಿವಾಸಿ, ಗಿರಿಜನರು ಮತ್ತು ಮೂಲ ನಿವಾಸಿಗಳ ಹಿತವನ್ನು ಕೈಗೆತ್ತಿಕೊಂಡು ಇಷ್ಟೊಂದು ರಕ್ತಪಾತವನ್ನು ಮಾವೋವಾದಿಗಳೂ, ನಕ್ಸಲ್‌ವಾದಿಗಳೂ ಮಾಡುತ್ತಿದ್ದಾರೋ ಅಂಥ ಭೂಮಿಯ ಮೇಲೆ ಉಳುವವನದೇ ಅಧಿಕಾರ, ಆಯಾ ಗ್ರಾಮದ್ದೇ ಒಡೆತನ ಮತ್ತು ಸಮಸ್ತ ಭೂಮಿ 'ಗೋಪಾಲನದು' ಹಾಗು ನೀರು, ಗಾಳಿ, ಬೆಳಕು, ಆಕಾಶಗಳ ಮೇಲೆ ಸಮಸ್ತರದೂ ಅಧಿಕಾರವಿರುವಂತೆ ಭೂಮಿಯ ಮೇಲೂ ಸಮಸ್ತರ ಅಧಿಕಾರವಿದೆಯೆಂದು ೧೯೫೧ರಲ್ಲಿಯೇ ಸಂತ ವಿನೋಬಾ, ಸರ್ವೋದಯ ಋಷಿ ವಿನೋಬಾ ತಮ್ಮ ಭೂದಾನ ಯಜ್ಞದ ಸಂದರ್ಭದಲ್ಲಿ ಹೇಳಿದ್ದರು. ಆದರೆ ಸಂತರ ಮಾತನ್ನು ವೀರ ಸಂಸಾರಿಗಳು ಕೇಳುತ್ತಾರೆಯೇ? ಸಂತರ ಮಾತನ್ನು ಸರ್ಕಾರ ಹಾಗು ರಾಜಕೀಯ ಪಕ್ಷಗಳು ಕೇಳಿದ್ದರೆ ಮಾವೋವಾದಿಗಳೂ ನಕ್ಸಲ್‌ವಾದಿಗಳೂ ಹುಟ್ಟಿಕೊಳ್ಳುತ್ತಿರಲಿಲ್ಲ. ಗ್ರಾಮಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಬಲಿಷ್ಠವಾಗುತ್ತಿದ್ದವು. ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿ ಸಿಗುತ್ತಿರಲಿಲ್ಲ. ಸ್ವದೇಶಿ ಆಂದೋಳನದ ಗಾಳಿಬೀಸುತ್ತಿತ್ತು. ಲೋಕ ಶಕ್ತಿಯ ನಿರ್ಮಾಣವಾಗುತ್ತಿತ್ತು. ಅದು ರಾಜ್ಯ ಶಕ್ತಿಯ ಮೇಲೂ, ದಂಡ ಶಕ್ತಿಯ ಮೇಲೂ ನಿಯಂತ್ರಣವಿಡುತ್ತಿತ್ತು. ನಿಜವಾದ ಪ್ರಜಾತಂತ್ರರೂಪಗೊಳ್ಳುತ್ತಿತ್ತು.

ಸ್ವಾತಂತ್ರ ಬಂದಮೇಲೆ ರಾಷ್ಟ್ರಪಿತ ಗಾಂಧೀಜಿಯವರು, ಸಂತ

ವಿನೋಬಾ ಭಾವೆಯವರು, ಲೋಕನಾಯಕ ಜಯಪ್ರಕಾಶ ನಾರಾಯಣರು. ಡಾ.ರಾಮಮನೋಹರ ಲೋಹಿಯಾರವರು, ಡಾ.ಅಂಬೇಡ್ಕರರು ಮುಂತಾದ ಇನ್ನೂ ಅನೇಕ ರಾಷ್ಟ್ರೀಯ ನಾಯಕರು ಅಂದುಕೊಂಡಿದ್ದಂತೆ ಹೊಸ ಭಾರತ ಸಮಾಜ ರೂಪಗೊಳ್ಳಲಿಲ್ಲ. ಎಲ್ಲವೂ ಅವರ ಮೂಲಭೂತ ವಿಚಾರಗಳಿಗೆ ವಿರುದ್ಧವಾಗಿಯೇ ನಡೆದುಕೊಂಡು ಬಂದಿತು. ಒಟ್ಟಿನಲ್ಲಿ ಭಾರತ ತನ್ನ ಅಸ್ಮಿತೆಯನ್ನು ಕಳೆದುಕೊಂಡಿತು.

ಈಗ ಸರ್ವೋದಯ ಸಿದ್ಧಾಂತದಲ್ಲಿ ನಂಬಿಕೆಯಿಟ್ಟಿರುವವರೆಲ್ಲ ಒಂದುಗೂಡಿ ಪ್ರಚಲಿತ ವಿಷಮ ಪರಿಸ್ಥಿತಿಯ ಸುಧಾರಣೆಗಾಗಿ ಹೋರಾಟ ನಡೆಸಬೇಕಿದೆ, ಆಂದೋಲನ ನಡೆಸಬೇಕಿದೆ, ಸಂಪೂರ್ಣಕ್ರಾಂತಿಯನ್ನು ಮಾಡಬೇಕಿದೆ.

ನಮ್ಮ ಹೋರಾಟ ಸರ್ವೋದಯ ಸಿದ್ಧಾಂತದ ಮೂಲ ಮಂತ್ರಗಳಾದ ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆಯೇ ನಡೆಯಬೇಕಿದೆ. ಸತ್ಯ ಮತ್ತು ಅಹಿಂಸೆ ಅಪ್ರಸ್ತುತ ಎಂದು ಹೇಳಲು ಕಾಲ ಮಿಂಚಿದೆ. ಇವು ಅಪ್ರಸ್ತುತ, ಅವ್ಯವಹಾರಿಕ, ಅನಾಮಧೇಯ ಎಂದು ಕಿಡಿಗೇಡಿಗಳು, ಸಮಾಜದ್ರೋಹಿಗಳು, ಭ್ರಷ್ಟರು, ಸುಳ್ಳರು ಮಾತ್ರ ಹೇಳಬೇಕು. ಯಾರ ಹೃದಯದಲ್ಲಿ ಒಟ್ಟು ಸಮಾಜ ಹಿತದ ಆತ್ಮಜ್ಯೋತಿ ಬೆಳಗುತ್ತಿದೆಯೋ ಅವರು ಎಂಥ ಕಠಿಣ ಪರಿಸ್ಥಿತಿಯಲ್ಲೂ ಸತ್ಯ ಮತ್ತು ಅಹಿಂಸೆಯ ಮೌಲ್ಯ ಬಿಡಲಾರರು. ಈ ವಿಷಯದಲ್ಲಿ ನಮ್ಮ ಮುಂದೆ ಮಹಾತ್ಮಾ ಗಾಂಧೀಜಿಯವರ ಜೀವನದ ಜ್ವಲಂತ ಉದಾಹರಣೆಯಿದೆ, ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಅಹಿಂಸಾತ್ಮಕ ಹೋರಾಟ ಮಾಡಿದಾಗ ಅಲ್ಲಿ ಅಹಿಂಸಾಚಾರಣೆಗೆ ತುಂಬ ಪ್ರತಿಕೂಲ ಪರಿಸ್ಥಿಯೆಯೇ ಇತ್ತು. ಆದರೂ ಅಲ್ಲಿ ಇಪ್ಪತ್ತು ವರ್ಷ ಅಹಿಂಸಾತ್ಮಕವಾಗಿಯೇ ಹೋರಾಟ ನಡೆಸಿ ಜಯಶೀಲರಾಗಿ ಭಾರತಕ್ಕೆ ಬಂದರು. ಭಾರತದಲ್ಲಿ ಅವರು ೧೯೧೫ರಿಂದ ತಮ್ಮ ಹತ್ಯೆಯ ದಿನದವರೆಗೂ ಅಂದರೆ ಮೂವತ್ತು ವರ್ಷಗಳ ಕಾಲ ಹೋರಾಟ ನಡೆಸಿದಾಗಲೂ ಪರಿಸ್ಥಿತಿ ಅಹಿಂಸೆಗೆ ಪ್ರತಿಕೂಲವಾಗಿಯೇ ಇತ್ತು; ಆದರೂ ಗಾಂಧೀಜಿ ಸತ್ಯ-ಅಹಿಂಸೆಯ ಸೂತ್ರವನ್ನು ಕೈಬಿಡಲಿಲ್ಲ, ತಮ್ಮ ಅಹಿಂಸಾತ್ಮಕ ಪ್ರಯೋಗದಲ್ಲಿ ಕಷ್ಟ ಹೆಚ್ಚಿದಾಗ ತಾಯಿ ಮಗುವನ್ನು ಅವಚಿಕೊಳ್ಳುವಂತೆ ಗಾಂಧೀಜಿ ಆ ತತ್ವಗಳಿಗೆ ಅವುಚಿಕೊಂಡಿದ್ದರು. "ನನ್ನಂಥವರು ನೂರಾರು ಜನ ನಾಶವಾಗಲಿ ಸತ್ಯ ಮಾತ್ರ ಉಳಿಯಲಿ" ಎಂದು ತಮ್ಮ ಆತ್ಮಕಥೆಯ ಮೂಲಕ ಸಾರಿದ್ದರು. ಗಾಂಧೀಜಿಯವರ ಪ್ರಕಾರ ಹಿಂಸೆ ಹೇಡಿಗಳದು, ದುರ್ಬಲ ಎದೆಯವರದು. ಅಹಿಂಸೆ ಧೀರರದು ಮತ್ತು ಸಬಲ ಎದೆಯವರದು. ಅಹಿಂಸೆ ಎಂದೂ ಸೋತಿಲ್ಲ. ಅಹಿಂಸೆಯಲ್ಲಿ ನಂಬಿಕೆ ಇರಿಸಿಕೊಂಡಿರುವವರು ಎಂದೂ ಹತಾಶಗೊಂಡಿಲ್ಲ, ಬೇರೆಯವರಲ್ಲಿ ಹೋರಾಟಕ್ಕೆ ಪ್ರೇರಣೆ ತುಂಬಿದ್ದಾರೆ. ಉದಾಹರಣೆಗೆ ದೊಡ್ಡ ಚಿಂತಕ ಟಾಲ್‌ಸ್ಟಾಯ್ ಸ್ವತಃ ದೊಡ್ಡ ಯೋಧನಾಗಿದ್ದರೂ ಯೋಧ ವೃತ್ತಿಯನ್ನು ತ್ಯಜಿಸಿ ತನ್ನ ಜೀವನ ಪರ್ಯಂತ ಯುದ್ಧವಿರೋಧಿಯಾಗಿ ಕೆಲಸಮಾಡಿದ. ಸತ್ಯ ಮತ್ತು ಅಹಿಂಸೆಯಿಂದ ಸೃಷ್ಟಿಯಾದ ಸಾರ್ವಜನಿಕ ಅಭಿಪ್ರಾಯ ಭೂಮಿಯ ಮೇಲೆ ದೊಡ್ಡ ಶಕ್ತಿಯೆಂದೂ ಹೇಳಿದ. ಗಾಂಧೀಜಿಯವರ ಪ್ರಕಾರ ಅಹಿಂಸೆಯಲ್ಲಿ ನಮಗೆ ನಂಬಿಕೆ ಇಲ್ಲದೇ

ಇರುವುದಕ್ಕೆ ಕಾರಣ ನಾವು ಸ್ವಾವಲಂಬಿತವಾಗಿಲ್ಲದೇ ಇರುವುದು. ಬೇರೆಯವರ ಕಡೆಗೆ ಅಥವಾ ಬೇರೆ ದೇಶದ ಕಡೆಗೆ ನೋಡುವುದು ನಮ್ಮ ಚಾಳಿಯಾಗಿದೆ. ಪರಿಣಾಮವಾಗಿ ನಾವೇ ನಮ್ಮ ಗುಲಾಮರಾಗಿದ್ದೇವೆ. ಆದ್ದರಿಂದ ನಾವು ಉಪವಾಸಬಿದ್ದರೂ ಸರಿಯೆ ಒಂದು ಕಾಳನ್ನೂ ಆಮದು ಮಾಡಿಕೊಳ್ಳಬಾರದು ಎಂಬುದು ಅವರ ಅಭಿಪ್ರಾಯವಾಗಿತ್ತು. ಬದಲಾದ ಇಂದಿನ ಸ್ಥಿತಿಯಲ್ಲಿ ನಿಜ ಹೇಳಬೇಕಾದರೆ ದುರ್ಬಲರ ಅಹಿಂಸೆಗೆ ಸ್ಥಾನವಿಲ್ಲ. ಸತ್ಯವೇನೆಂದರೆ ಇಂದಿನವರೆಗೂ ಧೀರರ ಅಹಿಂಸೆಯನ್ನು ರೂಢಿಗತಮಾಡಿಕೊಳ್ಳುವ ಅವಕಾಶ ಬಂದಿರಲಿಲ್ಲ. ಈ ಸಂದರ್ಭದಲ್ಲಿ ಗಾಂಧೀಜಿ ಹೀಗೆ ಹೇಳಿದ್ದಾರೆ, "ಧೀರರ ಅಹಿಂಸೆಯ ಎದುರಿಗೆ ಜಗತ್ತಿನಲ್ಲಿಯ ಯಾವ ಶಕ್ತಿಯೂ ನಿಲ್ಲಲಾರದೆಂದು ಪದೇಪದೇ ಹೇಳಿದರೇನು ಬಂತು? ಬದಲಾಗಿ ಅಹಿಂಸೆಯನ್ನು ಆಗಾಗ್ಗೆ ಮತ್ತು ವ್ಯಾಪಕವಾಗಿ ಆಚರಣೆಗೆ ತರಬೇಕು".

ಇಂದಿನ ಯುಗದ ಮಂತ್ರ ಸರ್ವೋದಯ, ಇಂದಿನ ಯುಗದ ಧರ್ಮ ಅಹಿಂಸೆ, ಇಂದಿನ ಯುಗದ ತಂತ್ರ ಸತ್ಯ. ಬನ್ನಿ ಮಿತ್ರರೇ,

ನಾವೆಲ್ಲ ಸೇರಿ ಸರ್ವೋದಯಕ್ಕಾಗಿ ಹೋರಾಡೋಣ ಮತ್ತು ಸರ್ವನಾಶ ತಪ್ಪಿಸೋಣ.

* * *

ವಾಚಕರ ಗಮನಕ್ಕೆ...

ಬೆಂಗಳೂರನ್ನು ಕನ್ನಡ ನಗರಿಯನ್ನಾಗಿ ಮಾಡುವ ಬಗೆ ಹೇಗೆ ಎಂಬ ನಿಮ್ಮ ವಿಚಾರಗಳನ್ನು ಇಪ್ಪತ್ತು ವಾಕ್ಯಗಳಿಗೆ ಮೀರದಂತೆ ಜುಲೈ ಮಾಹೆಯ ೨೦ನೇ ತಾರೀಖಿನ ಒಳಗಾಗಿ ಕಳುಹಿಸಿಕೊಡಬೇಕಾಗಿ ವಿನಂತಿ. ನಿಮ್ಮ ಅಭಿಪ್ರಾಯವನ್ನು ಜನಪದ ಧ್ವನಿಯಲ್ಲಿ ಪ್ರಕಟಿಸಲಾಗುವುದು.

– *ಸಂಪಾದಕರು*

ತಂದೆಯ ಹೆಸರಿಗಾಗಿ ಒಂದು ಒಳ ಸಂಚು

(ಆಂಗ್ಲ ಮೂಲ : ಕೆ.ಜಿ.ಮಲ್ಯ : ಕನ್ನಡಕ್ಕೆ : ಲ.ನರಸಿಂಹಯ್ಯ)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು...)

ಮಹಾತ್ಮ ಗಾಂಧಿಯವರ ಪ್ರತಿಮೆಯನ್ನು ಸಾರ್ವಜನಿಕರ ದರ್ಶನಕ್ಕಾಗಿ ಸಭಾಂಗಣದ ಮಧ್ಯೆ ಇರಿಸಿದ್ದಾಗಿತ್ತು. ಕಂಚಿನ ಆ ಪ್ರತಿಮೆಗೆ ಚೆನ್ನಾಗಿ ಮೆರುಗುಕೊಟ್ಟಿದ್ದ ಕಾರಣ ಅದು ಚಿನ್ನದಂತೆಯೇ ಹೊಳೆಯುತ್ತಿತ್ತು. ಅದರ ಮೊಟ್ಟಮೊದಲ ದರ್ಶನಾರ್ಥಿಯಾಗಿ ಪುರಸಭಾಧ್ಯಕ್ಷರ ಶ್ರೀಮತಿಯವರೇ ಬಂದಿದ್ದರು. ನಡೆಯುವ ಭಂಗಿಯಲ್ಲಿದ್ದ ಆ ಮೂರ್ತಿಗೆ ಭಕ್ತಿಪೂರ್ವಕವಾಗಿ ಶಿರಬಾಗಿ, ಕೈ ಜೋಡಿಸಿ ಮೂರುಸುತ್ತು ಪ್ರದಕ್ಷಿಣೆ ಹಾಕಿದಮೇಲೆ, ಅವರು ಮಹಾತ್ಮರ ಪಾದಗಳನ್ನು ಮುಟ್ಟಿ ನಮಸ್ಕರಿಸಿದರು, ಹೂವುಗಳನ್ನೂ ಸಮರ್ಪಿಸಿದರು. ಇಷ್ಟಾದ ಮೇಲೆ, ಮೂರ್ತಿಯ ಪಾದ ಪೀಠದ ಮೇಲಿದ್ದ, ವಿರೂಪಗೊಂಡಿದ್ದ ಅಕ್ಷರ ಕೆತ್ತನೆಯನ್ನು ಪರಿಶೀಲಿಸುತ್ತ ಸುಮಾರು ಸಮಯವನ್ನು ಕಳೆದರು. ಹೌದು, ಮಹಾತ್ಮ ಗಾಂಧಿ,...............ಪಿತ ಎಂದು ಕಂಡುಬರುತ್ತಿತ್ತು. 'ಪಿತ' ಎನ್ನುವುದರ ಮೊದಲಿಗೆ ಯಾವುದೋ ಒಂದು ಮುಖ್ಯವಾದ ಪದ ಬಿಟ್ಟುಹೋಗಿದೆ ಎಂಬುದು ಸ್ಪಷ್ಟವಾಯಿತು. "ಮಾಹಿತಿ ನೀಡಿದವರಿಗೆ ೫೦೦೦ ರೂ. ಬಹುಮಾನ ನೀಡುವ ತನ್ನ ಸಲಹೆಯನ್ನು ಸಭೆಯ ಎಲ್ಲ ಸದಸ್ಯರೂ ಒಪ್ಪಿಕೊಂಡರೆಂಬುದನ್ನು ತಿಳಿದು, ಹಾಗೆಯೇ ತತ್ಸಂಬಂಧವಾದ ಪ್ರಕಟಣೆಯನ್ನು ಸಭಾಂಗಣದ ಪ್ರವೇಶದ್ವಾರದಲ್ಲಿಯೇ ಹಾಕಿದ್ದುದನ್ನು ಕಂಡು ಅವರಿಗೆ ಬಹಳ ಸಂತೋಷವಾಯಿತು.

ಗಾಂಧೀ ಮೈದಾನದಲ್ಲಿ ನಡೆದ ಭೂಶೋಧನೆಯ ಬಗ್ಗೆ, ಹಾಗೆಯೇ ಅಲ್ಲಿ ಪತ್ತೆಯಾದ ಮಹಾತ್ಮರ ಪ್ರತಿಮೆಯ ವಿಚಾರದಲ್ಲಿ ಸ್ಥಳದ ಪತ್ರಿಕೆಗಳು ಬಹಳ ವ್ಯಾಪಕವಾದ ಪ್ರಚಾರವನ್ನು ನೀಡಿದ್ದವು. ಮಾತ್ರವಲ್ಲ, ಆ ಮಹಾತ್ಮರ ಪ್ರತಿಮೆ ಚಿನ್ನದ್ದೆಂದೂ, ಕನಿಷ್ಠಪಕ್ಷ ೫೦೦ ವರ್ಷಗಳಷ್ಟು ಹಳೆಯದೆಂದೂ ಸುದ್ದಿ ಹಬ್ಬಿಸಿದ್ದವು. ಆ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿದ್ದರಿಂದ, ಸಂತನ ದರ್ಶನಾರ್ಥಿಗಳಾಗಿ ಹೂವು ಹಣ್ಣುಗಳ ಸಹಿತ ಸಾರ್ವಜನಿಕರು ಸಾಲುಗಟ್ಟಿ ಬರಲಾರಂಭಿಸಿದರು. ಇವೇನನ್ನೂ ತರಲಾರದೆ ಅವಸರವಸರವಾಗಿ ದರ್ಶನಾರ್ಥಿಗಳಾಗಿ ಬಂದವರು ಪ್ರತಿಮೆಯ ಪಾದಕ್ಕೆ ಕಾಸಿನ ಕಾಣಿಕೆಯನ್ನು ಅರ್ಪಿಸತೊಡಗಿದರು. ಇಂಜಿನಿಯರ್ ಮತ್ತು ಅವರ ಸಿಬ್ಬಂದಿ, ಪೋಲೀಸಿನವರ ಸಹಾಯದಿಂದ ಕಾವಲು ಕಾಯುತ್ತಿದ್ದರು. ಪ್ರತಿಮೆಯ ದರ್ಶನಕ್ಕಾಗಿ ಈ ಕಡೆ ಜನಸಂದಣಿ ಹೆಚ್ಚಾದಂತೆ, ಆ ಕಡೆ ಹಿರೀ ಸದಸ್ಯರಿಗೆ ತಲೆ ಸುತ್ತುವಂತಾಯಿತು, ತಡೆಯಲಾರದಷ್ಟು ದುಃಖವೂ ಆಯಿತು.

ದೇವರ ದರ್ಶನಕ್ಕೆ ಎಂಬಂತೆ ಜನಸಮುದಾಯ ಶ್ರದ್ಧಾಭಕ್ತಿಗಳಿಂದ ಹೋಗಿ ಬರುತ್ತಿತ್ತು. "ಭೂಮಿಯಲ್ಲಿ ಹೂತು ಹೋಗಿದ್ದರೂ ಸಹ, ಈ ಸಂತನ ಆಶೀರ್ವಾದ ಅನುಗ್ರಹಗಳಿದ್ದುದರಿಂದಲೇ ನಮ್ಮೀ ಪಟ್ಟಣ ಬೆಳೆಯಿತು, ಅಭಿವೃದ್ಧಿ ಆಯಿತು" ಎಂದೂ ಮಾತಾಡಿಕೊಂಡು ಹೋಗುತ್ತಿದ್ದರು. ಇದನ್ನು ಕೇಳಿದ ಮೇಲಂತೂ ಹಿರೀ ಸದಸ್ಯರಿಗೆ ಕೆಟ್ಟ ಸಂಕಟವಾಗತೊಡಗಿತು. "ಈ ಸಂತನಿಗೆ ಸಲ್ಲುತ್ತಿರುವ ಈ ಜನಪ್ರಿಯತೆಯಿಂದಾಗಿ, ಈ

ಮೈದಾನಕ್ಕೆ ನನ್ನ ತಂದೆಯ ಹೆಸರಿನಲ್ಲಿ ಪುನರ್‌ನಾಮಕರಣವಾಗಬೇಕೆಂಬ ನನ್ನ ಕನಸು ನುಚ್ಚುನೂರಾಗಿ ಹೋಗುವುದಂತೂ ಖಂಡಿತ. ಈಗಿರುವ ವಿದ್ಯಮಾನಗಳು ಹೀಗೆಯೇ ಮುಂದುವರೆಯಲು ಬಿಟ್ಟಿದ್ದೇ ಆದರೆ, ಹೆಸರಿನ ಬದಲಾವಣೆಯನ್ನೇ ಜನ ಸಹಿಸುವುದಿಲ್ಲ. ಆದ್ದರಿಂದ ಏನಾದರೂ ಮಾಡಿ ಇದರ ಜನಪ್ರಿಯತೆಯನ್ನು ಕುಗ್ಗಿಸಲೇಬೇಕು. ಈ ಪ್ರತಿಮೆ ಕೇವಲ ಒಂದು ಪ್ರದರ್ಶಿಕೆ ಮಾತ್ರವಲ್ಲದೇ ಮತ್ತೇನೂ ಅಲ್ಲ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸಬೇಕು, ರೂಢಿಸಲೂ ಬೇಕು" ಎಂದು ಯೋಚಿಸಲಾರಂಭಿಸಿದರು. ಅವರ ತಲೆಯಲ್ಲಿ ಆ ದುರಾಲೋಚನೆ ಬಂದಕೂಡಲೇ, ತನ್ನ ಗೆಳೆಯ ಹಾಗೂ ಸ್ಥಳದ ಮಹಾವಿದ್ಯಾಲಯದ ಪ್ರಾಂಶುಪಾಲರ ನೆನಪಾಯಿತು. ಅವರಿಬ್ಬರೂ ಸೇರಿ ನಿದ್ದೆಗೆಟ್ಟು ಕೆಲವಾರು ಸಂಚಿನ ಕ್ರಮಗಳನ್ನು ರೂಪಿಸಿಕೊಂಡರು........

ಮೂರು ದಿನಗಳಾದ ಮೇಲೆ–

ಆ ದಿನ ಅಧ್ಯಕ್ಷರು ತಮ್ಮ ಕಾರ್ಯಾಲಯದಲ್ಲಿ ಕುಳಿತು ಕಡತಗಳನ್ನು ನೋಡುತ್ತಿದ್ದರು. ಬಾಗಿಲು ತಟ್ಟಿದ ಶಬ್ದವಾದುದನ್ನು ಕೇಳಿಸಿಕೊಂಡು "ಒಳಗೆ ಬನ್ನಿ" ಎಂದು ಆಹ್ವಾನಿಸಿದರು. ಬಾಗಿಲನ್ನು ತೆರೆದು "ನಮಸ್ಕಾರ ಅಧ್ಯಕ್ಷರೇ, ಒಳಕ್ಕೆ ಬರಬಹುದೇ?" ಎಂಬುದನ್ನು ಕೇಳಿ ತಲೆಯೆತ್ತಿ ನೋಡಿದರು. ಒಳಕ್ಕೆ ಬರಲು ನಿಂತಿದ್ದವರು ಬೇರೆ ಯಾರೂ ಆಗಿರದೆ ಹಿರೀ ಸದಸ್ಯರೇ ಆಗಿದ್ದರು. ಪ್ರವೇಶಿಸಲು ಅನುಮತಿ ಕೋರಿದ್ದನ್ನು ಕಂಡು ಅಧ್ಯಕ್ಷರಿಗೆ ಆಶ್ಚರ್ಯವೇ ಆಯಿತು. ಅವರು ಎದ್ದು ನಿಂತು ಆಗಿದ್ದುದೆಲ್ಲವನ್ನೂ ಮರೆತು "ದಯಮಾಡಿ ಬನ್ನಿ ಸ್ವಾಮಿ!" ಎಂದು ಹಾರ್ದಿಕವಾಗಿ ಬರಮಾಡಿಕೊಂಡರು.

ಸಂದರ್ಶಕರಿಗೆಂದು ಇದ್ದ ಕುರ್ಚಿಯನ್ನು ಎಳೆದುಕೊಂಡು "ಕುಳಿತುಕೊಳ್ಳಬಹುದೇ?" ಎಂದೂ ಕೇಳಿದರು. "ದಯವಿಟ್ಟು ನೀವು ಕುಳಿತುಕೊಳ್ಳಿ ಸ್ವಾಮಿ! ಈ ಸಾಂಪ್ರದಾಯಿಕ ಕ್ರಮಗಳನ್ನೆಲ್ಲ ದಯವಿಟ್ಟು ಬಿಟ್ಟುಬಿಡಿ, ನಾವೆಲ್ಲರೂ ಒಂದೇ ತಂಡದ ಸದಸ್ಯರು ಎಂಬುದನ್ನು ಮರೆಯಬಾರದು" ಅಧ್ಯಕ್ಷರು ಮುಗುಳ್ನಕ್ಕರು.

"ಹೌದು, ನಮ್ಮ ಆ ತಂಡದ ನಾಯಕರು ನೀವು, ಎಷ್ಟೇ ಆಗಲಿ ಅಧ್ಯಕ್ಷರು ಅಂದ್ಮೇಲೆ ಅಧ್ಯಕ್ಷರೆ" ಸೌಜನ್ಯ ಮತ್ತು ಗೌರವಪೂರ್ವಕವಾಗಿ ನಡೆದುಕೊಳ್ಳುವಂತೆ ನಟಿಸಿದರು.

"ಈ ಅತಿವಿನಯದ ವರ್ತನೆ ಈವೊತ್ತು ಯಾಕಿರಬಹುದು? ಕಾಗೆಯ ಬಾಯಲ್ಲಿದ್ದ ಮಂಸದ ತುಣುಕನ್ನು ಕದಿಯಲು ಕಾಗೆಯನ್ನು ಹೊಗಳಿದ ನರಿಯಂತೆ ಇದಾಗದಿರಬಹುದು" ಎಂಬ ಅಭಿಪ್ರಾಯ ಕುಶಾಗ್ರಮತಿಯಾದ ಅಧ್ಯಕ್ಷರ ತಲೆಯಲ್ಲಿ ಹಾದು ಹೋಯಿತು. ಆದರೆ ಅದ್ಯಾವುದನ್ನೂ ತೋರಿಸಿಕೊಳ್ಳದೆ "ಪಟ್ಟಣದಲ್ಲಿ ಎಲ್ಲವೂ ಚೆನ್ನಾಗಿದೆ ಅಂತ ಭಾವಿಸ್ತೇನೆ" ಎಂದರು.

"ಹೌದೌದು, ಅದರ ಬಗ್ಗೆ ಏನೂ ಯೋಚನೆ ಇಲ್ಲ ಅಧ್ಯಕ್ಷರೇ" ಎಂದವರೇ ತಾನು ಬಂದ ಉದ್ದೇಶವನ್ನು ನವಿರಾಗಿ ಪ್ರಸ್ತಾಪಿಸುತ್ತ "ಸ್ವಾಮಿ ಅಧ್ಯಕ್ಷರೇ, ಈವೊತ್ತು ಇಲ್ಲಿಗೆ ಒಬ್ಬರು ಅತಿಥಿಯಾಗಿ ಬರುವವರಿದ್ದಾರೆ, ಅವರು ಸ್ಥಳೀಯ ಕಾಲೇಜಿನ ಪ್ರಿನ್ಸಿಪಾಲರು, ಘನವಾದ ವಿದ್ವಾಂಸರು. ಯಾಕೆ ಅಂತಂದ್ರೆ ಅವರು ಟ್ರಿಬಲ್ ಎಂ. ಎ." ಎಂದರು.

"ಟ್ರಿಬಲ್ ಎಂ. ಎ., ನಿಜಕ್ಕೂ ದೊಡ್ಡ ಸಾಧನೆಯೇ!" ಅಧ್ಯಕ್ಷರು ಪ್ರಶಂಸಿದರು.

"ಹೌದು, ನಿಜಕ್ಕೂ ಸಾಧನೆಯೇ, ಅದರಲ್ಲೂ ಒಂದಕ್ಕೊಂದು ಸಂಬಂಧವಿಲ್ಲದಿರೋ ವಿಷಯಗಳಲ್ಲಿ ಅಂದರೆ ಇತಿಹಾಸ, ರಾಜಕೀಯ ಮತ್ತು

ತತ್ವಶಾಸ್ತ್ರಗಳಲ್ಲಿ ಎಂ. ಎ. ಮಾಡಿರೋದು ಅಂದರೆ ಸಾಧನೆಯೇ!" ಹಿರೀ ಸದಸ್ಯರು ಕೊಂಡಾಡಿದರು.

"ಅದರಲ್ಲೂ ವಿಭಿನ್ನ ವಿಷಯಗಳಲ್ಲಿ!" ಅಧ್ಯಕ್ಷರು ಆಶ್ಚರ್ಯ ಸೂಚಿಸಿದರು.

"ಅದನ್ನೇ ನಾನು ಹೇಳಿದ್ದು-ನಿಜಕ್ಕೂ ಅಪರೂಪದ ಸಾಧನೆ. ಅಂತಹ ಸಾಧಕರನ್ನ, ವಿದ್ವಾಂಸರನ್ನ ಈವೊತ್ತು ನಾನು ಇಲ್ಲಿಗೆ ಆಹ್ವಾನಿಸಿದ್ದೇನೆ. ನಮ್ಮ ಪುರಸಭೆಯಲ್ಲಿ ಪ್ರದರ್ಶನಕ್ಕಿಟ್ಟಿರೋ ಆ ಪ್ರತಿಮೆಯನ್ನು ಅವರು ಪರಿಶೀಲನೆ ಮಾಡಲಿ, ನಿಮ್ಗೂ ನಮ್ಗೂ ಕಗ್ಗಂಟಾಗಿರೋದನ್ನ ಪರಿಹಾರ ಮಾಡಿ್ಲಅಂತ ನನ್ನ ಅಭಿಪ್ರಾಯ" ಎಂದರು ಹಿರೀ ಸದಸ್ಯರು.

"ಒಳ್ಳೇದಾಯ್ತು, ಬರುವ ವಿದ್ವಾಂಸ ಪ್ರಾಂಶುಪಾಲ ಮಹಾತ್ಮ ಗಾಂಧೀ ಯಾರು? ಅವರ ಸಿದ್ಧಿ ಸಾಧನೆಗಳೇನು? ಎಂಬುದನ್ನು ತಿಳಿಸುವುದಾದರೆ, ಬಡಪಾಯಿ ಮುದಿ ಸಂತನಿಗೆ ಉಪಕಾರ ಮಾಡಿದಂತೆಯೇ ಆಗ್ತದೆ. ಹಾಗೇನೇ ಆ ಸಂತನ ಮಗ ಅಥವಾ ಮಕ್ಕಳ ಹೆಸರನ್ನು ತಿಳಿಸೋದೂ ಆಗಬೇಕು. ಇಷ್ಟು ಮಾಹಿತಿ ನೀಡೋ ಮೂಲಕ ಪ್ರಾಂಶುಪಾಲರು ಬಹುಮಾನವನ್ನು ಖಂಡಿತವಾಗಿಯೂ ತಮ್ಮದಾಗಿಸಿಕೊಳ್ತಾರೆ ಅನ್ನೋ ಭರವಸೆ ನನಗಿದೆ" ಅಧ್ಯಕ್ಷರೆಂದರು.

"ಜುಜುಬಿ ಈ ೫೦೦೦ ರೂ. ಬಹುಮಾನ ಯಾವ ಲೆಕ್ಕ ಮಹಾಸ್ವಾಮಿ?" ಪರಿಹಾಸ್ಯ ಮಾಡುತ್ತಾ "ನಾನು ಇನ್ನೂ ಹೆಚ್ಚಿನದನ್ನು ಕೊಡೋ ಮಾತನ್ನು ಅವರಿಗೆ ಕೊಟ್ಟಿದ್ದೇನೆ" ಎಂದು ಹಿರೀ ಸದಸ್ಯರು ಪೀಠಿಕೆ ಹಾಕಿದರು.

"ಏನು? ಇನ್ನೂ ಹೆಚ್ಚಿನದೇ?" ಅಧ್ಯಕ್ಷರು ಚಕಿತರಾಗಿ ಕೇಳಿದರು.

"ಹೌದು! ಅವರ ಕಾಲೇಜು ಕಟ್ಟಡದ ಬಡಾವಣೆಗೋಸ್ಕರ, ಹೆಚ್ಚುವರಿ ಜಾಗ ಬೇಕಾಗಿದೆ. ಆ ಸಂಬಂಧದಲ್ಲಿ ಅವರ ಕೋರಿಕೆ ಪತ್ರ ಅಂದರೆ ಉಚಿತ ನಿವೇಶನ ಬೇಕೂಂತ ಸಲ್ಲಿಸಿರೋ ಪತ್ರ ಕಳೆದ ಏಳು ವರ್ಷಗಳಿಂದ ಸ್ಥಾಯಿ ಸಮಿತಿ ಕಡೆ ಅಮಾನತ್ತಿನಲ್ಲಿದೆ. ಈ ಸಾರಿ ಅದನ್ನು ಮಾಡಿಸಿಕೊಡ್ತೀನಿ ಅಂತ ನಾನು ಅವರಿಗೆ ಮಾತು ಕೊಟ್ಟಿದ್ದೀನಿ, ನಿಮ್ಮ ಗಮನಕ್ಕೂ ತಂದಿದ್ದೀನಿ" ಎಂದರು.

"ಯಾವುದೇ ಕೋರಿಕೆ ಪತ್ರ ಅಮಾನತ್ತಿನಲ್ಲಿ ಇದ್ದಂಗೆ ತಿಳಿದು ಬಂದಿಲ್ಲ. ಒಂದ್ವೇಳೆ ಇದ್ದರೆ ಇಷ್ಟು ದೀರ್ಘಕಾಲ ಯಾಕೆ ಇಟ್ಕೋಬೇಕು? ಸದರಿ ಕೆಲಸ ಆಗ್ತದೆ ಅಥವಾ ಆಗಲ್ಲ ಅಂತ ಮೂರರಿಂದ ಆರು ತಿಂಗಳಲ್ಲಿ ತಿಳಿಸೋದಕ್ಕೆ ಆಗಲ್ಲವೆ?" ಎಂದು ಕೇಳಿದ ಅವರ ಮಾತಿನಲ್ಲಿ ನೋವಿತ್ತು.

"ಸ್ವಾಮಿ, ನೀವು ನಿರೀಕ್ಷಿಸೋ ವೇಗ ಮತ್ತು ವಿಧಾನಗಳಲ್ಲಿ ಸರಕಾರದ ಕಾರ್ಯಾಲಯಗಳಲ್ಲಾಗ್ಲಿ ಅಥವಾ ನಮ್ಮೀ ಸ್ಥಾನೀಯ ಸಂಸ್ಥೆಗಳಲ್ಲಾಗ್ಲಿ ವ್ಯವಹಾರ ಖಂಡಿತ ನಡೆಯೋದಿಲ್ಲ; ವಿಲೇವಾರಿ ಆಗೋದಿಲ್ಲ. ಕಡತಗಳಿಗೆ ಚಾಲನೆ ಬರಬೇಕಾದರೆ ಹಣ ಕಾಣಿಸಬೇಕು ಇಲ್ಲವೆ ರಾಜಕೀಯ ಪ್ರಭಾವದ ಗಾಳಿ ಬೀಸಬೇಕು" ಹಿರೀ ಸದಸ್ಯರು ಮುಗುಳು ನಗುತ್ತ ಹೇಳಿದರು.

" ನಾಚಿಕೆಗೇಡು! ನಮ್ಮನ್ನು ನಾವು ನಾಗರಿಕರೂಂತ ಕರೆದುಕೊಳ್ತೇವೆ, ಆದರೆ ಅಪ್ಪಟ ಅನಾಗರಿಕರಾಗಿಯೇ ವರ್ತಿಸುತ್ತೇವೆ– ಬೇಸರ ಆಗ್ತದೆ!" ಮುಂದುವರೆದು ಇನ್ನೂ ಕಟುವಾಗಿ ಅನ್ನಬೇಕು ಎನ್ನುವಷ್ಟು ರೋಷ ಉಕ್ಕಿ ಬಂತು. ಆದರೆ ಅದನ್ನು ಹಾಗೆಯೇ ನುಂಗಿಕೊಂಡರು. ಸದ್ಯ, ಅದೇ ಹೊತ್ತಿಗೆ ಸರಿಯಾಗಿ ಅವರ ಆಪ್ತ ಕಾರ್ಯದರ್ಶಿಯವರು

ಕಾಣಿಸಿಕೊಂಡು "ಪ್ರಾಂಶುಪಾಲರು ಬಂದಿದ್ದಾರೆ ಸರ್" ಎಂದು ತಿಳಿಸಿದರು.

"ಒಳಕ್ಕೆ ಬರಲಿ" ಎಂದು ಹೇಳಿದ ಅಧ್ಯಕ್ಷರು ಅತಿಥಿಯನ್ನು ಬರಮಾಡಿಕೊಳ್ಳಲು ಎದ್ದು ನಿಂತರು.

"ನೀವು ತೊಂದರೆ ತಗೊಳ್ಳೋದು ಬೇಡ, ನಾನು ಬರಮಾಡಿಕೊಳ್ತೀನೆ" ಎಂದು ಹೇಳುತ್ತ ಹಿರೀ ಸದಸ್ಯರು ಮೇಲೆದ್ದರು. ಆ ವೇಳೆಗೆ ಆಪ್ತ ಕಾರ್ಯದರ್ಶಿಯವರೊಂದಿಗೆ ಪ್ರಾಂಶುಪಾಲರು ಒಳಕ್ಕೆ ಬಂದರು.

"ನಮಸ್ಕಾರ, ದಯಮಾಡಿಸಿ!" ಅಧ್ಯಕ್ಷರು ಗೌರವಪೂರ್ವಕವಾಗಿ ನಮಸ್ಕರಿಸುತ್ತ ಸ್ವಾಗತಿಸಿದರು.

ಮಧ್ಯ ವಯಸ್ಸಿನ ಪ್ರಾಂಶುಪಾಲರು ಪ್ರತಿಯಾಗಿ ನಮಸ್ಕರಿಸಿದರು.

"ದಯಮಾಡಿ ಕುಳಿತುಕೊಳ್ಳಿ!" ಎಂದು ಹೇಳಿದ ಅಧ್ಯಕ್ಷರು, ಅವರು ಕುಳಿತಾದ ಮೇಲೆ ತಾವೂ ಕುಳಿತರು. "ಇದೇ ಮೊದಲ ಬಾರಿಗೆ ನಾವು ಭೇಟಿಯಾಗುತ್ತ ಇದ್ದೇವೆ ಅಂತ ನನಗನ್ನಿಸ್ತಿದೆ" ಅಧ್ಯಕ್ಷರು ಮುಗುಳು ನಗುತ್ತ ಹೇಳಿದರು.

"ಹೌದು, ನೀವು ಹೇಳಿದ್ದು ಬಹಳ ಸರಿ, ಈ ಕಡೆ ಬರೋ ಸಂದರ್ಭ ನನಗೂ ಒದಗಿರಲಿಲ್ಲ, ಜೊತೆಗೆ ವಿದ್ಯಾಲಯದ ಆವರಣ ಬಿಟ್ಟು ಹೊರಕ್ಕೆ ಹೋಗೋದು ಕಡಿಮೆ, ಹೇಳಬೇಕು ಅಂದರೆ ನಾನು ಅದನ್ನು ಬೆಳಸ್ಕೊಂಡೇ ಇಲ್ಲ. ನನ್ನ ವಿದ್ಯಾಲಯ, ನನ್ನ ವಿದ್ಯಾರ್ಥಿಗಳು ಮತ್ತು ನನ್ನ ಭಾಗದ ಕರ್ತವ್ಯ-ಇವುಗಳದ್ದೇ ಒಂದು ಕಿರು ಪ್ರಪಂಚ, ಇವುಗಳ ನಡುವೆ ನನ್ನ ಬಾಳು-ಬದುಕು!" ಎಂದು ಹೇಳುತ್ತ ಹೃದಯಂಗಮವಾಗಿ ನಕ್ಕರು.

"ಯಾಕೆ ಹಾಗೆ ಹೇಳ್ತೀರಿ?" ಅಧ್ಯಕ್ಷರೂ ನಗುತ್ತ "ಈವೊತ್ತಿನ ಪ್ರಪಂಚ ದೊಡ್ಡದು ಅಂತ ಹೇಳಲಿಕ್ಕೆ ಆಗದೇ ಇರುವಷ್ಟು ಚಿಕ್ಕದಾಗ್ತಾ ಇದೆ. ಪ್ರಪಂಚವನ್ನೂ ಈವೊತ್ತು "ವಿಶ್ವ ಗ್ರಾಮ" ಅಂತ ಕರೆಯುತ್ತಿರೋದು ನಿಮ್ಗೂ ತಿಳಿದಿದೆ. ನೀವು ಹೇಳ್ತಿರೋದೂ ಇದೇ ಅರ್ಥದಲ್ಲಿಯೇ ಅಂತ ಕಾಣ್ತದೆ" ಎಂದರು ಅಧ್ಯಕ್ಷರು.

"ನಿಮ್ಮ ಅಭಿಪ್ರಾಯ ಸರಿ" ಪ್ರಾಂಶುಪಾಲರು ಸಮ್ಮತಿ ಸೂಚಕವಾಗಿ ತಲೆಯಾಡಿಸಿದರು. ಆ ವೇಳೆಗೆ ಸೇವಾ ಸಿಬ್ಬಂದಿ ಟೀ ತಂದು ಅವರೆಲ್ಲರ ಮುಂದಿರಿಸಿ ಹೋದ.

"ದಯವಿಟ್ಟು ತೆಗೆದುಕೊಳ್ಳಿ, ಇದು ಅಧ್ಯಕ್ಷರ ಚಹಾ!" ಅಧ್ಯಕ್ಷರು ತಮಾಷೆ ಮಾಡಿದರು.

"ಅಧ್ಯಕ್ಷರ ಕೊಠಡಿ ಅಂದ್ಮೇಲೆ ಎಲ್ಲವೂ ಅಧ್ಯಕ್ಷರ ಇಚ್ಛಾನುಸಾರವೇ!" ಅತಿಥಿಯೂ ತಮಾಷೆ ಮಾಡಿದರು.

"ಆದರೆ ಇಲ್ಲಿ ಮಾತ್ರ ಹಾಗಲ್ಲ ಸ್ವಾಮಿ, ನಾವು ಬಹುಮತವನ್ನು ಆಧಾರವಾಗಿರಿಸಿಕೊಂಡು ಎಲ್ಲ ತೀರ್ಮಾನಗಳನ್ನು ಕೈಗೊಳ್ತೇವೆ" ಅಧ್ಯಕ್ಷರು ಹೇಳಿದರು.

"ಚಹಾ ನೀಡುವುದೂ ಹಾಗೇನೇನು?" ಪ್ರಾಂಶುಪಾಲರು ಬೆರಗಾಗಿ ಕೇಳಿದರು.

"ಅದಕ್ಕೇ ನಾನು ಹೇಳಿದ್ದು-ಇದು ಅಧ್ಯಕ್ಷರ ಚಹಾ ಅಂತ" ಅಧ್ಯಕ್ಷರು ಕಣ್ಣು ಮಿಟುಕಿಸಿದರು.

"ಅಂದ ಹಾಗೆ, ನನ್ನ ಈ ಭೇಟಿಯ ಉದ್ದೇಶ ನಿಮ್ಗೆ ಗೊತ್ತಿರಬೇಕು" ಚಹಾ ಮುಗಿಸುತ್ತ ಪ್ರಾಂಶುಪಾಲರು ಹೇಳಿದರು.

"ನಿಮ್ಮಿಂದಲೇ ತಿಳಿದ್ರೆ ಮತ್ತೂ ಒಳ್ಳೆಯದು!" ನಿರೀಕ್ಷೆಯಿಂದ ನುಡಿದ ಅಧ್ಯಕ್ಷರು, "ಯಾವುದೋ ಒಂದು ಜಮೀನು ಮಂಜೂರಾತಿಗೆ ಸಂಬಂಧಿಸಿದ ನಿಮ್ಮ ಮನವಿ ಸುಮಾರು ವರ್ಷಗಳಿಂದ ನಮ್ಮಲ್ಲಿದೆ ಅಂತ ಈಗ ತಾನೇ ತಿಳೀತು" ಎಂದರು.

"ಅದನ್ನೀಗ ಮರೆತ್ಬಿಡಿ!" ತಿರಸ್ಕಾರದಿಂದ ಮಾತನಾಡಿದ ಪ್ರಾಂಶುಪಾಲರು "ನಮ್ಮ-ನಿಮ್ಮ ಈ ಮೊಟ್ಟಮೊದಲ ಸಭೆಯಲ್ಲಿ ಅಸಮಂಜಸವಾದ ವಿಷಯಗಳನ್ನು ಕುರಿತು ಚರ್ಚಿಸೋದ್ರಲ್ಲಿ ಸಮಯ ಹಾಳ್ಮಾಡೋದು ಬೇಡ" ಎಂದು ಅಭಿಪ್ರಾಯ ಸೂಚಿಸಿದರು.

"ತಾವಾಗಿ ಈ ಮಾತು ಹೇಳಿದ್ದು ಬಹಳ ಸಂತೋಷ!" ಎಂದು ಪ್ರಾಂಶುಪಾಲರನ್ನು ಪ್ರಶಂಸಿಸಿದ ಅಧ್ಯಕ್ಷರು "ಹಾಗಾದ್ರೆ ನಾವು ಸಭಾಂಗಣಕ್ಕೆ ಹೋಗಿ ಅಲ್ಲಿರಿಸಿರೋ ಪ್ರತಿಮೆಯನ್ನು ದರ್ಶನ ಮಾಡೋಣವೇನು?" ಸಲಹಾತ್ಮಕವಾಗಿ ಕೇಳಿದರು.

"ಖಂಡಿವಾಗಿ! ಮೊದ್ಲು-ಮೊದ್ಲು ಆ ಕೆಲಸ ಮುಗಿಸೋಣ!" ಎನ್ನುತ್ತ ಪ್ರಾಂಶುಪಾಲರು ಎದ್ದು ನಿಂತರು. ಅಧ್ಯಕ್ಷರು ಅವರನ್ನು ಸಭಾಂಗಣಕ್ಕೆ ಕರೆದುಕೊಂಡು ಹೊರಟರು. ಹಿರೀ ಸದಸ್ಯರೂ ಅವರನ್ನು ಹಿಂಬಾಲಿಸಿದರು. ಆದರೂ ಅವರಲ್ಲಿ ನಿರುತ್ಸಾಹ, ಉಪೇಕ್ಷೆಗಳು ಎದ್ದು ಕಾಣುತ್ತಿದ್ದವು.

ಅವರೆಲ್ಲ ಅಲ್ಲಿಗೆ ಹೋದಾಗ, ಸಂತನ ಪ್ರತಿಮೆಯ ಹತ್ತಿರ ಕೆಲವೇ ಮಂದಿ ದರ್ಶನಾರ್ಥಿಗಳಿದ್ದರು. ಆದ್ದರಿಂದ ನೇರವಾಗಿ ಪ್ರತಿಮೆಯ ಬಳಿಗೇ ಹೋದರು. ಪ್ರಾಂಶುಪಾಲರು ಕೈಯನ್ನು ಮುಗಿಯಲಿಲ್ಲ, ಕಾಲಿಗೂ ಬೀಳಲಿಲ್ಲ; ಪ್ರತಿಮೆಯ ಮುಂಭಾಗದಲ್ಲಿ ನಿಂತು ಸ್ವಲ್ಪ ಹೊತ್ತು ನೋಡಿದರು. ಆಮೇಲೆ ಸಾವಧಾನವಾಗಿ ಹೆಜ್ಜೆ ಹಾಕುತ್ತ ಸುತ್ತು ಹಾಕಿದರು. ಪ್ರತಿಮೆಯನ್ನು ಸೂಕ್ಷ್ಮವಾಗಿ ಗಮನಿಸುತ್ತ, ಸಂತನ ಎಡ ಭಾಗದಲ್ಲಿ ನೇತಾಡುವಂತಿದ್ದ ಗಡಿಯಾರವನ್ನು ಮುಟ್ಟಿದರು, ಪ್ರತಿಮೆಯ ಕೈಯಲ್ಲಿ ಇದ್ದ ಕೋಲನ್ನು ಮೇಲಿನಿಂದ ಕೆಳಗಿನವರೆಗೆ ಸವರಿ ನೋಡಿದರು. ಪಾದಪೀಠದ ಮೇಲೆ ಕಂಡ ಅಕ್ಷರ ಕೆತ್ತನೆಯನ್ನು ಬಗ್ಗಿ ನೋಡಿದರು-ಎಚ್ಚರಿಕೆಯಿಂದ ಓದಿಕೊಂಡರು. ಅದಾದ ಮೇಲೆ ಜೇಬಿನಿಂದ ಟಿಪ್ಪಣಿ ಪುಸ್ತಕವನ್ನು ಹೊರತೆಗೆದು ತಾನು ಓದಿಕೊಂಡಿದ್ದನ್ನು ಗುರುತು ಹಾಕಿಕೊಂಡರು. ೫೦೦೦ ರೂ.ಗಳ ಬಹುಮಾನವನ್ನು ಘೋಷಿಸಿ ಇಡಲಾಗಿದ್ದ ಪ್ರಕಟಣಾ ಫಲಕವನ್ನೂ ಓದಿಕೊಂಡು ಮುಗುಳ್ನಗುತ್ತ ತಲೆದೂಗಿದರು. ಅಧ್ಯಕ್ಷರು ಮತ್ತು ಹಿರೀ ಸದಸ್ಯರು ಕುತೂಹಲದಿಂದ ಎವೆಯಾಡಿಸದೆ ನೋಡುತ್ತ ನಿಂತಿದ್ದರು.

ಪ್ರತಿಮೆಯ ಪರಿಶೀಲನೆಯನ್ನು ಮುಗಿಸಿ ಗುರಿ ಸಾಧಿಸಿದಂತಹ ಗೆಲುವು ಮತ್ತು ನಗೆಯಿಂದ ಅವರಿಬ್ಬರೂ ಇದ್ದಲ್ಲಿಗೆ ಬಂದು-

"ಇನ್ನು ನಾವು.....?" ಹೋಗಬಹುದು ಎಂಬ ಇಂಗಿತವನ್ನು ಪ್ರಾಂಶುಪಾಲರು ವ್ಯಕ್ತಪಡಿಸಿದರು.

"ಆಗಬಹುದು, ಹೋಗೋಣ!" ಎಂದ ಅಧ್ಯಕ್ಷರು ತಮ್ಮ ಕುತೂಹಲವನ್ನು ತಡೆದುಕೊಳ್ಳಲಾಗದೆ-"ಏನಾದರೂ ತಿಳಿದು ಬಂತೆ ಸ್ವಾಮಿ?" ಎಂದೂ ಕೇಳಿದರು.

"ಅದನ್ನು ಕುರಿತು ನಿಮ್ಮ ಕೊಠಡಿಯಲ್ಲಿ ಮಾತನಾಡೋಣ" ಕಣ್ಣು ಮಿಟುಕಿಸುತ್ತ ಪಿಸುಗುಟ್ಟಿದರು ಪ್ರಾಂಶುಪಾಲರು.

ಅಲ್ಲಿಂದ ಅವರೆಲ್ಲರೂ ಮೌನವಾಗಿ ಅಧ್ಯಕ್ಷರ ಕೊಠಡಿಗೆ ಹಿಂತಿರುಗಿದರು.

(ಮುಂದುವರಿಯುವುದು...)

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟಿನ ಹಳೆಯ ಕಾರ್ಯಕ್ರಮಗಳಲ್ಲೊಂದಾದ ಶ್ರೀ ಕೃಷ್ಣ ಶಿಶುವಿಹಾರವು ಜೂನ್ ಒಂದರಂದು ಪುನರಾರಂಭವಾಯಿತು. ಅದರೊಂದಿಗೆ ಶಿಶುವಿಹಾರವು ತನ್ನ ೫೦ನೇ ವರ್ಷದ ಇರುವಿಕೆಯನ್ನು ಮುಗಿಸಿ ೫೧ನೇ ವರ್ಷಕ್ಕೆ ಕಾಲಿಟ್ಟಿತು. ಶಿಶುವಿಹಾರವು ಮಕ್ಕಳನ್ನು ದೈಹಿಕ, ಮಾನಸಿಕ ಮತ್ತು ಸಾಂಸ್ಕೃತಿಕವಾಗಿ ಹಾಗು ಹೆಚ್ಚು ಆರೋಗ್ಯಕರವಾಗಿ ಬೆಳೆಯುವಂತೆ ಮಾಡುವ ಪ್ರಯತ್ನದ ಅಂಗವಾಗಿ ಶಿಶುವಿಹಾರದಲ್ಲಿ ವಿಶೇಷ ತರಬೇತಿಯನ್ನು ಪಡೆದ ಉಪಾಧ್ಯಾಯಿನಿಯನ್ನು ಗೊತ್ತುಮಾಡಲಾಗಿದೆ. ಇನ್ನೂ ಅನೇಕ ಪ್ರಕಾರದ ಸುಧಾರಣೆಗಳನ್ನು ಮಾಡುವ ಯೋಜನೆಯಿದೆ. ಸುಳ್ಯದಲ್ಲಿ ನಡೆಯುತ್ತಿರುವ "ಸ್ನೇಹ ಶಾಲೆಯ ಸಂಸ್ಥಾಪಕರು ಮತ್ತು ಸಂಚಾಲಕರಾದ ದಾಮ್ಲೆ ದಂಪತಿಗಳು ಭೇಟಿ ಕೊಟ್ಟರು. ಕಳೆದ ಬೇಸಿಗೆಯಲ್ಲಿ "ದೊಡ್ಡ ಮರದಾ ನೆರಳಿನಲಿ" ಎಂಬ ಮಕ್ಕಳ ಬೇಸಿಗೆ ಶಿಬಿರ ನಡೆಸಲಾಗಿತ್ತು. ಆ ಶಿಬಿರದ ಸಂದರ್ಭದಲ್ಲಿ ಮಕ್ಕಳು ಕಲಿತಿದ್ದ ನಾಟಕಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಲಾಗಿತ್ತು. ಅದರ ಮುಂದುವರಿಕೆಯಾಗಿ ಮೇಲುಕೋಟೆಯಲ್ಲಿ ರಂಗಚಟುವಟಿಕೆಗಳ ಮೂಲಕ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಅಂಗವಾಗಿ ಮತ್ತು ಮಕ್ಕಳ ಒಂದು ರಂಗತಂಡ ರೂಪಿಸುವ ಸಲುವಾಗಿ ಟ್ರಸ್ಟಿನ ಆಶ್ರಯದಲ್ಲಿ ಮಕ್ಕಳಿಗೆ ಪ್ರತಿದಿನ ಸಂಜೆ ಮತ್ತು ರಜಾದಿನಗಳಲ್ಲಿ ರಂಗಭೂಮಿ ಸಂಬಂಧಿತ ವಿಷಯಗಳಲ್ಲಿ ತರಬೇತಿ ಕೊಡಲಾಗುತ್ತಿದೆ ಮತ್ತು ಒಂದು ಮಕ್ಕಳ ನಾಟಕದ ತಯಾರಿಯೂ ನಡೆದಿದೆ. ಈ ತರಬೇತಿಯಲ್ಲಿ ನಲವತ್ತು ಮಕ್ಕಳು ಭಾಗವಹಿಸುತ್ತಿದ್ದಾರೆ. ಟ್ರಸ್ಟಿನ ಆಶ್ರಯದಲ್ಲಿ "ನೆನೆ ಬನ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಉದ್ದೇಶ ಮೇಲುಕೋಟೆಯ ಸುತ್ತಮುತ್ತ ನಶಿಸಿ ಹೋಗುತ್ತಿರುವ ಕಾಡನ್ನು ಉಳಿಸುವ ಪ್ರಯತ್ನ ಮಾಡುವುದು ಮತ್ತು ನಾಶದ ಅಂಚಿನಲ್ಲಿರುವ ಸಸ್ಯಗಳನ್ನು ಉಳಿಸಿ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದಾಗಿದೆ. ಈ ಯೋಜನೆಯಡಿ ಟ್ರಸ್ಟ್ ತನಗೆ ಸೇರಿದ ಹತ್ತು ಎಕರೆ ಭೂಮಿಯಲ್ಲಿ ಲೋಕೋಪಕಾರಿಯಾದ ಸ್ಥಳೀಯ ಸಸ್ಯ ಪ್ರಭೇದಗಳನ್ನು ಬೆಳೆಸಿ ಸಂರಕ್ಷಿಸಲು ಇಚ್ಛಿಸಿದೆ. ಜೊತೆಗೆ ಮೇಲುಕೋಟೆಯ ಸುತ್ತಲೂ ಅವುಗಳ ಸಂವರ್ಧನೆಗಾಗಿ ಸಸ್ಯಗಳನ್ನು ಬೆಳೆಸಿ ವಿತರಿಸುವ ಯೋಜನೆಯನ್ನು ರೂಪಿಸಲಾಗಿದೆ.

೨೦೧೦ ಜೂನ್ ಮಾಹೆಯ ದಾನಿಗಳು

ಶ್ರೀ ಸಿ.ಪಿ.ಶೇಷಾದ್ರಿ, ಶ್ರೀ ಟಿ.ಜಿ.ವಾಸುದೇವ, ಶ್ರೀ ಸಿ.ಎಸ್.ಕೃಷ್ಣಗುಪ್ತ, ಡಾ.ದೇವೇಂದ್ರ ಬಾಬು, ಶ್ರೀಮತಿ ಸುಧಾ ಮೂರ್ಚಿಂಗ್, ಶ್ರೀ ಆರ್.ಆರ್.ಅನವಟ್ಟಿ ಇವರಿಗೆ ಮತ್ತು ಸಂಸ್ಥೆಯ ಎಲ್ಲಾ ಮಾಹೆಯ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೮೦

- ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್‌ನಂಥ ಸೇವಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಾಗಿದ್ದು, ಅಲ್ಲಿಯೇ ದೊಡ್ಡವರಾಗಿ ಬೆಳೆದಮೇಲೂ ಅದೇ ಸೇವಾ ಸಂಸ್ಥೆಯಲ್ಲಿ ಶ್ರದ್ಧೆಯಿಂದ ಕೆಲಸ ಮಾಡಿಕೊಂಡು ಹೋಗುವ ಕಾರ್ಯಕರ್ತರು ಸಿಗುವುದು ಕಷ್ಟ. ಬಹಳಷ್ಟು ಹಣ ತರುವ ಸಂಸ್ಥೆಗಳಲ್ಲಿ ಇದ್ದು, ಬೆಳೆದಂಥವರು, ಆ ಸಂಸ್ಥೆಗಳಲ್ಲಿ ಕೆಲಸ ಮಾಡಲು ಸಿಗುವಂಥವರು ಬಹಳಷ್ಟಿದ್ದಾರೆ. ಇಂಗ್ಲಿಷ್ ಮಾಧ್ಯಮದ ನರ್ಸರಿ ಸ್ಕೂಲ್‌ನಿಂದ, ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜ್ ಅಥವಾ ಇಂಟ-ರ್ ನ್ಯಾಷನಲ್ ಸ್ಕೂಲ್‌ಗಳಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಪರ್ಯಾಯ ಸರ್ಕಾರವೋ ಎಂಬಂತೆ ಕೆಲಸ ಮಾಡುವ ಸಂಸ್ಥೆಗಳಲ್ಲಿ ಅಂಥ ಕಾರ್ಯಕರ್ತರು ಸಿಗುವುದು ಸಾಮಾನ್ಯ. ಎರಡನೇ ಪ್ರಕಾರದ ಉದಾಹರಣೆಯಾಗಿ ಕೆಲಸ ಮಾಡುವ ಓರ್ವ ಟ್ರಸ್ಟಿನ ಕಾರ್ಯಕರ್ತ ಅನ್ನದಾನಿ. ಈತ ತನ್ನ ಹನ್ನೆರಡನೇ ವಯಸ್ಸಿನಲ್ಲಿ ಟ್ರಸ್ಟಿನ ಕರುಣಾ ಗೃಹದ ವಿದ್ಯಾರ್ಥಿಯಾಗಿ ಪ್ರವೇಶ ಪಡೆದ. ಈಗ ಅವನಿಗೆ ೪೦ ವರ್ಷ. ಸಂಸಾರಿ, ನಿವೇದಿತಾ ಎಂಬ ಒಂದು ಹೆಣ್ಣು ಮಗುವಿನ ತಂದೆ ಕೂಡ. ಈತ ಅಂಗವಿಕಲ ಎಂಬುದು ನಿಮಗೆ ಸೂಕ್ಷ್ಮವಾಗಿ ತಿಳಿದಿರಬಹುದು. ಟ್ರಸ್ಟಿನ ಕರುಣಾ ಗೃಹದಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡಿ ಹೊರ ಹೋಗಿರುವ ಮಕ್ಕಳ ಸಂಖ್ಯೆ ದೊಡ್ಡದಾಗಿಯೇ ಇದೆ. ಅವರಲ್ಲಿ ಅನೇಕರು ಒಳ್ಳೆಯ ಸ್ಥಿತಿಯಲ್ಲಿದ್ದಾರೆ. ಕುಬೇರರಾಗಿರದಿದ್ದರೂ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಮಧ್ಯಮ ವರ್ಗಕ್ಕಂತೂ ಸೇರಿದವರಾಗಿದ್ದಾರೆ. ಅವರಲ್ಲಿ ಬಹು ಪಾಲು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾಗಲೇ ತಮ್ಮ ಭವಿಷ್ಯ ಜೀವನದ ಬಗ್ಗೆ ಸಹಜವಾಗಿಯೇ ಆಲೋಚನೆ ಮಾಡುತ್ತಿದ್ದರು. ಅದರ ಫಲವಾಗಿ ಅವರಿಗೆ ಸದವಕಾಶ ದೊರೆತ ಕೂಡಲೇ ತಮ್ಮ ಜೀವನ ನಿರ್ವಹಣೆಯ ಕಾಯಕದಲ್ಲಿ ತೊಡಗಿಸಿಕೊಂಡರು. ಆದಾಗ್ಯೂ ಅವರು ತಮ್ಮ ಮಾತೃ ಸಂಸ್ಥೆಯಾದ ಜನಪದ ಸೇವಾ ಟ್ರಸ್ಟ್‌ನ್ನಾಗಲೀ, ಕರುಣಾಗೃಹವನ್ನಾಗಲೀ ಅಲ್ಲಿರುವ ಕಾರ್ಯಕರ್ತರನ್ನಾಗಲೀ ಮರೆತಿಲ್ಲ. ಆಗಾಗ್ಯೆ ತಮಗೆ ಅನುಕೂಲವಾದಾಗ ಟ್ರಸ್ಟಿಗೆ ಭೇಟಿ ಕೊಟ್ಟು ತಮ್ಮ ಅಭಿಮಾನವನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಆದರೆ ಅನ್ನದಾನಿ ವಿಶಿಷ್ಟ ಪ್ರಕಾರದ ವಿದ್ಯಾರ್ಥಿಯಾಗಿ ರೂಪುಗೊಂಡ. ಕೊಳ್ಳೇಗಾಲದ ತುಂಬ ಬಡ ಹಾಗೂ ದೊಡ್ಡ ಕುಟುಂಬದ ಮತ್ತು ಸಾಮಾಜಿಕವಾಗಿ ಹಿಂದುಳಿದ ಕುಟುಂಬದ ಹಿನ್ನೆಲೆಯಿಂದ ಬಂದಿದ್ದರೂ ಕೂಡ ಅವನಲ್ಲಿ ಮಹತ್ವಾಕಾಂಕ್ಷೆಯ ಗುಣಗಳು ಎಂದೂ ಕಂಡುಬರಲಿಲ್ಲ. ಬದಲಿಗೆ ಸೇವಾ ಭಾವನೆ ಮತ್ತು ಕಾರ್ಯನಿಷ್ಠೆ, ಪ್ರಾಮಾಣಿಕತೆ ಮುಂತಾದ ಗುಣಗಳೇ ರೂಪುಗೊಳ್ಳುತ್ತಾ ಬಂದವು. ಆದ್ದರಿಂದ

ಈತನು ಸಹಜವಾಗಿಯೇ ಟ್ರಸ್ಟಿನ ಕಾರ್ಯಕರ್ತನಾಗಿ ರೂಪುಗೊಂಡ. ಇದರಲ್ಲಿ ಯಾರ ಒತ್ತಡವೂ ಇರಲಿಲ್ಲ. ಎಲ್ಲವೂ ಸಹಜ ಮತ್ತು ಸ್ವಾಭಾವಿಕ. ಟ್ರಸ್ಟಿನ ಹತ್ತಾರು ಕಾರ್ಯಕ್ರಮಗಳಲ್ಲಿ ಯಾರ ಬಲವಂತವಿಲ್ಲದೆ ಸಹಜವಾಗಿ ಭಾಗವಹಿಸುತ್ತ ಬಂದಿದ್ದರಿಂದ ಅನೇಕ ಪ್ರಕಾರದ ಅನುಭವಗಳು ಅವನಿಗೆ ದೊರೆಯಲು ಸಾಧ್ಯವಾಯಿತು. ಪ್ರತಿಯೊಂದು ಅನುಭವವೂ ಹೊಸದು ಮತ್ತು ಬೋಧಪ್ರದ. ಹೊಸ ಅನುಭವ ಹೊಸ ಕರ್ತವ್ಯಕ್ಕೆ ದಾರಿ ಮಾಡಿಕೊಡುತ್ತಲಿತ್ತು. ಹೀಗೆ ಸಹಜವಾಗಿ ಬಂದ ಕರ್ತವ್ಯಗಳನ್ನು ಎಂದೂ ಉದಾಸೀನ ಮಾಡಿದವನಲ್ಲ. ಇದರಿಂದಾಗಿ ಸಂಸ್ಥೆಯ ವಿವಿಧ ಜವಾಬ್ದಾರಿಗಳ ನಿರ್ವಹಣೆಯು ದೊರೆಯುತ್ತಾ ಹೋಯಿತು. ಒಂದು ಸಂಸ್ಥೆಯ ಮುಖ್ಯಾಧಿಕಾರಿಯೋ, ವ್ಯವಸ್ಥಾಪಕನೋ ಆಗುವುದು ಸುಲಭ. ಆದರೆ ಆ ಸಂಸ್ಥೆಯ ಅತ್ಯಂತ ಸಾಮಾನ್ಯ ಕೆಲಸವನ್ನು ಅಂದರೆ ಕಸ ಗುಡಿಸುವುದು, ಪಾತ್ರೆ ತೊಳೆಯುವುದು, ಅಡಿಗೆಗೆ ಸಹಾಯ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡುವ ವ್ಯಕ್ತಿ ಸಿಗುವುದು ಕಷ್ಟ. ಗಾಂಧೀ ಮತ್ತು ವಿನೋಬಾರವರು ಹೇಳಿದ ಹಾಗೆ ಸೇವಕತ್ವದಲ್ಲಿ ಇರುವ ಶಕ್ತಿ ಮತ್ತೊಂದು ಕೆಲಸದಲ್ಲಿ ಇಲ್ಲ. ಈ ಮಾತು ಅನ್ನದಾನಿಗೆ ಅನ್ವಯಿಸುತ್ತದೆ. ಹೊಸ ತಲೆಮಾರಿನವರನ್ನು ನಂಬಬೇಕು, ಅವರು ಸಮಯ ಬಂದಾಗ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬಲ್ಲರು ಎಂಬುದಕ್ಕೆ ಉದಾಹರಣೆಯಾಗಿ ಕಳೆದ ಮಾಹೆಯ ಜನಪದ ನಿಲಯದ ಅಂತರಂಗದಲ್ಲಿ ಸಂತೋಷನ ಪ್ರಸ್ತಾಪ ಮಾಡಲಾಗಿತ್ತು. ಅಂಥದೇ ಒಂದು ಉದಾಹರಣೆಯಾಗಿ ಅನ್ನದಾನಿ. ಎಸ್.ಎಸ್. ಎಲ್.ಸಿ. ತೇರ್ಗಡೆಯಾದ ನಂತರ ಟ್ರಸ್ಟಿನಲ್ಲಿಯೇ ಉಳಿದುಕೊಂಡು ಚಿಕ್ಕ ಪುಟ್ಟ ಕೆಲಸಮಾಡುತ್ತಾ ಕ್ರಮೇಣ ಟ್ರಸ್ಟಿಗೆ ತನ್ನ ಉಪಯುಕ್ತತೆಯನ್ನು ಸಿದ್ಧಮಾಡಿಕೊಂಡಿರುವ ವ್ಯಕ್ತಿ ಅನ್ನದಾನಿ. ಈಗ ಅವನು ಟ್ರಸ್ಟಿನ ಲೆಕ್ಕ ಪತ್ರಗಳ ನಿರ್ವಹಣೆಯನ್ನು ಮಾಡುತ್ತಿದ್ದಾನೆ. ಪ್ರಾರಂಭದಲ್ಲಿ ಅವನಿಗೆ ಈ ವಿಷಯದ ಓನಾಮವೂ ಗೊತ್ತಿರಲಿಲ್ಲ. ಆದರೆ ವರ್ಷಗಳು ಉರುಳಿದಂತೆ ಮತ್ತು ಅದಕ್ಕೆ ತಕ್ಕಂತೆ ಟ್ರಸ್ಟಿನ ಲೆಕ್ಕ ಪತ್ರಗಳು ಆಡಿಟ್‌ಗೆ ಒಳಪಡುತ್ತ ಹೋದಂತೆ ಈತನೂ ಸಹ ಯಾವುದೇ ಪ್ರಮಾಣಪತ್ರವಿಲ್ಲದ ಓರ್ವ ಲೆಕ್ಕಿಗನಾಗಿ ಹೊರ ಹೊಮ್ಮಿದ. ಟ್ರಸ್ಟಿನ ಲೆಕ್ಕ ಪತ್ರಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವುದರ ಜೊತೆಗೆ ಪದವಿ ಪೂರ್ವ ಕಾಲೇಜ್‌ನಲ್ಲಿಯೂ ಲೆಕ್ಕ ಪತ್ರದ ನಿರ್ವಹಣೆ ಮಾಡುತ್ತಿದ್ದಾನೆ. ಲೆಕ್ಕ ಪತ್ರವನ್ನು ಇಡುವ ಈತನ ಅನುಭವವನ್ನು ಮೇಲುಕೋಟೆಯ ಒಂದು ಸಂಸ್ಥೆಯು ಉಪಯೋಗಿಸಿಕೊಂಡಿತು. ಕಾರ್ಯಕ್ಷಮತೆಯನ್ನು ಬೆಳೆಸಿಕೊಳ್ಳಲು ಸಿಗುವ ಅವಕಾಶಗಳೇ ನಿಜವಾದ ಶೈಕ್ಷಣಿಕ ಸಂಪನ್ಮೂಲಗಳಾಗಿವೆ. ಇದಕ್ಕೆ ಸಾಕ್ಷಿ ಅನ್ನದಾನಿ.

ಮುಗ್ಧತೆಯ ಕಾರಣದಿಂದ, ತನ್ನ ಗ್ರಾಮದಲ್ಲಿಯ ಓರ್ವ ಪಾದ್ರಿಯ ಸದುದ್ದೇಶದ ಕಾರಣದಿಂದ ಅನ್ನದಾನಿ ಆಂತೋಣಿಯಾಗಿರುವುದು ಅವನ ಜೀವನದಲ್ಲಿಯ ಸ್ವಾರಸ್ಯಕರವಾದ ಸಂಗತಿ, ಆದರೆ ಟ್ರಸ್ಟಿನ ಮಟ್ಟಿಗೆ ಮಾತ್ರ ಅನ್ನದಾನಿಯೆಂದರೂ ಒಂದೇ, ಅಂತೋಣಿಯೆಂದರೂ ಒಂದೇ. ಮುಖ್ಯ ಸಂಗತಿ, ಇವನೋರ್ವ ಟ್ರಸ್ಟಿನ ಉಪಯುಕ್ತ ಕಾರ್ಯಕರ್ತನೆಂಬುದು.

* * *

ಸರ್ವೋದಯ ಆಂದೋಲನದ ಮುನ್ನಡೆ

ದೇಶದ ಪ್ರಸ್ತುತ ಎಲ್ಲ ಕ್ಷೇತ್ರಗಳಲ್ಲಿಯ ಚಿಂತಾಜನಕ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಸರ್ವೋದಯ ಸಿದ್ಧಾಂತದ ಮೇರೆಗೆ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಸರ್ವೋದಯ ಆಂದೋಲನವನ್ನು ಹೇಗೆ ಚುರುಕುಗೊಳಿಸಬೇಕೆಂಬ ಚಿಂತನೆ ನಡೆಸಲು ಒಂದು ದಿನದ ವಿಚಾರ ಗೋಷ್ಠಿಯನ್ನು ಮಂಡ್ಯ ನಗರದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು ೩೦ಜನ ಭಾಗವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸರ್ವೋದಯ ನಾಯಕರಾದ ಹೆಚ್. ಎಸ್. ದೊರೆಸ್ವಾಮಿ ನೆರವೇರಿಸಿದರು. ಕರ್ನಾಟಕ ಸರ್ವೋದಯ ಮಂಡಲಿಯ ಅಧ್ಯಕ್ಷರಾದ ಶ್ರೀ ಸುರೇಂದ್ರ ಕೌಲಗಿಯವರು ಪ್ರಾಸ್ತಾವಿಕ ವಿಚಾರಗಳನ್ನು ಮಂಡಿಸಿದರು. ಸರ್ವೋದಯ ಆಂದೋಲನವನ್ನು ಬಲಪಡಿಸಬೇಕು ಮತ್ತು ಯುವಕರನ್ನು ಆಂದೋಲನದೆಡೆ ಆಕರ್ಷಿಸುವ ಬಗ್ಗೆ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಎಲ್ಲರ ಅಭಿಪ್ರಾಯವಾಗಿತ್ತು. ಈ ಸಂಬಂಧವಾಗಿ ಅನೇಕ ರಚನಾತ್ಮಕ ಸಲಹೆಗಳು ಗೋಷ್ಠಿಯಲ್ಲಿ ಮಂಡಿತವಾದವು. ಈ ಪ್ರಕಾರದ ಚಿಂತನ ಗೋಷ್ಠಿಗಳನ್ನು ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನಡೆಸಬೇಕೆಂಬ ಅಭಿಪ್ರಾಯ ಕೂಡ ಮೂಡಿಬಂತು. ಸರ್ವೋದಯ ಮಂಡಲಿಯ ಯುವ ವಿಭಾಗದ ಸಂಯೋಜಕರಾದ ಡಾ॥ಹೆಚ್. ಎಸ್. ಸುರೇಶ್, ಮಂಡಲಿಯ ಕಾರ್ಯದರ್ಶಿ ಲ. ನರಸಿಂಹಯ್ಯನವರೂ ಸಹ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಈ ಗೋಷ್ಠಿಯ ಆಯೋಜನೆಯನ್ನು ಮಂಡ್ಯ ನಗರದ ಸರ್ವೋದಯ ವಿಚಾರಪ್ರೇಮಿಗಳಾದ ಡಾ॥ ಅರ್ಜುನಪುರಿ ಅಪ್ಪಾಜಿ ಗೌಡ, ಸಾಹಿತಿ ತೈಲೂರು ವೆಂಕಟಕೃಷ್ಣ, ಸಂಸ್ಕೃತಿ ಸಂಘದ ಕೆ. ಪ್ರಹ್ಲಾದ ರಾವ್ ಗಾಂಧೀ ಭವನದ ಲಿಂಗಣ್ಣ ಬಂದೂರ್ಕಾರ್ ಈ ಗೋಷ್ಠಿಯನ್ನು ಆಯೋಜಿಸಿದ್ದರು.

ಸರ್ವೋದಯ ಆಂದೋಲನ ವಿಚಾರದ ಪ್ರಚಾರಕ್ಕಾಗಿ ಸಾಹಿತ್ಯ ಪ್ರಕಟಣೆಯ ಕಾರ್ಯ ಕಳೆದ ೬೦ ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದೆ. ಈ ಕಾರ್ಯವನ್ನು ಸರ್ವ ಸೇವಾ ಸಂಘ ನಡೆಸಿಕೊಂಡು ಬರುತ್ತಿದೆ. ಈ ವರ್ಷ ೪೯ ಲಕ್ಷ ರೂಪಾಯಿಗಳ ಸರ್ವೋದಯ ಸಾಹಿತ್ಯ ಮಾರಾಟವಾಗಿದೆ. ಸಾಹಿತ್ಯದ ಮಾರಾಟದ ವ್ಯವಸ್ಥೆಗಾಗಿ ದೇಶದ ಅನೇಕ ಪ್ರಮುಖ ರೈಲ್ವೇ ನಿಲ್ದಾಣಗಳಲ್ಲಿ ಪುಸ್ತಕ ಭಾಂಡಾರ ತೆರೆಯಲಾಗಿದೆ. ಅಲ್ಲದೆ ಅಶೋಕ್ ಭಾರತ್, ಹೈದರ್ ಮತ್ತು ಮಿಥಿಲೇಶ್‌ರವರಂಥ ಯುವಕರು ಸಾಹಿತ್ಯ ಮಾರಾಟಕ್ಕಾಗಿ ವಿಶೇಷವಾಗಿ ಶ್ರಮಿಸಿದ್ದಾರೆ. ತಮಿಳುನಾಡು ಸರ್ವೋದಯ ಮಂಡಲದ ಶ್ರೀ ಅಣ್ಣಾಮಲೈ ಒಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಸಾಹಿತ್ಯ ಮಾರಿದ್ದಾರೆ. ಅಂತೆಯೇ ಆಂಧ್ರ ಪ್ರದೇಶದ ಸರ್ವೋದಯ ಮಂಡಲಿಯ ಪ್ರಸಾದ್‌ರವರೊಬ್ಬರೇ ಇಪ್ಪತ್ತು ಸಾವಿರ ರೂಪಾಯಿಯ ಸಾಹಿತ್ಯ ಮಾರಿದ್ದಾರೆ. ಅಲ್ಲದೇ ಹರಿಯಾಣದ ಮಹಾವೀರ ತ್ಯಾಗಿಯಂಥ ಲೋಕ ಸೇವಕರು ೩೦ ಲಕ್ಷ ರೂಪಾಯಿಗಿಂತ ಹೆಚ್ಚು ಸಾಹಿತ್ಯ ಮಾರಿದ್ದಾರೆ. ಸರ್ವೋದಯ ಡೈರಿಯ ಮಾರಾಟ ಮೂರು ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಆಗಿದೆ. ಈ ವರ್ಷ ೫೮ ಪುಸ್ತಕಗಳ ಪುನರ್ ಮುದ್ರಣವಾಗಿದೆ ಮತ್ತು ೯ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗಿದೆ.

* * *

ಖಾದಿ ವಿಚಾರ

ಕರ್ನಾಟಕ ರಾಜ್ಯದ ಮಟ್ಟಿಗೆ ಶ್ರೀ ಹೆಚ್. ಆರ್. ವೆಂಕಟರಮಣ ಅಯ್ಯರ್ ಖಾದಿಯ ವಿಚಾರಕ್ಕೆ ಪರ್ಯಾಯ ಹೆಸರಾಗಿದ್ದಾರೆ. ಅಯ್ಯರ್‌ರವರು ೧೯೧೧ ಜೂನ್ ೧೧ರಂದು ಜನಿಸಿದ್ದರು. ಅವರು ತಮ್ಮ ಚಿಕ್ಕ ವಯಸ್ಸಿನಿಂದಲೇ ರಾಷ್ಟ್ರೀಯ ನಾಯಕರ ಪ್ರಭಾವಕ್ಕೆ ಒಳಗಾಗಿ ತಮ್ಮ ಜೀವನವನ್ನು ದೇಶ ಸೇವೆಗಾಗಿ ಅರ್ಪಿಸಿಕೊಂಡರು. ತಮ್ಮ ದೇಶ ಸವೆಗೆ ಅವರು ಆಯ್ದುಕೊಂಡ ಮಾಧ್ಯಮ ಖಾದಿ. ಅಯ್ಯರ್‌ರವರು ಗಾಂಧೀಯವರ ವಿಚಾರದಿಂದ ಹಾಗೂ ಅವರ ಶಿಷ್ಯರಾಗಿದ್ದ ಗಂಗಾಧರರಾವ್ ದೇಶಪಾಂಡೆಯವರಿಂದ ಪ್ರಭಾವಿತರಾಗಿ ತಮ್ಮ ಜೀವನವನ್ನೇ ಖಾದಿ ಕೆಲಸಕ್ಕಾಗಿ ಮುಡಿಪಾಗಿಟ್ಟರು. ಖಾದಿ ವಿಚಾರ ಮತ್ತು ಖಾದಿ ಅಭಿಮಾನ ಅವರ ಧಮನಿಗಳಲ್ಲಿ ಹರಿಯಲಾರಂಭಿಸಿತು. ಖಾದಿಯೇ ಅವರ ಪ್ರಾಣ ಮತ್ತು ತ್ರಾಣವಾಯಿತು. ಖಾದಿ ಕ್ಷೇತ್ರದಲ್ಲಿ ಎಂಥ ಕಷ್ಟಗಳು ಬಂದರೂ, ನಿರಾಶೆಯ ವಾತಾವರಣ ಉಂಟಾದರೂ ಧೃತಿಗೆಡದ ಖಾದಿ ವೀರರು. ೧೯೩೩ನೇ ಇಸವಿಯಲ್ಲಿ ಬೆಂಗಳೂರಿನ ಕೋಟೆ ಖಾದಿ ವಸ್ತ್ರಾಲಯದಲ್ಲಿ ಸಹಯಕ ವ್ಯವಸ್ಥಾಪಕರಾಗಿ ಕೆಲಸ ಮಾಡಲು ಆರಂಭಿಸಿದರು. ವ್ಯವಸ್ಥಾಪಕರಾಗಿ ಕನ್ನಡದ ಸುಪ್ರಸಿದ್ಧ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕೆಲಸ ಮಾಡುತ್ತಿದ್ದರು. ಅಯ್ಯರ್‌ರವರ ಖಾದಿ ಕುರಿತಾದ ದುಡಿಮೆಯ ಬಗ್ಗೆ ಗೊರೂರರು ಈ ರೀತಿ ಹಾಸ್ಯ ಮಾಡಿದರು 'ಯಾವ ಕಷ್ಟಕ್ಕೂ ಜಗ್ಗದ ಗಟ್ಟಿ ಪಿಂಡ, ಕಾಲು ನಡಿಗೆಯಿಂದಲೇ ಎಲ್ಲ ಖಾದಿ ಕೇಂದ್ರಗಳಿಗೆ ಹೋಗಿ ಬಂದವರು. ಬೆಂಗಳೂರು ವಸ್ತ್ರಾಲಯಕ್ಕೂ ಸಹ ಅದೇರೀತಿ ನಡೆದು ಬಂದಿರುವರು. ಹೀಗಾಗಿ ಅವರ ಕಾಲಿನ ಪದರವೆಲ್ಲ ಸವೆದು ಹೋಗಿದೆ". ಆಗ ಅಯ್ಯರ್‌ರವರ ವೇತನ ೩೦ ರೂಪಾಯಿ. ಇಂತಹ ಒಬ್ಬ ಸಾಮಾನ್ಯ ಆದರೆ ಅದ್ವಿತೀಯ ಖಾದಿ ಪ್ರೇಮಿ ಕ್ರಮೇಣ ಬೆಳೆಯುತ್ತ ಬಂದು ಕರ್ನಾಟಕ ರಾಜ್ಯಕ್ಕೆ ಮಾದರಿಯಾಗಿರುವಂಥ "ಕರ್ನಾಟಕ ಸರ್ವೋದಯ ಸಂಘ" ಸ್ಥಾಪಿಸಿದರು. ಈ ಸಂಘದ ಆಶ್ರಯದಲ್ಲಿ ೧೯೯೯ರಲ್ಲಿ ೮೦೦ಕ್ಕೂ ಹೆಚ್ಚು ಜನರು ಖಾದಿ ಉದ್ಯಮದಲ್ಲಿ ತೊಡಗಿದ್ದರು. ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿ ಹಳ್ಳಿ, ಚಿಕ್ಕ ಜಾಜೂರು ಮತ್ತು ನಂಜನಗೂಡಿನ ಬಳಿಯ ಬದನವಾಳು ಗ್ರಾಮದಲ್ಲಿ ಖಾದಿ ಉತ್ಪತ್ತಿ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ನಾಲ್ಕೈದು ಖಾದಿ ಭಾಂಡಾರ ನಡೆಸಲಾಗುತ್ತಿದೆ. ಈ ಸಂಘಕ್ಕೆ ಅಯ್ಯರ್‌ರವರು ಒಳ್ಳೆಯ ಮಾರ್ಗದರ್ಶನ ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಸಂಘವು ಕಳೆದ ೫೦ವರ್ಷಗಳಿಂದ ಶಿಸ್ತು ಬದ್ಧವಾಗಿ, ಖಾದಿ ವಿಚಾರದ ಮೂಲ ಉದ್ದೇಶಗಳಿಗೆ ಅನುಗುಣವಾಗಿ ಮತ್ತು ಪಾರದರ್ಶಕವಾಗಿ ನಡೆದುಕೊಂಡು ಬರುತ್ತಿದೆ. ಸಂಘದ ಲೆಕ್ಕ ಪತ್ರಗಳನ್ನು ಸ್ವಚ್ಛ ಕನ್ನಡಿಯಂತೆ ಇರಿಸಲಾಗಿದೆ. ಸಂಘವು ತನ್ನ ಜನ್ಮದಾತ ವೆಂಕಟರಮಣ ಅಯ್ಯರ್‌ರವರ ನೂರನೇ ವರ್ಷವನ್ನು ಆಚರಿಸುವ ಸಂದರ್ಭದಲ್ಲಿ ಖಾದಿ ಗ್ರಾಮೋದ್ಯೋಗ ಆಯೋಗವು ಸಂಘವನ್ನು ಏಷಿಯಾ ಅಭಿವೃದ್ಧಿ ಬ್ಯಾಂಕಿನ ಪ್ರೋತ್ಸಾಹ ಧನಕ್ಕಾಗಿ ಶಿಫಾರಸ್ಸು ಮಾಡಿರುವುದು ಅಯ್ಯರ್‌ರವರ ಖಾದಿ ನಿಷ್ಠೆ, ತ್ಯಾಗ ಮತ್ತು ಶ್ರದ್ಧೆಯ ದ್ಯೋತಕವಾಗಿದೆ. ಜೂನ್ ೨೦ರಂದು ನಡೆಯಲಿರುವ ಅಯ್ಯರ್‌ರವರ ನೂರನೇ ಜನ್ಮದಿನೋತ್ಸವ ಇಂದಿನ ಖಾದಿ ಕ್ಷೇತ್ರದ ಅಂಧಕಾರವನ್ನು ದೂರ ಮಾಡುವ ರವಿಯಾಗಿ ಪರಿಣಮಿಸಲಿ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ ರಂಗಮಣಿ ಜನಾರ್ಧನ್; ಕರ್ನಾಟಕ ಸರ್ವೋದಯ ಸಂಘ ಮತ್ತು
ಶ್ರೀ ಎಂ.ದೇವೇಂದ್ರ ಬಾಬು - ಬೆಂಗಳೂರು
ಶ್ರೀ ಕೆ.ಟಿ.ವೀರಪ್ಪ; ಶ್ರೀ ಶಶಿಧರ್ ಕಾಶ್ಯಪ್; ಶ್ರೀಮತಿ ವೈದೇಹಿ - ಮೈಸೂರು
ಶ್ರೀ ಎಚ್.ಎಸ್.ಎಸ್.ರಾವ್ - ಮಣಿಪಾಲ್
ಶ್ರೀ ರಮೇಶ್ ಕುಲಾಲ್ - ಮುಂಬಯಿ
ಶ್ರೀ ವಿ.ವೆಂಕಟರಾಮೇಗೌಡರು - ಮೇಲುಕೋಟೆ
ರಾಷ್ಟ್ರೋತ್ಥಾನ ಬಳಗ - ಮಂಡ್ಯ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಎಚ್.ಎಸ್.ರೇಣುಕಾಪ್ರಸಾದ್ - ಬೆಂಗಳೂರು,
ಶ್ರೀ ಬಿ.ಕೆ.ಶಿವಣ್ಣ - ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. -ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.